## ಅಧ್ಯಾಯ 11

# ನಂಬಿಕೆಯಿಂದ ನೀತಿವಂತರೆಂಬ ನಿರ್ಣಯವು ದೇವರ ನಂಬಿಗಸ್ತಿಕೆಯೊಂದಿಗೆ ಸಂಧಾನಗೊಳಿಸಿತು

10ನೇ ಅಧ್ಯಾಯದಲ್ಲಿ, ಪೌಲನು ಬಹುಪಾಳು ಯೆಹೂದ್ಯರ ಆತ್ಮೀಕ ಸ್ಥಿತಿಯ ಬಗ್ಗೆ ಸರಳವಾದ ರೀತಿಯಲ್ಲಿ ಮಾತಾಡುತ್ತಾನೆ. 1 ಮತ್ತು 2 ವಚನಗಳಲ್ಲಿ, ಆತನು "ಸಹೋದರರೇ, ಇಸ್ರಾಯೇಲ್ಯರು ರಕ್ಷಣೆ ಹೊಂದಬೇಕೆಂಬುದೇ ನನ್ನ ಮನೋಭಿಲಾಷೆಯೂ ದೇವರಿಗೆ ನಾನು ಮಾಡುವ ವಿಜ್ಞಾಪನೆಯೂ ಆಗಿದೆ. ದೇವರಲ್ಲಿ ಆಸಕ್ತರಾಗಿದ್ದಾರೆಂದು ನಾನು ಅವರ ವಿಷಯದಲ್ಲಿ ಸಾಕ್ಷಿಕೊಡುತ್ತೇನೆ; ಆದರೂ ಅವರ ಆಸಕ್ತಿ ಜ್ಞಾನಾನುಸಾರವಾದದ್ದಲ್ಲ" ಎಂದು ಹೇಳುತ್ತಾನೆ. ಆತನು "ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು" ಎಂಬುದನ್ನು ಒತ್ತಿ ಹೇಳಿದನು (10:9). ಹೇಗೂ, ಬಹುತೇಕ ಯೆಹೂದ್ಯರು ಯೇಸುವಿನಲ್ಲಿ ನಂಬಿಕೆ *ಇಟ್ಟಿರಲಿಲ್ಲ*, ಮತ್ತು ಅವರು ಆತನನ್ನು ಅರಿಕೆ ಮಾಡುವದಕ್ಕೆ ನಿರಾಕರಿಸಿದರು. ಯೆಹೂದ್ಯರನ್ನು "ಅವಿಧೇಯರಾಗಿ ಎದುರುಮಾತಾಡುವ ಜನರು" ಎಂದು ಬಣ್ಣಿಸುವ ಯೆಶಾಯನ ಪುಸ್ತಕದ ಒಂದು ಉಲ್ಲೇಖದೊಂದಿಗೆ ಅಧ್ಯಾಯವು ಅಂತ್ಯಗೊಳ್ಳುತ್ತದೆ (10:21). ದೇವರು ಯೆಹೂದ್ಯರನ್ನು ಕೈಬಿಟ್ಟುಬಿಟ್ಟಿದ್ದನೆಂದು, ಆತನಿಗೆ ಒಂದು ಕಾಲದಲ್ಲಿ ತನ್ನ ಒಡಂಬಡಿಕೆಯ ಜನರಾಗಿದ್ದವರಲ್ಲಿ ಈಗ ಯಾವದೇ ಆಸಕ್ತಿಯಿರುವದಿಲ್ಲ ಎಂದು ಪೌಲನು ಅಭಿಪ್ರಾಯ ಪಡುತ್ತಿದ್ದಾನೋ? ಆ ಪ್ರಶ್ನೆಗೆ 11ನೇ ಅಧ್ಯಾಯದಲ್ಲಿ ಉತ್ತರಿಸಲಾಗಿರುತ್ತದೆ.

ದೇವರ ಕಾಳಜಿಯ ಕುರಿತ ಪ್ರಶ್ನೆಯು ರೋಮಾ 9-11 ಅಧ್ಯಾಯಗಳಲ್ಲಿ ಚರ್ಚೆಯಲ್ಲಿರುವ ಪರಿಸ್ಥಿತಿಗಳನ್ನು ಮೀರಿ ಬಹಳ ದೂರದ ವರೆಗೂ ಪರಿಣಾಮಗಳನ್ನು ಹೊಂದಿರುತ್ತದೆ. ಜನರು ಈಗಲೂ ಕಳೆದುಹೋಗಿದ್ದಾರೆ. ಕೆಲವರಿಗೆ ಆಸಕ್ತಿ (ಶ್ರದ್ಧೆ) ಇರುತ್ತದೆ,

ಆದರೆ ತಿಳುವಳಿಕೆಯನುಸಾರ ಇರುವದಿಲ್ಲ. ಅನೇಕರು ನಂಬುವದಿಲ್ಲ ಮತ್ತು ಅರಿಕೆ ಮಾಡಲು ವಿಫಲರಾಗುತ್ತಾರೆ. "ಅವಿಧೇಯರು" ಮತ್ತು "ಎದುರುಮಾತಾಡುವವರು" ಎಂಬುದು ಈಗಲೂ ಪಾಪಭರಿತ ಲೋಕಕ್ಕೆ ತಕ್ಕದಾದ ಹೆಸರುಗಳಾಗಿವೆ. ದೇವರು ಇಂದು ಪಾಪಿಗಳನ್ನು ತ್ಯಜಿಸಿ ಬಿಟ್ಟಿದ್ದಾನೋ? ದೇವರು ನಿಮ್ಮ ಯಾವದೇ ಸ್ನೇಹಿತರನ್ನು, ಕುಟುಂಬದವರನ್ನು, ಅಥವಾ ನೆರೆಯವರನ್ನು ತ್ಯಜಿಸಿ ಬಿಟ್ಟಿದ್ದಾನೋ? ದೇವರು ನಿಮ್ಮನ್ನು ತ್ಯಜಿಸಿ ಬಿಟ್ಟಿದ್ದಾನೋ? ಈ ಪ್ರಶ್ನೆಗಳಿಗೆ ನಿತ್ಯತ್ವದ ಪರಿಣಾಮಗಳನ್ನು ಹೊಂದಿರುತ್ತವೆ.

## ಯೆಹೂದ್ಯರು ದೇವರಿಂದ ತಿರಸ್ಕರಿಸಲ್ಪಟ್ಟಿಲ್ಲ (11:1-6)

**[1]ಹಾಗಾದರೆ ದೇವರು ತನ್ನ ಪ್ರಜೆಯನ್ನು ಬೇಡವೆಂದು ತಳ್ಳಿಬಿಟ್ಟದ್ದುಂಟೇ ಎಂದು ಕೇಳುತ್ತೇನೆ. ಎಂದಿಗೂ ಇಲ್ಲ. ನಾನು ಸಹ ಇಸ್ರಾಯೇಲ್ಯನು, ಅಬ್ರಹಾಮನ ಸಂತತಿಯವನು, ಬೆನ್ಯಾಮೀನನ ಕುಲದವನು ಆಗಿದ್ದೇನಲ್ಲಾ. [2]ದೇವರು ತಾನು ಮುಂದಾಗಿ ತನ್ನ ಜನರಾಗುವದಕ್ಕೆ ಗೊತ್ತುಮಾಡಿಕೊಂಡಿದ್ದ ಪ್ರಜೆಯನ್ನು ತಳ್ಳಿ ಬಿಡಲಿಲ್ಲ. ಎಲೀಯನ ಚರಿತ್ರೆಯಲ್ಲಿ ಶಾಸ್ತ್ರವು ಹೇಳುವ ಮಾತು ನಿಮಗೆ ತಿಳಿಯದೋ? [3]ಅವನು ದೇವರ ಮುಂದೆ – ಕರ್ತನೇ, ಅವರು ನಿನ್ನ ಪ್ರವಾದಿಗಳನ್ನು ಸಂಹರಿಸಿದ್ದಾರೆ, ನಿನ್ನ ಯಜ್ಞವೇದಿಗಳನ್ನು ಒಡೆದುಹಾಕಿದ್ದಾರೆ, ನಾನೊಬ್ಬನೇ ಉಳಿದಿದ್ದೇನೆ, ನನ್ನ ಪ್ರಾಣವನ್ನೂ ತೆಗೆಯಬೇಕೆಂದಿದ್ದಾರೆ ಎಂದು [4]ಇಸ್ರಾಯೇಲ್ಯರ ಮೇಲೆ ದೂರು ಹೇಳಿದ್ದಕ್ಕೆ ದೇವರ ಉತ್ತರವೇನಂದರೆ–ಬಾಳನ ವಿಗ್ರಹಕ್ಕೆ ಅಡ್ಡ ಬೀಳದೆ ಇರುವ ಏಳುಸಾವಿರ ಪುರುಷರನ್ನು ನನಗಾಗಿ ಉಳಿಸಿಕೊಂಡಿದ್ದೇನೆ ಎಂಬದೇ. [5]ಅದರಂತೆ ಈಗಿನ ಕಾಲದಲ್ಲಿಯೂ ದೇವರು ಕೃಪೆಯಿಂದ ಆದುಕೊಂಡವರಾದ ಕೆಲವರು ಉಳಿದಿದ್ದಾರೆ. [6]ಕೃಪೆಯಿಂದ ಆದುಕೊಂಡನು ಅಂದ ಮೇಲೆ ಪುಣ್ಯಕ್ರಿಯೆಗಳ ಕಾರಣದಿಂದ ಆದುಕೊಳ್ಳಲಿಲ್ಲವಷ್ಟೆ; ಹಾಗಲ್ಲದ ಪಕ್ಷಕ್ಕೆ ಕೃಪೆಯನ್ನು ಇನ್ನು ಕೃಪೆಯೆನ್ನುವದಕ್ಕಾಗುವದಿಲ್ಲ.**

**ವಚನ 1.** ಪೌಲನು LXXನ ಕೀರ್ತನೆ 94:14ರಲ್ಲಿನ ಮಾತುಗಳನ್ನು ಪ್ರತಿಧ್ವನಿಸುವ ಒಂದು ಪ್ರಶ್ನೆಯೊಂದಿಗೆ ಆರಂಭಿಸುತ್ತಾನೆ: **ಹಾಗಾದರೆ ದೇವರು ತನ್ನ ಪ್ರಜೆಯನ್ನು ಬೇಡವೆಂದು ತಳ್ಳಿಬಿಟ್ಟದ್ದುಂಟೇ? ಎಂದು ಕೇಳುತ್ತೇನೆ.** ಸನ್ನಿವೇಶದಲ್ಲಿ, "ತನ್ನ ಪ್ರಜೆಯನ್ನು" ಎಂಬುದು ಇಸ್ರಾಯೇಲ್ಯರನ್ನು ಸೂಚಿಸುತ್ತದೆ. ಪೌಲನು ಪ್ರಶ್ನೆಯ ಬಳಿಕ ಆಘಾತಗೊಂಡ ಸ್ವರದಲ್ಲಿ **ಎಂದಿಗೂ ಇಲ್ಲ** ಎಂದು ಸೇರಿಸುತ್ತಾನೆ. 2ನೇ ವಚನದಲ್ಲಿ, ಆತನು ಹೀಗೆ ಹೇಳಿದನು, "ದೇವರು ತಾನು ಮುಂದಾಗಿ ತನ್ನ ಜನರಾಗುವದಕ್ಕೆ ಗೊತ್ತುಮಾಡಿಕೊಂಡಿದ್ದ ಪ್ರಜೆಯನ್ನು ತಳ್ಳಿ ಬಿಡ*ಲಿಲ್ಲ*" (ಒತ್ತಿ ಹೇಳಿದ್ದು ನನ್ನದು).

ದೇವರು ಇಸ್ರಾಯೇಲ್ಯರನ್ನು ತಿರಸ್ಕರಿಸಿಲ್ಲ ಎಂಬುದನ್ನು ಪೌಲನು ದೃಢಪಡಿಸುತ್ತಾನೆ—ಆದರೆ, ಅಧ್ಯಾಯದ ನಂತರದ ಭಾಗದಲ್ಲಿ, ಆತನು ತನ್ನ "ಸ್ವಜನರ" ಬಗ್ಗೆ ಮತ್ತು ಅವರನ್ನು "ತಳ್ಳುವದರಿಂದ" ಎಂಬ ಬಗ್ಗೆ ಮಾತಾಡಿದನು (11:14, 15). ಎರಡು ಸಮರ್ಥನೆಗಳು ಖಂಡಿತವಾಗಿಯೂ ಒಂದಕ್ಕೊಂದು ತದ್ವಿರುದ್ಧವೆಂದು ತೋರುತ್ತವೆ: ದೇವರು ಇಸ್ರಾಯೇಲ್ಯರನ್ನು ತಳ್ಳಿ ಬಿಡ*ಲಿಲ್ಲ* . . . ದೇವರು ಇಸ್ರಾಯೇಲ್ಯರನ್ನು ತಳ್ಳಿ ಬಿಟ್ಟಿ*ದ್ದಾನೆ*. ಈ ಎರಡು ವಿಚಾರಗಳನ್ನು ನಾವು ಹೇಗೆ ಸಂಧಾನಗೊಳಿಸಬಲ್ಲೆವು? ನಾವು

ಪುನಃ 9:6ರಲ್ಲಿನ ಅಪೊಸ್ತಲನ ಹೇಳಿಕೆಯ ಕಡೆಗೆ ಸಾಗೋಣ: "ಯಾಕೆಂದರೆ ಇಸ್ರಾಯೇಲ್ ವಂಶದಲ್ಲಿ ಹುಟ್ಟಿದವರೆಲ್ಲರೂ ಇಸ್ರಾಯೇಲ್ಯರಲ್ಲ." ಈ ಉಪದೇಶವನ್ನು ಒಂದು ದೊಡ್ಡ ವೃತ್ತದೊಳಗೆ ಇನ್ನೊಂದು ಚಿಕ್ಕ ವೃತ್ತ ಇರುವಂತೆ ರೇಖಾಚಿತ್ರಗೊಳಿಸಬಹುದು.

ದೇವರು ಬಹುಪಾಲು ಇಸ್ರಾಯೇಲ್ಯರನ್ನು ತಿರಸ್ಕರಿಸಿದ್ದನು (ದೊಡ್ಡ ವೃತ್ತ), ಆದರೆ ಯೇಸುವಿನಲ್ಲಿ ನಂಬಿಕೆಯಿಟ್ಟ ಯೆಹೂದ್ಯರನ್ನು ಆತನು ತಿರಸ್ಕರಿಸಿರಲಿಲ್ಲ (ಚಿಕ್ಕ ವೃತ್ತ). ನಾವು 11ನೇ ಅಧ್ಯಾಯದ ಅಧ್ಯಯನವನ್ನು ಮಾಡುತ್ತಿರುವ ಹಾಗೆ ಈ ವ್ಯತ್ಯಾಸವನ್ನು ಮನಸ್ಸಿನಲ್ಲಿಟ್ಟುಕೊಳ್ಳತಕ್ಕದ್ದು. ಈ ಅಧ್ಯಾಯದಲ್ಲಿ, ಯೇಸುವನ್ನು ಅಂಗೀಕರಿಸಿಕೊಂಡಿರುವ ಯೆಹೂದ್ಯರನ್ನು ದೇವರ "ಪ್ರಜೆ" (11:1), "ಆತನು ಮುಂದಾಗಿ . . . ಗೊತ್ತುಮಾಡಿಕೊಂಡಿದ್ದ ಪ್ರಜೆ" (11:2), ಮತ್ತು "ಆಯಲ್ಪಟ್ಟವರಿಗೆ" (11:7) ಎಂದು ಕರೆಯಲ್ಪಟ್ಟಿದ್ದಾರೆ.

ದೇವರು ಇಸ್ರಾಯೇಲ್ ಜನಾಂಗವನ್ನು ತ್ಯಜಿಸಿಲ್ಲವೆಂಬುದಕ್ಕೆ ಪುರಾವೆಯಾಗಿ, ಪೌಲನು ತನ್ನನ್ನು ತೋರಿಸಿಕೊಳ್ಳುತ್ತಾನೆ:[1] **ನಾನು ಸಹ ಇಸ್ರಾಯೇಲ್ಯನು, ಅಬ್ರಹಾಮನ ಸಂತತಿಯವನು, ಬೆನ್ಯಾಮೀನನ ಕುಲದವನು ಆಗಿದ್ದೇನಲ್ಲಾ** (ನೋಡಿರಿ ಫಿಲಿಪ್ಪಿ 3:5). ಪೌಲನು "ಇಸ್ರಾಯೇಲ್ಯರೊಳಗಿನ ಇಸ್ರಾಯೇಲ್ಯರಲ್ಲಿ" ಒಬ್ಬನಾಗಿದ್ದನು: ಯೇಸುವನ್ನು ಮೆಸ್ಸೀಯನೆಂದು ಅಂಗೀಕರಿಸಿದ್ದ ಯೆಹೂದ್ಯರು.

**ವಚನಗಳು 2, 3.** ಪೌಲನು ದೇವರಿಂದ ಅಂಗೀಕರಿಸಲ್ಪಟ್ಟಿದ್ದ ಯೆಹೂದ್ಯನಾಗಿದ್ದನಾದ್ದರಿಂದ, ಆತನು ಈ ನಿರ್ಣಯಕ್ಕೆ ಬರುವದಕ್ಕೆ ಶಕ್ತನಾದನು, **ದೇವರು ತಾನು ಮುಂದಾಗಿ . . . ಗೊತ್ತುಮಾಡಿಕೊಂಡಿದ್ದ ಪ್ರಜೆಯನ್ನು ತಳ್ಳಿ ಬಿಡಲಿಲ್ಲ.** ಈ ಮುಂಚೆ ಚರ್ಚಿಸಿದ ಪ್ರಕಾರ, ದೇವರ ಮುಂದಾಗಿ ಗೊತ್ತುಮಾಡುವಿಕೆಯು ಮನುಷ್ಯನಿಗಿರುವ ಸ್ವೇಚ್ಛಾ-ಚಿತ್ತವನ್ನು ರದ್ದುಗೊಳಿಸುವದಿಲ್ಲ (8:29, 30ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ದೇವರು ಯಾರನ್ನು "ಮುಂದಾಗಿ ಗೊತ್ತು ಮಾಡಿಕೊಂಡಿದ್ದ" ನೋ ಅವರು ನಂಬಿಕೆಯ ಮೂಲಕ (1:16) ಸುವಾರ್ತೆಯ ಕರೆಗೆ ಓಗೊಟ್ಟವರೇ ಆಗಿದ್ದಾರೆ (2 ಥೆಸಲೋನಿಕ 2:14) ಮತ್ತು ನೀತಿವಂತರೆಂದು ನಿರ್ಣಯಿಸಲ್ಪಟ್ಟವರಾಗಿದ್ದಾರೆ (5:1). ದೇವರು ಈ ಅರ್ಹತೆಗಳುಳ್ಳ ಯಾವೊಬ್ಬ ಯೆಹೂದ್ಯನನ್ನೂ ತಿರಸ್ಕರಿಸಿರಲಿಲ್ಲ.

ಬಹುತೇಕ ಯೆಹೂದ್ಯರು ಆ ಅರ್ಹತೆಗಳನ್ನು ನೆರವೇರಿಸಿರಲಿಲ್ಲ—ಆದರೆ ಅದು ಆಶ್ಚರ್ಯಕರವೇನೂ ಆಗಿರಬಾರದಿತ್ತು ಯಾಕೆಂದರೆ, ಇಸ್ರಾಯೇಲ್ಯರ ಚರಿತ್ರೆಯುದ್ದಕ್ಕೂ, ಯೆಹೂದ್ಯ ಜನಾಂಗದಲ್ಲಿ ಕೇಲವೇ ಕೆಲವು ಸಂಖ್ಯೆಯವರು ಮಾತ್ರವೇ ದೇವರನ್ನು ನಿಜವಾಗಿಯೂ ಹಿಂಬಾಲಿಸಿದ್ದರು. ಹಳೆ ಒಡಂಬಡಿಕೆಯ ಪರಿಚಿತವಾದ ಚರಿತ್ರೆಯೊಂದರಲ್ಲಿ ಅದೇ ವಿಷಯವನ್ನು ಕಾಣುತ್ತೇವೆ.

> **ಎಲೀಯನ ಚರಿತ್ರೆಯಲ್ಲಿ ಶಾಸ್ತ್ರವು ಹೇಳುವ ಮಾತು ನಿಮಗೆ ತಿಳಿಯದೋ? 3ಅವನು ದೇವರ ಮುಂದೆ—ಕರ್ತನೇ, ಅವರು ನಿನ್ನ ಪ್ರವಾದಿಗಳನ್ನು ಸಂಹರಿಸಿದ್ದಾರೆ, ನಿನ್ನ ಯಜ್ಞವೇದಿಗಳನ್ನು ಒಡೆದುಹಾಕಿದ್ದಾರೆ, ನಾನೊಬ್ಬನೇ ಉಳಿದಿದ್ದೇನೆ, ನನ್ನ ಪ್ರಾಣವನ್ನೂ ತೆಗೆಯಬೇಕೆಂದಿದ್ದಾರೆ ಎಂದು 4ಇಸ್ರಾಯೇಲ್ಯರ ಮೇಲೆ ದೂರು ಹೇಳಿದ್ದಕ್ಕೆ.**

ಎಲೀಯನ ಮಾತುಗಳಿಗೆ ಹಿನ್ನಲೆ ಯಾವುದು? ಪ್ರವಾದಿಯು ಕರ್ಮೆಲ್ ಬೆಟ್ಟದ ಮೇಲೆ ಬಾಳನ ಪ್ರವಾದಿಗಳ ಮೇಲೆ ಜಯಗೊಂಡಿದ್ದನು (1 ಅರಸು 18). ಬಹುಶಃ ಆತನು ಆ ಜಯವು

ದೇಶದಲ್ಲೆಲ್ಲಾ ಒಂದು ಉಜ್ಜೀವನದ ಕಿಡಿಯನ್ನು ಹೊತ್ತಿಸುವದೆಂದು ನಿರೀಕ್ಷಿಸಿರಬಹುದು. ಬದಲಾಗಿ, ಈಜಬೇಲಳು ಆತನನ್ನು ಕೊಲ್ಲುವದಕ್ಕೆ ಹುಡುಕಿದಳು ಮತ್ತು ಆತನು ತನ್ನ ಪ್ರಾಣವನ್ನು ಉಳಿಸಿಕೊಳ್ಳಲು ಪಲಾಯನ ಮಾಡಬೇಕಾಯಿತು (1 ಅರಸು 19:1-8). ಏಕಾಂಗಿ ಮತ್ತು ನಿರಾಶನಾಗಿದ್ದ ಆತನು, ತನ್ನ ಹತಾಶೆಯನ್ನೆಲ್ಲಾ ಕರ್ತನ ಮುಂದೆ ಹೇಳಿಕೊಂಡನು: "ಇಸ್ರಾಯೇಲ್ಯರು ನಿನ್ನ ನಿಬಂಧನೆಯನ್ನು ಮೀರಿದ್ದಾರೆ, ಯಜ್ಞವೇದಿಗಳನ್ನು ಕೆಡವಿಹಾಕಿದ್ದಾರೆ, ಪ್ರವಾದಿಗಳನ್ನು ಕತ್ತಿಯಿಂದ ಸಂಹರಿಸಿದ್ದಾರೆ, ನಾನೊಬ್ಬನೇ ಉಳಿದು ನಿನ್ನ ಗೌರವವನ್ನು ಕಾಪಾಡುವದರಲ್ಲಿ ಆಸಕ್ತನಾಗಿದ್ದೆನು; ಆದರೆ ಅವರು ನನ್ನ ಪ್ರಾಣವನ್ನೂ ತೆಗೆಯಬೇಕೆಂದಿದ್ದಾರೆ" (1 ಅರಸು 19:10; ನೋಡಿರಿ 19:14). ಇಸ್ರಾಯೇಲ್ಯರಲ್ಲಿ ನಂಬಿಗಸ್ತರಾಗಿದ್ದವರು ಸಂಪೂರ್ಣ ಅಳಿದುಹೋಗುವದರಲ್ಲಿ ದ್ದಾರೆಂದು ಎಲೀಯನು ಭಾವಿಸಿದ್ದನು.

**ವಚನ 4.** ಅದೇ ಕಥೆಯ ಅಂತ್ಯವಾಗಿರಲಿಲ್ಲವೆಂಬುದು ಸಂತೋಷಕರವಾದ ಸಂಗತಿ. ಪೌಲನು ಮುಂದುವರೆದು ಹೀಗೆ ಹೇಳುತ್ತಾನೆ, **ದೇವರ ಉತ್ತರವೇನಂದರೆ—ಬಾಳನ ವಿಗ್ರಹಕ್ಕೆ ಅಡ್ಡ ಬೀಳದೆ ಇರುವ ಏಳುಸಾವಿರ ಪುರುಷರನ್ನು ನನಗಾಗಿ ಉಳಿಸಿಕೊಂಡಿದ್ದೇನೆ ಎಂಬದೇ** (ನೋಡಿರಿ 1 ಅರಸು 19:18). ಕರ್ತನ ಮಾತುಗಳಿಂದ ಎರಡು ಅನ್ವಯಿಕೆಗಳನ್ನು ಮಾಡಬಹುದು. ಮೊದಲನೆಯದಾಗಿ, ಏಳು ಸಾವಿರ ಜನರು ಇಸ್ರಾಯೇಲ್ಯರ (ಉತ್ತರದಲ್ಲಿದ್ದ ರಾಜ್ಯದ) ಜನಸಂಖ್ಯೆಯಲ್ಲಿ ಅತ್ಯಂಥ ಚಿಕ್ಕ ಪ್ರಮಾಣದ ಭಾಗವಾಗಿತ್ತು. ಏಳು ಸಾವಿರ ಜನರನ್ನು "ಇಸ್ರಾಯೇಲ್ಯರೊಳಗಿನ ಇಸ್ರಾಯೇಲ್ಯರು" ಎಂದು ತಿಳಿದುಕೊಳ್ಳಬಹುದು. ಎಲೀಯನ ದಿನಗಳಲ್ಲಿ ಇಸ್ರಾಯೇಲ್ ಜನಾಂಗದೊಳಗಿನ ಚಿಕ್ಕ ಭಾಗದಷ್ಟು ಜನರು ಮಾತ್ರವೇ ನಿಜವಾದ ಇಸ್ರಾಯೇಲ್ಯರಾಗಿದ್ದರಿಂದ, ಪೌಲನ ದಿನಗಳಲ್ಲಿ ಸಹ ಅದೇ ರೀತಿಯ ಸ್ಥಿತಿಯಿತ್ತೆಂಬ ವಿಷಯದಲ್ಲಿ ಯೆಹೂದ್ಯರು ಆಶ್ಚರ್ಯಪಡಬೇಕಾಗಿರಲಿಲ್ಲ.

ಹೇಗೂ, ರೋಮಾ 11ರಲ್ಲಿ ಪೌಲನ ಪ್ರಾಥಮಿಕ ಅನ್ವಯಿಸುವಿಕೆಯು ಏನಾಗಿತ್ತೆಂದರೆ, ಏಳು ಸಾವಿರ ಎಂಬುದು *ಚಿಕ್ಕ* ಸಂಖ್ಯೆಯಾಗಿತ್ತಾದರೂ, ಅದೊಂದು *ಮಹತ್ವಪೂರ್ಣವಾದ* ಸಂಖ್ಯೆಯಾಗಿತ್ತು. ನಾವು ಏಳು ಸಾವಿರ ಪುರುಷರ ಹೆಂಡತಿಯರನ್ನು ಹಾಗೂ ಮಕ್ಕಳನ್ನು ಅದಕ್ಕೆ ಕೂಡಿಸುವದಾದರೆ, ಒಟ್ಟಾರೆ ಸಂಖ್ಯೆಯು ಇಪ್ಪತ್ತು ಸಾವಿರಕ್ಕಿಂತಲೂ ಅಧಿಕವಾಗಿದ್ದಿರಬಹುದಾಗಿದೆ. ಇದು ಎಲೀಯನ ಮನಸ್ಸಿನಲ್ಲಿದ್ದದಕ್ಕಿಂತಲೂ ಅತಿ ಹೆಚ್ಚಿನ ಸಂಖ್ಯೆಯಾಗಿತ್ತು. ಪೌಲನ ದಿನಗಳಲ್ಲಿ, ಬಹುಪಾಲು ಯೆಹೂದ್ಯರು ದೇವರಿಂದ ತಿರಸ್ಕರಿಸಲ್ಪಟ್ಟಿದ್ದರಾದರೂ, ಒಂದು ಮಹತ್ವಪೂರ್ಣವಾದ ಸಂಖ್ಯೆಯ ಜನರು ತಿರಸ್ಕರಿಸಲ್ಪಟ್ಟಿರಲಿಲ್ಲ. ಪಂಚಾಶತ್ತಮ ದಿನದಂದು ಮೂರು ಸಾವಿರ ಯೆಹೂದ್ಯರು ದೀಕ್ಷಾಸ್ನಾನ ಮಾಡಿಸಿಕೊಂಡರು (ಅಪೊಸ್ತಲರ ಕೃತ್ಯಗಳು 2:5, 37, 38, 41, 47). ಯೆರೂಸಲೇಮಿನಲ್ಲಿನ ಯೆಹೂದಿ ಕ್ರೈಸ್ತರ ಸಂಖ್ಯೆಯು ಬೆಳೆಯುತ್ತಲೇ ಹೋಯಿತು, ಬಹುಶಃ ಹತ್ತಾರು ಸಾವಿರಗಳಷ್ಟರ ವರೆಗೆ ಬೆಳೆದಿರಬಹುದು (ಅಪೊಸ್ತಲರ ಕೃತ್ಯಗಳು 2:47; 4:4; 5:14; 6:7). ಸಭೆಯು ಯೆರೂಸಲೇಮಿನಿಂದ ಚದುರಿಸಲ್ಪಟ್ಟ ಮೇಲೆ (ಅಪೊಸ್ತಲರ ಕೃತ್ಯಗಳು 8:1, 4), ಅಲ್ಲಿ ಮತ್ತು ಇಲ್ಲಿ ಇದ್ದ ಯೆಹೂದ್ಯರು ಸುವಾರ್ತೆಗೆ ಒಲವು ತೋರಿಸುವದನ್ನು ಮುಂದುವರೆಸಿದರು (ಅಪೊಸ್ತಲರ ಕೃತ್ಯಗಳು 14:1; 17:1-4, 10-12). ಪೌಲನು ತನ್ನ ಮೂರನೆಯ ಸುವಾರ್ತಾ ಪ್ರಯಾಣದ ಬಳಿಕ ಯೆರೂಸಲೇಮಿಗೆ ಹಿಂದಿರುಗಿದಾಗ, ಆ

ಪಟ್ಟಣದಲ್ಲಿನ ನಾಯಕರು "ಯೆಹೂದ್ಯರಲ್ಲಿ ಯೇಸುವನ್ನು ನಂಬಿರುವವರು ಎಷ್ಟೋ ಸಾವಿರ ಮಂದಿ"[2] ಎಂದು ಸೂಚಿಸುತ್ತಾರೆ. ಈ "ಎಷ್ಟೋ ಸಾವಿರ" ಜನರು ಇಸ್ರಾಯೇಲ್ಯರನ್ನು ದೇವರು ತಿರಸ್ಕರಿಸಿಲ್ಲ ಎಂಬುದಕ್ಕೆ ಯಥೇಚ್ಛ ಪುರಾವೆಯಾಗಿದ್ದಾರೆ. ನಿರ್ದಿಷ್ಟವಾಗಿ, ದೇವರು ಇಸ್ರಾಯೇಲ್ಯರಲ್ಲಿದ್ದ (ದೊಡ್ಡ ವೃತ್ತ) "ತನ್ನ ಪ್ರಜೆ"ಯಾಗಿದ್ದವರನ್ನು (ಚಿಕ್ಕ ವೃತ್ತ) ತಿರಸ್ಕರಿಸಿರಲಿಲ್ಲ.

**ವಚನಗಳು 5, 6.** ಎಲೀಯನ ದಿನಗಳಿಗೆ ಸಮಾನ ಹೋಲಿಕೆಯನ್ನು ಮಾಡಿದ ಬಳಿಕ, ಪೌಲನು ಮುಂದುವರೆಸುತ್ತಾನೆ, **ಅದರಂತೆ ಈಗಿನ ಕಾಲದಲ್ಲಿಯೂ ದೇವರು ಕೃಪೆಯಿಂದ ಆದುಕೊಂಡವರಾದ ಕೆಲವರು ಉಳಿದಿದ್ದಾರೆ.** "ಕೆಲವರು" ಎಂಬುದು λεῖμμα (*leimma*) ಎಂಬದರಿಂದ ಅನುವಾದಿಸಲ್ಪಟ್ಟಿದೆ, ಅದರರ್ಥವು "ಉಳಿದಿರುವವದು." (ಅದು λείπω [*leipō*, *ಎಂಬುದಕ್ಕೆ ಸಂಬಂಧಿಸಿರುತ್ತದೆ*, "ಬಿಡುವದು"].[3]) ಯೆರೆಮಿಯ 42:2ರಲ್ಲಿ "ಉಳಿದಿರುವ ಈ ಜನ" ಎಂಬ ಪದವು "ಅನೇಕರಲ್ಲಿ ಉಳಿದಿರುವ ಕೆಲವರು" ಎಂಬರ್ಥವಾಗಿರುತ್ತದೆ. ರೋಮಾಪುರದವರಿಗೆ ಪತ್ರಿಕೆಯ ಈ ಮುಂಚೆ, ಪೌಲನು ಯೆಶಾಯನ ಪುಸ್ತಕದಿಂದ ಉಲ್ಲೇಖಿಸಿದ್ದನು: "ಇಸ್ರಾಯೇಲ್ಯರ ಸಂಖ್ಯೆಯು ಸಮುದ್ರದ ಉಸುಬಿನಂತೆ ಅಸಂಖ್ಯವಾಗಿದ್ದರೂ ಅವರಲ್ಲಿ ಒಂದು ಅಂಶ ಮಾತ್ರ ರಕ್ಷಣೆಹೊಂದುವರು" (9:27). ಇಸ್ರಾಯೇಲ್ಯರಲ್ಲಿ ಅಸಂಖ್ಯಾತರೊಳಗಿಂದ ಸ್ವಲ್ಪ ಮಂದಿ (ವೃತ್ತದೊಳಗಿರುವ ಚಿಕ್ಕ ವೃತ್ತವು) ರಕ್ಷಿಸಲ್ಪಡುವರೆಂದು ಮುಂತಿಳಿಸಲ್ಪಟ್ಟಿತ್ತು.

ಹಾಗಾದರೆ ಉಳಿದ ಇಸ್ರಾಯೇಲ್ಯರು ತಮ್ಮನ್ನು ದೇವರ ದಯೆಗೆ ಪಾತ್ರರಾಗುವಂತೆ ಮಾಡುವ ಯಾವದಾದರೂ ಸಂಗತಿಯನ್ನು ಮಾಡಿದ್ದರೆಂದು ಅರ್ಥವೋ? ಅವರು ಸ್ವೀಕಾರವು ಯಾವದೇ ವೈಯಕ್ತಿಕ ಶ್ಲಾಘ್ಯ ಅಥವಾ ಸಾಧನೆಯ ಫಲಿತವಲ್ಲ, ಆದರೆ ಅದು ದೇವರ ಕರುಣೆ ಹಾಗೂ ಕೃಪೆಯ ತೋರ್ಪಡಿಸುವಿಕೆಯಾಗಿತ್ತು ಎಂಬುದನ್ನು ಪೌಲನು ಸ್ಪಷ್ಟಗೊಳಿಸುತ್ತಾನೆ: ಅವರು "ದೇವರು ಕೃಪೆಯಿಂದ ಆದುಕೊಂಡವರಾದ" ಜನರಾಗಿದ್ದರು.

"ದೇವರು ಕೃಪೆಯಿಂದ ಆದುಕೊಂಡ" ಬಗ್ಗೆ ತಿಳಿಸಿದ ಬಳಿಕ, ಪೌಲನು ಕೃಪೆಯಿಂದ ರಕ್ಷಣೆ ವ್ಯವಸ್ಥೆ ಹಾಗೂ ಕ್ರಿಯೆಗಳಿಂದ ರಕ್ಷಣೆ ವ್ಯವಸ್ಥೆಗಳ ನಡುವಿನ ತದ್ವಿರುದ್ಧತೆಯ ಕುರಿತು ತನ್ನ ಅತ್ಯಂಥ ಕಠಿಣವಾದ ನಿಲುವನ್ನು ತಿಳಿಸುತ್ತಾನೆ: [ದೇವರು] **ಕೃಪೆಯಿಂದ ಆದುಕೊಂಡನು ಅಂದ ಮೇಲೆ ಪುಣ್ಯಕ್ರಿಯೆಗಳ ಕಾರಣದಿಂದ ಆದುಕೊಳ್ಳಲಿಲ್ಲವಷ್ಟೆ; ಹಾಗಲ್ಲದ ಪಕ್ಷಕ್ಕೆ ಕೃಪೆಯನ್ನು ಇನ್ನು ಕೃಪೆಯನ್ನುವದಕ್ಕಾಗುವದಿಲ್ಲ.** ಕೃಪೆಯಿಂದ ರಕ್ಷಣೆ ಎಂಬ ಭಾವನೆಯು ಕ್ರಿಯೆಗಳಾಧಾರದ ರಕ್ಷಣೆಯ ಭಾವನೆಗೆ ಹೊಂದಾಣಿಕೆಯಾಗುವದಿಲ್ಲ. ನಾವು ಮಾಡಿದ ಕಾರ್ಯಗಳಿಂದ ರಕ್ಷಣೆಯನ್ನು *ಸಂಪಾದಿಸಿಕೊಂಡ* ಕಾರಣದಿಂದಾಗಿ ದೇವರು ನಮ್ಮನ್ನು *ಕೃಪೆಯಿಂದ* ರಕ್ಷಿಸುತ್ತಾನೆಂದು ಹೇಳಿದರೆ ಅದೊಂದು ಅರ್ಥಹೀನವಾದ ಮಾತಾಗುತ್ತದೆ. ಒಬ್ಬನು ಹೀಗೆ ಸಹ ಹೇಳಬಹುದು, "ನಾನು ಹೊಲಸಾಗುವ ಮೂಲಕ ಸ್ವಚ್ಛಗೊಂಡೆನು," ಅಥವಾ "ಪಕ್ಷಿಯು ನೆಲದ ಮೇಲೆಯೇ ಇರುವ ಮೂಲಕ ಆಕಾಶದಲ್ಲಿ ಹಾರಾಡಿತು." ನಮ್ಮ ಕ್ರಿಯೆಗಳ ಆಧಾರದಲ್ಲಿ ಕೃಪೆಯಿಂದ ರಕ್ಷಿಸಲ್ಪಟ್ಟಿದ್ದೇವೆ ಎಂದು ಹೇಳಿದರೆ "ಕೃಪೆ" ಎಂಬ ಪದವು ಅರ್ಥವನ್ನು ಕಳೆದುಕೊಳ್ಳುವಂತೆ ಮಾಡುವದಾಗಿದೆ. "ಕೃಪೆಯು" ಇನ್ನು "ಕೃಪೆ"ಯಾಗಿ ಉಳಿಯುವದಿಲ್ಲ.

5 ಮತ್ತು 6 ವಚನಗಳಿಂದ ಮುಂದಕ್ಕೆ ಹೋಗುವ ಮುನ್ನ, "ಕೆಲವರು" ಎಂಬದರ ಬಗ್ಗೆ

ಇನ್ನಷ್ಟು ಕೆಲವು ಅವಲೋಕನಗಳನ್ನು ಮಾಡತಕ್ಕದ್ದು. *ಕೆಲವರು* (ಒಂದು ಚಿಕ್ಕ ಸಂಖ್ಯೆಯವರು) ಮಾತ್ರವೇ ರಕ್ಷಣೆ ಹೊಂದುವರೆಂಬ ಬಗ್ಗೆ ಬೈಬಲ್ ಯಾವಾಗಲೂ ಕಲಿಸಿರುತ್ತದೆ.[5] ನೋಹನ ದಿನಗಳಲ್ಲಿ, ಭೂಮಿಯಲ್ಲಿದ್ದ ಸಾವಿರಾರು ಜನರೊಳಗಿಂದ, ಕೇವಲ ಎಂಟು ಮಂದಿ (ಒಂದು ಚಿಕ್ಕ ಸಂಖ್ಯೆಯವರು, ಒಂದು ಶೇಷ ಜನ ಮಾತ್ರ) ರಕ್ಷಿಸಲ್ಪಟ್ಟರು (1 ಪೇತ್ರ 3:20). ಸೊದೋಮ ಮತ್ತು ಗೊಮೋರಗಳು ನಾಶಗೊಳಿಸಲ್ಪಟ್ಟಾಗ, ಕೇವಲ ಲೋಟನು ಹಾಗೂ ಆತನ ಇಬ್ಬರು ಪುತ್ರಿಯರು ಮಾತ್ರವೇ ಬದುಕುಳಿದರು (ಆದಿಕಾಂಡ 19:15-26). ಯೆಹೂದ್ಯರು ಸೆರೆಯಾಳುಗಳಾಗಿ ಹಿಡಿದುಕೊಂಡು ಹೋಗಲ್ಪಟ್ಟ ಬಳಿಕ, ಕೇವಲ ಶೇಷ ಜನ ಮಾತ್ರವೇ ಹಿಂದಿರುಗಿ ಬಂದರು (ನೋಡಿರಿ ಯೆಶಾಯ 10:21). ಹೊಸ ಒಡಂಬಡಿಕೆಯಲ್ಲಿ, ಬಹಳಷ್ಟು ಜನರು ನಾಶಗೊಳ್ಳುವರೆಂದೂ ಸ್ವಲ್ಪ ಜನರು ಮಾತ್ರವೇ (ಕೆಲವರು) ರಕ್ಷಣೆ ಹೊಂದುವರೆಂದು ಯೇಸು ಮುಂತಿಳಿಸಿದನು (ಮತ್ತಾಯ 7:13, 14). ಪ್ರಕಟನೆ ಪುಸ್ತಕವು ದೇವರ ಪ್ರಜೆಯನ್ನು "ಉಳಿದವರ ಮೇಲೆ ಅಂದರೆ ದೇವರ ಆಜ್ಞೆಗಳನ್ನು ಕೈಕೊಂಡು" ನಡೆಯುವವರು ಎಂದು ಬಣ್ಣಿಸುತ್ತದೆ (ಪ್ರಕಟನೆ 12:17; KJV). ಈ ಅಧ್ಯಾಯದಲ್ಲಿನ ಕೆಲವೊಂದು ವಾಕ್ಯಭಾಗಗಳನ್ನು ಅರ್ಥಮಾಡಿಕೊಳ್ಳಲು ನಾವು ಪ್ರಯಾಸಪಡುತ್ತಿರುವ ಹಾಗೆ, ನಾವು ಈ ಪ್ರಾಮುಖ್ಯವಾದ ಸತ್ಯವನ್ನು ಮನಸ್ಸಿನಲ್ಲಿಟ್ಟುಕೊಳ್ಳತಕ್ಕದ್ದು: ಕೇವಲ *ಉಳಿದವರು* (ಕೆಲವರು) ಮಾತ್ರವೇ ರಕ್ಷಿಸಲ್ಪಡುವರು. ಇದು ಎಲ್ಲಾ ಕಾಲಗಳಲ್ಲಿಯೂ ಸತ್ಯವಾಗಿದೆ; ಎಲ್ಲಾ ಕಾಲಗಳಲ್ಲಿಯೂ ಸತ್ಯವಾಗಿರಲಿದೆ.

## ಯೆಹೂದ್ಯರನ್ನು ಕಠಿಣಪಡಿಸಿದ್ದು (11:7-10)

**7ಇದರಿಂದ ತಿಳಿಯತಕ್ಕದ್ದೇನು? ಇಸ್ರಾಯೇಲ್ಯರು ಹುಡುಕಿದ್ದು ಅವರೆಲ್ಲರಿಗೆ ದೊರೆಯಲಿಲ್ಲ, ಅವರೊಳಗೆ ಆಯಲ್ಪಟ್ಟವರಿಗೆ ದೊರೆಯಿತು. ಮಿಕ್ಕವರು ಮೊಂಡರಾದರು. 8ದೇವರು ಅವರಿಗೆ ಜಡಭಾವವನ್ನು ಅಂದರೆ ಕಾಣದ ಕಣ್ಣುಗಳನ್ನೂ ಕೇಳದ ಕಿವಿಗಳನ್ನೂ ಕೊಟ್ಟನು. ಈ ಭಾವವು ಈ ಹೊತ್ತಿನವರೆಗೂ ಹಾಗೆಯೇ ಅದೆ ಎಂದು ಬರೆದ ಪ್ರಕಾರ ಅವರಿಗೆ ಆಯಿತು. 9ಇದಲ್ಲದೆ—**

**ಅವರ ಊಟವೇ ಅವರಿಗೆ ಉರ್ಲೂ ಬೋನೂ**
**ಎಡತಡೆಯೂ ಶಿಕ್ಷೆಯೂ ಆಗಲಿ;**
**10ಅವರ ಕಣ್ಣು ಮೊಬ್ಬಾಗಿ ಕಾಣದೆ ಹೋಗಲಿ;**
**ಅವರ ಬೆನ್ನು ಯಾವಾಗಲೂ ಬೊಗ್ಗಿಕೊಂಡಿರು ವಂತೆ ಮಾಡು**

**ಎಂದು ದಾವೀದನು ಹೇಳುತ್ತಾನೆ.**

*ಏಕೆ* ಇಸ್ರಾಯೇಲ್ಯರಲ್ಲಿ ಕೆಲವರು ಮಾತ್ರವೇ ರಕ್ಷಿಸಲ್ಪಡುವರು? ಆ ಪ್ರಶ್ನೆಯ ವಿಷಯದಲ್ಲಿಯೇ ಪೌಲನು 7 ರಿಂದ 10 ವಚನಗಳಲ್ಲಿ ಮಾತಾಡುತ್ತಾನೆ.

**ವಚನ 7. ಇದರಿಂದ ತಿಳೀಯತಕ್ಕದ್ದೇನು?** ಎಂದು ಕೇಳಿದ ಮೇಲೆ ಆತನು ಹೀಗೆ ಹೇಳುತ್ತಾನೆ, **ಇಸ್ರಾಯೇಲ್ಯರು ಹುಡುಕಿದ್ದು ಅವರೆಲ್ಲರಿಗೆ ದೊರೆಯಲಿಲ್ಲ.** ಪೌಲನು ಈ ಮುಂಚೆ ಇಸ್ರಾಯೇಲ್ಯರು ನೀತಿಯನ್ನು ಹೊಂದುವದಕ್ಕೆ (ದೇವರ ಸಂಗಡ ಸರಿಯಾದ ಸಂಬಂಧ ಹೊಂದುವದಕ್ಕೆ) ಪ್ರಯತ್ನಿಸಿದ್ದರು ಆದರೆ ಅವರು "ನಂಬಿಕೆಯನ್ನು

ಆಧಾರಮಾಡಿಕೊಳ್ಳದೆ" ಹೋದದರಿಂದ ತಮ್ಮ ಗುರಿಯನ್ನು ತಲುಪುವದಕ್ಕೆ ವಿಫಲರಾದರು ಎಂದು ಹೇಳಿದ್ದನು (9:31, 32). ಇದು ಮೂಲಭೂತವಾಗಿ ಪೌಲನು 11:7ರಲ್ಲಿ ಹೇಳಿದ ರೀತಿಯಲ್ಲಿಯೇ ಇರುತ್ತದೆ: "ಇಸ್ರಾಯೇಲ್ಯರು ಹುಡುಕಿದ್ದು [ಅಂದರೆ, ದೇವರ ಸಂಗಡ ಸರಿಯಾದ ಸಂಬಂಧವನ್ನು] ಅವರೆಲ್ಲರಿಗೆ ದೊರೆಯಲಿಲ್ಲ."

ಹೇಗೂ, ಇಸ್ರಾಯೇಲ್ಯರಲ್ಲಿ *ಕೆಲವರಿಗೆ* ತಾವು ಬಯಸಿದ್ದು ದೊರೆತಿತ್ತು: **ಅವರೊಳಗೆ ಆಯಲ್ಪಟ್ಟವರಿಗೆ ದೊರೆಯಿತು.** ಇವರು "ನಿಜವಾದ ಇಸ್ರಾಯೇಲ್ಯರು" ಆಗಿದ್ದರು (ದೊಡ್ಡ ವೃತ್ತದಲ್ಲಿನ ಚಿಕ್ಕ ವೃತ್ತ). ಅವರು ಯೇಸುವಿನಲ್ಲಿ "ನಂಬಿಕೆಯನ್ನು ಆಧಾರಮಾಡಿಕೊಂಡು" ಹುಡುಕಿದ್ದರಿಂದ ದೇವರ ಸಂಗಡ ಸರಿಯಾದ ಸಂಬಂಧವನ್ನು ಪಡೆದುಕೊಂಡರು. ಹಾಗಾದರೆ.

ಬಹುಪಾಲು ಇಸ್ರಾಯೇಲ್ಯರಿಗೆ ಏನು ಸಂಭವಿಸಿತ್ತು? **ಮಿಕ್ಕವರು ಮೊಂಡರಾದರು** ಎಂದು ಓದುತ್ತೇವೆ. "ಮೊಂಡರಾದರು" ಎಂಬುದು *πωρόω* (*pōroō*) ಪದದಿಂದ ಬಂದಿದ್ದು ಅದರರ್ಥವು "ಕಠಿಣಗೊಳಿಸು" ಅಥವಾ "ಅಸಂವೇದನೆಗೊಳಿಸು" ಎಂಬುದಾಗಿದೆ.[7] ಅಧ್ಯಾಯ 9ರಲ್ಲಿ, ದೇವರು ತಾನು "ಯಾರನ್ನು ಕಠಿಣಪಡಿಸಿದರೂ ಅದೆಲ್ಲವೂ ಆತನ ಇಷ್ಟಾನುಸಾರವಾಗಿಯೇ ಇದೆ" ಎಂದು ಪೌಲನು ಹೇಳಿದನು (9:18) ಮತ್ತು ಫರೋಹನ ಉದಾಹರಣೆಯನ್ನು ಉಪಯೋಗಿಸಿದನು[8] (9:17). ಈ ಮುಂಚೆ ಗಮನಿಸಿರುವ ಹಾಗೆ, ಒಬ್ಬನು ಮೊದಲು ತನ್ನನ್ನು ಕಠಿಣಪಡಿಸಿಕೊಳ್ಳುವ ಹೊರತು ದೇವರು ಯಾರನ್ನೂ ಎಂದಿಗೂ ಕಠಿಣಪಡಿಸುವದಿಲ್ಲ ಎಂದು ಬೈಬಲ್ ಹೇಳುತ್ತದೆ (9:18ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಇಸ್ರಾಯೇಲ್ಯರಲ್ಲಿದ್ದ ಸಮಸ್ಯೆಯೇನೆಂದರೆ ಅವರು ಬಂಡಾಯಗಾರರಾಗಿದ್ದರು, ಗ್ರಹಿಸದ–ಹೃದಯವುಳ್ಳವರಾಗಿದ್ದರು (ನೋಡಿರಿ ಮತ್ತಾಯ 13:15; ಅಪೊಸ್ತಲರ ಕೃತ್ಯಗಳು 28:27).

**ವಚನ 8.** ವಾಡಿಕೆಯಂತೆ, ಪೌಲನು ತನ್ನ ಹೇಳಿಕೆಗಳಿಗೆ ವಾಕ್ಯಾಧಾರಗಳನ್ನು ಕೊಡುತ್ತಾನೆ. ಆತನು ನೀಡಿದ ಮೊದಲ ಸಂಬಂಧಸೂಚಕ ವಾಕ್ಯಭಾಗವು ಹಳೇ ಒಡಂಬಡಿಕೆಯ ಎರಡು ವಾಕ್ಯಭಾಗಗಳಾದ ಧರ್ಮೋಪದೇಶಕಾಂಡ 29:4 ಮತ್ತು ಯೆಶಾಯ 29:10ನ್ನು ಮಿಶ್ರಣಗೊಳಿಸಿದ ವಾಕ್ಯ: **ದೇವರು ಅವರಿಗೆ ಜಡಭಾವವನ್ನು ಅಂದರೆ ಕಾಣದ ಕಣ್ಣುಗಳನ್ನೂ ಕೇಳದ ಕಿವಿಗಳನ್ನೂ ಕೊಟ್ಟನು; ಈ ಭಾವವು ಈ ಹೊತ್ತಿನವರೆಗೂ ಹಾಗೆಯೇ ಅದೆ ಎಂದು ಬರೆದ ಪ್ರಕಾರ ಅವರಿಗೆ ಆಯಿತು.**

**ವಚನಗಳು 9, 10.** ಬಳಿಕ ಪೌಲನು ಕೀರ್ತನೆ 69ರಿಂದ ಉಲ್ಲೇಖಿಸುತ್ತಾನೆ, ಅದು ಆಗಾಗ ಯೇಸು ಮತ್ತು ಆದಿ ಕ್ರೈಸ್ತರಿಂದ ಉಪಯೋಗಿಸಲ್ಪಟ್ಟ ಕೀರ್ತನೆಯಾಗಿರುತ್ತದೆ (ಯೋಹಾನ 2:17; 15:25; ಅಪೊಸ್ತಲರ ಕೃತ್ಯಗಳು 1:20; ರೋಮಾ 15:3): **ಇದಲ್ಲದೆ ಅವರ ಊಟವೇ ಅವರಿಗೆ ಉರ್ಲೂ ಬೋನೂ ಎಡತಡೆಯೂ ಶಿಕ್ಷೆಯೂ ಆಗಲಿ; ಅವರ ಕಣ್ಣು ಮೊಬ್ಬಾಗಿ ಕಾಣದೆ ಹೋಗಲಿ; ಅವರ ಬೆನ್ನು ಯಾವಾಗಲೂ ಬೊಗ್ಗಿಕೊಂಡಿರುವಂತೆ ಮಾಡು ಎಂದು ದಾವೀದನು ಹೇಳುತ್ತಾನೆ** (ನೋಡಿರಿ ಕೀರ್ತನೆ 69:22, 23). ದಾವೀದನು ತನ್ನ ವೈರಿಗಳ ವಿರುದ್ಧ ಹಲವಾರು ಕ್ರಮಗಳನ್ನು ತೆಗೆದುಕೊಳ್ಳುವಂತೆ ದೇವರನ್ನು ಕೇಳಿಕೊಂಡನು, ಆದರೆ ಪೌಲನ ವಿಚಾರಧಾರೆಗೆ ನೇರವಾಗಿ ಅನ್ವಯವಾಗುವಂತಹ ವಿಚಾರವೆಂದರೆ ಇದೇ: "ಅವರ ಕಣ್ಣು ಮೊಬ್ಬಾಗಿ ಕಾಣದೆ ಹೋಗಲಿ." ಇಸ್ರಾಯೇಲ್ಯರ

ಕಣ್ಣುಗಳು (ದೊಡ್ಡ ವೃತ್ತ) "ಮೊಬ್ಬಾಗಿ" ಹೋಗಿದ್ದವು, ಯಾಕೆಂದರೆ ಬಹುತೇಕ ಯೆಹೂದ್ಯರು ಯೇಸುವೇ ದೀರ್ಘಕಾಲದಿಂದ ಎದುರುನೋಡುತ್ತಿದ್ದ ಮೆಸ್ಸೀಯನೆಂಬುದಕ್ಕೆ ದೇವರು ನೀಡಿದ್ದ ಪುರಾವೆಯನ್ನು "ಕಾಣುವದಕ್ಕೆ" ಅವರು ನಿರಾಕರಿಸಿದರು.

## ಯೆಹೂದ್ಯರ ತಿರಸ್ಕಾರ ಹಾಗೂ ಅನ್ಯಜನರ ಸ್ವೀಕಾರ (11:11-16)

**[11]ಹಾಗಾದರೆ ಅವರು ಬಿದ್ದೇ ಹೋಗುವಂತೆ ಎಡವಿದರೇನು ಎಂದು ಕೇಳುತ್ತೇನೆ. ಹಾಗೆ ಎಂದಿಗೂ ಹೇಳಬಾರದು. ಅವರು ಬಿದ್ದುಹೋದದ್ದರಿಂದ ಕ್ರಿಸ್ತನಿಂದ ಉಂಟಾಗುವ ರಕ್ಷಣೆಯು ಅನ್ಯಜನರಿಗೆ ಉಂಟಾಯಿತು. ಇದರಿಂದ ದೇವರು ಅವರಲ್ಲಿ ಹುರುಡು ಹುಟ್ಟಿಸುತ್ತಾನೆ.**
**[12]ಅವರು ಬಿದ್ದುಹೋದದ್ದು ಸರ್ವಲೋಕದ ಭಾಗ್ಯಕ್ಕೂ ಅವರು ಸೋತುಹೋದದ್ದು ಅನ್ಯಜನಗಳ ಭಾಗ್ಯಕ್ಕೂ ಮಾರ್ಗವಾಗಿರಲಾಗಿ ಅವರ ಪೂರ್ಣ ಪುನಃಸ್ಥಾಪನೆಯು ಎಷ್ಟೋ ಹೆಚ್ಚಾಗಿ ಭಾಗ್ಯಕ್ಕೆ ಕಾರಣವಾಗುವದು.**

**[13]ಅನ್ಯಜರಾಗಿರುವ ನಿಮ್ಮ ಸಂಗಡ ಮಾತಾಡುತ್ತೇನೆ. ನಾನು ಅನ್ಯಜನರಿಗೆ ಅಪೊಸ್ತಲನಾಗಿರಲಾಗಿ ನನ್ನ ಉದ್ಯೋಗವನ್ನು ಗಣ್ಯತೆಗೆ ತರುತ್ತೇನೆ. [14]ಹೀಗೆ ಒಂದು ವೇಳೆ ಸ್ವಜನರಲ್ಲಿ ಹುರುಡನ್ನು ಹುಟ್ಟಿಸಿ ಅವರಲ್ಲಿ ಸಹ ಕೆಲವರನ್ನು ರಕ್ಷಣೆಯ ಮಾರ್ಗಕ್ಕೆ ತಂದೇನು.**
**[15]ಯಾಕೆಂದರೆ ಇಸ್ರಾಯೇಲ್ಯರನ್ನು ತಳ್ಳುವದರಿಂದ ಲೋಕವು ದೇವರ ಸಂಗಟ ಸಮಾಧಾನವಾಗುವದಕ್ಕೆ ಮಾರ್ಗವಾದ ಮೇಲೆ ಅವರನ್ನು ಸೇರಿಸಿಕೊಳ್ಳುವದರಿಂದ ಏನಾಗುವದು? ಸತ್ತವರು ಜೀವಿತರಾಗಿ ಎದ್ದು ಬಂದಂತಾಗುವದಲ್ಲವೇ. [16]ಕಣಕದಲ್ಲಿ ಮೊದಲನೆಯ ಉರುಳಿ ನೈವೇದ್ಯವಾದ ಮೇಲೆ ಕಣಕವೆಲ್ಲಾ ನೈವೇದ್ಯವಾದ ಹಾಗಾಯಿತು; ಬೇರು ದೇವರದಾಗಿದ್ದ ಮೇಲೆ ಕೊಂಬೆಗಳೂ ದೇವರವು.**

ಪೌಲನು ಹೀಗೆ ಕೇಳಿದ್ದನು, "ಹಾಗಾದರೆ ದೇವರು ತನ್ನ ಪ್ರಜೆಯನ್ನು ಬೇಡವೆಂದು ತಳ್ಳಿಬಿಟ್ಟದ್ದುಂಟೇ" ಮತ್ತು ಅದಕ್ಕೆ ಉತ್ತರವಾಗಿ, ಇಲ್ಲವೆಂದು ಹೇಳಿದ್ದನು (11:1). ಈ ನಿರ್ಣಯವನ್ನು ಬೆಂಬಲಿಸುವದಕ್ಕೆ, ಆತನು ಯೆಹೂದ್ಯರನ್ನು ದೇವರು *ಸಂಪೂರ್ಣವಾಗಿ* ತಿರಸ್ಕರಿಸಿರಲಿಲ್ಲ ಎಂಬುದನ್ನು ತೋರಿಸಿಕೊಟ್ಟಿದ್ದನು. ಪೌಲನು ಮತ್ತು ಇತರ ಯೆಹೂದ್ಯರು ಯೇಸುವನ್ನು ಅಂಗೀಕರಿಸಿದ್ದರು ಮತ್ತು ಆ ಕಾರಣದಿಂದ ಅವರು ದೇವರ ಅಂಗೀಕಾರಕ್ಕೆ ಒಳಗಾಗಿದ್ದರು. ಆತನ ಎರಡನೆಯ ಪುರಾವೆ ಏನಾಗಿತ್ತೆಂದರೆ, ದೇವರು ಯೆಹೂದ್ಯರನ್ನು ತಿರಸ್ಕರಿಸಿದ್ದು *ಅಂತಿಮವಾದದ್ದು* ಆಗಿರಲಿಲ್ಲ. ದೇವರು ಅವರಿಗೆ ಪಶ್ಚಾತಾಪ ಪಟ್ಟು ತನ್ನ ಕಡೆಗೆ ಹಿಂದಿರುಗಿ ಬರುವಂತೆ ಇನ್ನಷ್ಟು ಅವಕಾಶವನ್ನು ಕೊಡುವವನಾಗಿದ್ದನು. 11ನೇ ಅಧ್ಯಾಯದ ಮಿಕ್ಕ ಭಾಗದ ಮೂಲಭೂತ ಚರ್ಚೆಯಾಂಶವು ಇದೇ ಆಗಿರುತ್ತದೆ.

**ವಚನ 11.** ಪೌಲನು ಈ ಹೊಸ ವಿಭಾಗವನ್ನು **ಹಾಗಾದರೆ . . . ಎಂದು ಕೇಳುತ್ತೇನೆ** ಎಂದು ಆರಂಭಿಸುತ್ತಾನೆ. ಇಸ್ರಾಯೇಲ್ ಜನಾಂಗವು ದೇವರಿಂದ ಅಂಗೀಕರಿಸಲ್ಪಟ್ಟಿಲ್ಲ ಎಂಬುದನ್ನು ಒಪ್ಪಿಕೊಂಡ ಬಳಿಕ, ಪೌಲನು ಹೀಗೆ ಕೇಳುತ್ತಾನೆ, **ಹಾಗಾದರೆ ಅವರು** [ಯೆಹೂದ್ಯರು] **ಬಿದ್ದೇ** [*πίπτω*, *piptō*] **ಹೋಗುವಂತೆ ಎಡವಿದರೇನು.** ಮತ್ತೊಂದು ಸಾರಿ,

ಪೌಲನು ತನ್ನ ಸ್ವಂತ ಪ್ರಶ್ನೆಗೆ **ಹಾಗೆ ಎಂದಿಗೂ ಹೇಳಬಾರದು** ಎಂದು ಉತ್ತರಿಸುತ್ತಾನೆ (ನೋಡಿರಿ 11:1).

ಪುನಃ, ನಮ್ಮ ಮುಂದೆ ಒಂದು ತದ್ವಿರುದ್ಧವೆಂದು ತೋರುವ ಸಂಗತಿಯಿರುತ್ತದೆ. 11a ನೇ ವಚನವು ಯೆಹೂದ್ಯರು ಬಿದ್ದು ಹೋಗಲಿಲ್ಲವೆಂದು ಹೇಳುವಂತೆ ತೋರುತ್ತದೆ—ಆದರೆ 11b ಮತ್ತು 12 ವಚನಗಳು ಅವರು "ಬಿದ್ದುಹೋದದ್ದರಿಂದ" ಮತ್ತು "ಸೋತು ಹೋದದ್ದು" ಎಂಬುದಾಗಿ ಮಾತಾಡಿದರೆ, 15ನೇ ವಚನವು ಅವರನ್ನು "ತಳ್ಳುವದರಿಂದ" ಎಂಬದಾಗಿ ತಿಳಿಸುತ್ತದೆ. ಬಳಿಕ ಪೌಲನು ನಂಬದೆ ಹೋದ ಯೆಹೂದ್ಯರನ್ನು ದೇವರು "ಉಳಿಸದೆ ಇದ್ದ" ನು ಎಂದು ಹೇಳುತ್ತಾನೆ (11:20, 21). ಆತನು ಮುಕ್ತಾಯಕ್ಕೆ ಬಂದದ್ದೇನೆಂದರೆ "ಆದದರಿಂದ ದೇವರ . . . ಕಾಠಿಣ್ಯವನ್ನೂ ನೋಡು; ಬಿದ್ದ [*piptō ಎಂಬದರಿಂದ*] ವರ [ಯೆಹೂದ್ಯರು] ಕಾಠಿಣ್ಯ" (11:22; ಒತ್ತಿ ಹೇಳಿದ್ದು ನನ್ನದು). ಯೆಹೂದ್ಯರು ಬಿದ್ದುಹೋಗ*ಲಿಲ್ಲ*, ಆದರೆ ಬಿದ್ದು ಹೋ*ದರೋ*? ಸ್ಪಷ್ಟವಾಗಿ ತೋರುವಂತೆ, 11ನೇ ವಚನದಲ್ಲಿ ಸೂಚ್ಯಾರ್ಥವು ಏನೆಂದರೆ ಬಿದ್ದು *ಹೋಗದ* ಯೆಹೂದ್ಯರು ಯಾವುದೋ ಒಂದು ವಿಧದಲ್ಲಿ ಅರ್ಹರಾಗುವ ಅಗತ್ಯವಿತ್ತು ಎಂಬುದೇ.

ಹಲವಾರು ತರ್ಜುಮೆಗಳು ಸ್ಪಷ್ಟತೆಗೋಸ್ಕರ ಕೆಲವು ಮಾತುಗಳನ್ನು 11ನೇ ವಚನಕ್ಕೆ ಸೇರ್ಪಡೆಗೊಳಿಸಿರುತ್ತವೆ. ಉದಾಹರಣೆಗೆ, NIV ಯಲ್ಲಿ ಅವರು *ಮತ್ತೇ ಎದ್ದೇಳಲಾಗದಂತೆ* ಬಿದ್ದು ಹೋದರೇನು? (ಒತ್ತಿ ಹೇಳಿದ್ದು ನನ್ನದು). ಇದು ವಾಕ್ಯಭಾಗದ ತಪ್ಪಾದ ಅರ್ಥನಿರೂಪನೆಯೇನೂ ಆಗಿರುವದಿಲ್ಲ, ಯಾಕೆಂದರೆ ಯೆಹೂದ್ಯರು ಅಪನಂಬಿಕೆಯಲ್ಲಿ ಮುಂದುವರೆಯದಿದ್ದಲ್ಲಿ ಅವರಿಗೆ ನಿರೀಕ್ಷೆಯಿರುವದು ಎಂಬದನ್ನು ಅಧ್ಯಾಯದ ಉಳಿದ ಭಾಗವು ಒತ್ತಿ ಹೇಳುತ್ತದೆ.

ಯೆಹೂದ್ಯರು "ಗ್ಗರಿಸುವ ಬಂಡೆ" ಯಾದ ಯೇಸುವನ್ನು ಎಡವಿದಾಗ, ಅಲ್ಲ ಅವರ ಬೀಳುವಿಕೆ ಮಾತ್ರವೇ ಸಂಭವಿಸಲಿಲ್ಲ (9:32). ಯೆಹೂದ್ಯರ ಬೀಳುವಿಕೆಯಿಂದಾದ *ಒಳ್ಳೇಯ* ಫಲಿತವೊಂದನ್ನು ಪೌಲನು ಗುರುತಿಸುತ್ತಾನೆ: ಅನ್ಯಜನರ ಪರಿವರ್ತನೆ. ಆತನು ಹೀಗೆ ಹೇಳುತ್ತಾನೆ, **ಅವರು** [ಯೆಹೂದ್ಯರು] **ಬಿದ್ದುಹೋದದ್ದರಿಂದ ಕ್ರಿಸ್ತನಿಂದುಂಟಾಗುವ ರಕ್ಷಣೆಯು ಅನ್ಯಜನರಿಗೆ ಉಂಟಾಯಿತು.** ಪೌಲನು ಒಂದು ಹೊಸ ಪಟ್ಟಣಕ್ಕೆ ಬಂದು ತಲುಪುವಾಗ, ಆತನು ಮೊದಲು ಒಂದು ಯೆಹೂದ್ಯ ಸಭಾಮಂದಿರಕ್ಕೆ ಹೋಗುತ್ತಿದ್ದನು. ಯೆಹೂದ್ಯರು ಆತನನ್ನು ತಿರಸ್ಕರಿಸುವಾಗ (ಅವರು ಯಾವಾಗಲೂ ಹಾಗೆಯೇ ಮಾಡುತ್ತಿದ್ದರು), ಆತನು ಅನ್ಯಜನರ ಕಡೆಗೆ ಹೋಗುತ್ತಿದ್ದನು (ಅಪೊಸ್ತಲರ ಕೃತ್ಯಗಳು 13:46; 14:1; 18:6; 19:8, 9; 28:28). ಈ ವಿಧದಲ್ಲಿ, ಯೆಹೂದ್ಯರ ಬಿದ್ದುಹೋದದ್ದು (ಸುವಾರ್ತೆಯ ತಿರಸ್ಕಾರವು) ಅನ್ಯಜನರಿಗೆ ಸುವಾರ್ತೆಯನ್ನು ಕೇಳಿ ಅದಕ್ಕೆ ವಿಧೇಯರಾಗುವದಕ್ಕೆ ಒಂದು ಸಂದರ್ಭವನ್ನು ಒದಗಿಸಿತು. ಒಂದು ಭಾವಾನುವಾದದಲ್ಲಿ "ಅವರು [ಯೆಹೂದ್ಯರು] ಹೊರಗೆ ನಡೆದಾಗ, ದ್ವಾರವನ್ನು ಅವರು ತೆರೆದಿಟ್ಟರು ಮತ್ತು ಹೊರಗಿನವರು [ಅನ್ಯಜನರು] ಒಳಗೆ ಪ್ರವೇಶಿಸಿದರು" ಎಂದು ಇರುತ್ತದೆ (MSG). ಯೆಹೂದ್ಯರು ಸುವಾರ್ತೆಯನ್ನು ತಿರಸ್ಕರಿಸಿದ್ದು ಅನ್ಯಜನರಿಗೆ ಸುವಾರ್ತೆಯನ್ನು ಕೊಂಡೊಯ್ಯುವದಕ್ಕೆ *ಸಂದರ್ಭ*ವನ್ನು ಒದಗಿಸಿತೇ ಹೊರತು *ಕಾರಣ*ವನ್ನಲ್ಲ ಎಂಬುದನ್ನು ಗಮನಿಸತಕ್ಕದ್ದು. ಯೆಹೂದ್ಯರು ತನ್ನ ಸಂದೇಶವನ್ನು ಸ್ವೀಕರಿಸಿದ್ದರೂ ಪೌಲನು ಅನ್ಯಜನರಿಗೆ ಸುವಾರ್ತೆಯನ್ನು ಸಾರಿರುತ್ತಿದ್ದನಷ್ಟೆ.

ಹೇಗೂ, ಘಟನಾವಳಿಗಳ ಸರಣಿಯಲ್ಲಿ ಅನ್ಯಜನರ ಪರಿವರ್ತನೆಯು ಅಂತ್ಯದಲ್ಲಿರಬೇಕೆಂಬುದು ದೇವರ ಇಚ್ಛೆಯಾಗಿರಲಿಲ್ಲ. ಬದಲಾಗಿ, ಅನ್ಯಜನರ ರಕ್ಷಣೆಯಿಂದ ದೇವರು **ಅವರಲ್ಲಿ** [ಯೆಹೂದ್ಯರಲ್ಲಿ] **ಹುರುಡು ಹುಟ್ಟಿಸುವದಕ್ಕೆ** ಬಯಸಿದ್ದನು. ಅನ್ಯಜನರ ಸ್ವೀಕಾರವು ಯೆಹೂದ್ಯರಲ್ಲಿ ಹುರುಡು (ಅಸೂಯೆ) ಹುಟ್ಟಿಸುವದೆಂಬ ವಿಚಾರವು ಪೌಲನಿಂದ ಈ ಮುಂಚೆ 10:19ರಲ್ಲಿ ಪರಿಚಯಿಸಲ್ಪಟ್ಟಿತು: "ಜನಾಂಗವಲ್ಲದವರ [ಅಂದರೆ, ಅನ್ಯಜನರು] ಮೂಲಕ ನಿಮ್ಮಲ್ಲಿ [ಯೆಹೂದ್ಯರು] ಹುರುಡುಹುಟ್ಟಿಸುವೆನು" (10:19ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

"ಹುರುಡು" ಎಂಬ ಪದವನ್ನು ಇಲ್ಲಿ ಉಪಯೋಗಿಸುವದು ಕೆಲವು ವಾಚಕರಿಗೆ ವಿಚಿತ್ರವೆಂದು ಅನ್ನಿಸಬಹುದು. "ಹುರುಡು" ಎಂಬುದು *παραζηλόω* (*parazēloō*) ಪದದಿಂದ ಅನುವಾದಿಸಲ್ಪಟ್ಟಿದೆ, ಅದು *παρά* (*para*) ಎಂಬುದರಿಂದ ತೀವ್ರಗೊಂಡ *ζηλόω* (*zēloō*) ಎಂಬ ಪದವಾಗಿರುತ್ತದೆ. *Zēloō* ಎಂಬುದರ ಮೂಲಪದವು *ζέω* (*zeō*), ಅದರ್ಥವು "ಕುದಿಯುವದು, ಬಿಸಿಯಾಗುವದು."[9] *Zēloō*ದ ಅರ್ಥವು "ಅಸೂಯೆ ಪಡುವದು" ಅಥವಾ "ವೈರಾಗ್ಯ [ಆಸಕ್ತಿ] ಪಡುವದು"[10] (ಅಸೂಯೆ ಮತ್ತು ವೈರಾಗ್ಯ ಎರಡೂ ನಮ್ಮೊಳಗೆ "ಬಿಸಿಯನ್ನೆಬ್ಬಿಸುತ್ತವೆ") ಎಂಬ ಯಾವದೇ ಅರ್ಥವನ್ನು ಕೊಡಬಲ್ಲದು. *Zēloō* ಮತ್ತು ಸಂಬಂಧಿಸಿದ ಪದಗಳು ಅನೇಕ ಸಾರಿ ತಪ್ಪಾದ ಅರ್ಥದಲ್ಲಿ ಉಪಯೋಗಿಸಲ್ಪಡುತ್ತವೆ (ನೋಡಿರಿ 1 ಕೊರಿಂಥ 13:4), ಆದರೆ ಯಾವಾಗಲೂ ಆ ರೀತಿಯಲ್ಲಿರುವದಿಲ್ಲ. ಪೌಲನು ಕೊರಿಂಥದವರಿಗೆ "ಪವಿತ್ರಾತ್ಮನಿಂದುಂಟಾಗುವ ವರಗಳನ್ನು . . . ಆಸಕ್ತಿಯಿಂದ [*zēloō* ದಿಂದ ಬಂದದ್ದು] ಅಪೇಕ್ಷಿಸಿರಿ" ಎಂದು ಹೇಳುತ್ತಾನೆ (1 ಕೊರಿಂಥ 14:1).

ರೋಮಾ 10:19 ಮತ್ತು 11:11, 14ರಲ್ಲಿನ "ಹುರುಡು" ಮತ್ತು "ಹುರುಡನ್ನು ಹುಟ್ಟಿಸಿ" ಎಂಬ ಪದಗಳನ್ನು *ಅತ್ಯಾಸಕ್ತಿಯಿಂದ ಅಪೇಕ್ಷಿಸುವದು* ಎಂಬದಾಗಿ ಅರ್ಥಮಾಡಿಕೊಳ್ಳತಕ್ಕದ್ದು.[11] ಮೆಸ್ಸೀಯನ ರಾಜ್ಯದ (ಸಭೆ) ಪ್ರಯೋಜನಗಳನ್ನು ಅನ್ಯಜನರು ಅನುಭವಿಸುತ್ತಿರುವದನ್ನು ಯೆಹೂದ್ಯರು ನೋಡಿ ತಾವು ಸಹ ಆ ಆಶೀರ್ವಾದಗಳನ್ನು ಪಡೆಯಬೇಕೆಂಬ *ಒಂದು ತೀವ್ರವಾದ ಇಚ್ಛೆ* ಹೊಂದುವರೆಂದು ಪೌಲನು ನಿರೀಕ್ಷಿಸಿದ್ದನು. ಅವರು ಇಚ್ಛೆಯು ಬಹಳ ತೀವ್ರವಾಗಿದ್ದು ಅದು ಅವರಲ್ಲಿನ ಪೂರ್ವಕಲ್ಪಿತ ತಪ್ಪುಗ್ರಹಿಕೆಯನ್ನು ಹೋಗಲಾಡಿಸಿ ಯೇಸುವಿಗಾಗಿ ತಮ್ಮ ಹೃದಯಗಳನ್ನು ತೆರೆಯುವಂತೆ ಮಾಡುವದೆಂಬ ನಿರೀಕ್ಷೆ ಪೌಲನಿಗಿತ್ತು. ಅಪೇಕ್ಷಿತ ಘಟನಾವಳಿಗಳು ಈ ಕ್ರಮದಲ್ಲಿ ಸಂಭವಿಸುವವು:

ಯೆಹೂದ್ಯರ ತಿರಸ್ಕಾರ (ದೇವರಿಂದ)
ಅನ್ಯಜನರ ಸ್ವೀಕಾರ (ದೇವರಿಂದ)
ಯೆಹೂದ್ಯರ ಸ್ವೀಕಾರ (ದೇವರಿಂದ)

ಈ ಕ್ರಮಾನುಗತಿಯನ್ನು ನೆನಪಿನಲ್ಲಿಟ್ಟುಕೊಳ್ಳತಕ್ಕದ್ದು. 11ನೇ ಅಧ್ಯಾಯದಲ್ಲಿ, ದೇವರು ಯೆಹೂದ್ಯರಲ್ಲಿ ನಂಬಿಕೆಯನ್ನು ಹುಟ್ಟಿಸುವದಕ್ಕೆ ಹೇಗೆ ಈ ಕ್ರಮಾನುಗತಿಯನ್ನು ಉಪಯೋಗಿಸಿದನೆಂಬುದನ್ನು ಪೌಲನು ಹಲವಾರು ಸಾರಿ ಉಲ್ಲೇಖಿಸುತ್ತಾನೆ. ನಮಗೆ ಬಹಳ ಕೆಟ್ಟದ್ದೊಂದರಿಂದ ಬಹಳ ಒಳ್ಳೇದನ್ನು ಉಂಟಾಗುವಂತೆ ಮಾಡುವದಕ್ಕೆ ಶಕ್ತನಾದ

ಒಬ್ಬ ದೇವರಿದ್ದಾನೆ.

**ವಚನ 12.** ಪೌಲನು ತನ್ನ ಸಹ ಯೆಹೂದ್ಯರ ಬಗ್ಗೆ ಆಲೋಚಿಸಿದಾಗ, ಆತನು ರೋಮಾಂಚನಗೊಂಡನು. **ಅವರು** [ಯೆಹೂದ್ಯರು] **ಬಿದ್ದುಹೋದದ್ದು ಸರ್ವಲೋಕದ [ಆತ್ಮೀಕ] ಭಾಗ್ಯಕ್ಕೂ ಅವರು ಸೋತುಹೋದದ್ದು ಅನ್ಯಜನಗಳ ಭಾಗ್ಯಕ್ಕೂ ಮಾರ್ಗವಾಗಿರಲಾಗಿ ಅವರ** [ಯೆಹೂದ್ಯರು] **ಪೂರ್ಣ ಪುನಃಸ್ಥಾಪನೆಯು ಎಷ್ಟೋ ಹೆಚ್ಚಾಗಿ [ಅನ್ಯಜನರ] ಭಾಗ್ಯಕ್ಕೆ ಕಾರಣವಾಗುವದು.**

ನಾವು ಒಂದು ಕ್ಷಣವನ್ನು ತೆಗೆದುಕೊಂಡು "ಪೂರ್ಣ ಪುನಃಸ್ಥಾಪನೆಯು" ಎಂಬ ಪದವನ್ನು ಅವಲೋಕಿಸಬೇಕಾಗಿರುತ್ತದೆ, ಯಾಕೆಂದರೆ ಅಧ್ಯಾಯದ ಅಂತ್ಯದ ಹತ್ತಿರದಲ್ಲಿರುವ ವಿವಾದಕರ ವಿಭಾಗದಲ್ಲಿ ಒಂದು ನಿರ್ಣಾಯಕರ ಪದವಾಗಿರುತ್ತದೆ (ನೋಡಿರಿ 11:25). "ಪೂರ್ಣ ಪುನಃಸ್ಥಾಪನೆಯು" ಎಂಬುದು πλήρωμα (*plērōma*) ಎಂಬ ಪದದಿಂದ ಬಂದದ್ದು, ಅದು "ಪೂರ್ಣತೆ ಎಂದು ಸೂಚಿಸುತ್ತದೆ."[12] *Plērōma*ವು πλήρης (*plērēs,* "ಭರ್ತಿ, ತುಂಬಿದ") ಮತ್ತು πληρόω (*plēroō,* "ಭರ್ತಿಮಾಡು, ಪೂರ್ಣಗೊಳಿಸು") ಎಂಬ ಪದಗಳಿಗೆ ಸಂಬಂಧಿಸಿರುತ್ತದೆ. ಈ ಪದಗಳು ರೋಮಾಪುರದವರಿಗೆ ಪತ್ರಿಕೆಯಲ್ಲಿ ಆಗಾಗ ಉಪಯೋಗಿಸಲ್ಪಟ್ಟಿರುತ್ತವೆ (ಉದಾಹರಣೆಗೆ, ನೋಡಿರಿ 1:29; 8:4; 13:8, 10; 15:13, 14). ಈ ಕ್ಷಣದಲ್ಲಿ, ನಮ್ಮ ಮುಂದಿರುವ ಪ್ರಶ್ನೆಯು ಏನೆಂದರೆ "11:12ರಲ್ಲಿ *plērōmaದ* ಅರ್ಥವೇನಾಗಿರುತ್ತದೆ?" ಎಂಬುದು. ಇದನ್ನು ನಿರ್ಧರಿಸುವದಕ್ಕೆ ಉತ್ತಮ ದಾರಿಯೆಂದರೆ ಪೌಲನು ಅದನ್ನು ಯಾವ ರೀತಿ ಉಪಯೋಗಿಸಿದನೆಂಬುದನ್ನು ನೋಡುವದೇ: "ಬಿದ್ದುಹೋದದ್ದು" ಮತ್ತು "ಸೋತು ಹೋದದ್ದು" ಎಂಬುದಕ್ಕೆ ತದ್ವಿರುದ್ಧ ಹೋಲಿಕೆಯಾಗಿ ಉಪಯೋಗಿಸಿದನು.

ವಚನವನ್ನು ನೋಡಿರಿ: "ಅವರು *ಬಿದ್ದುಹೋದದ್ದು* ಸರ್ವಲೋಕದ ಭಾಗ್ಯಕ್ಕೂ ಅವರು *ಸೋತು ಹೋದದ್ದು* ಅನ್ಯಜನಗಳ ಭಾಗ್ಯಕ್ಕೂ ಮಾರ್ಗವಾಗಿರಲಾಗಿ ಅವರ *ಪೂರ್ಣ ಪುನಃಸ್ಥಾಪನೆ*ಯು ಎಷ್ಟೋ ಹೆಚ್ಚಾಗಿ ಭಾಗ್ಯಕ್ಕೆ ಕಾರಣವಾಗುವದು." ಯೆಹೂದ್ಯರು "ಬಿದ್ದುಹೋದದ್ದು" ಮತ್ತು "ಸೋತು ಹೋದದ್ದು" ಎಂಬುದರಲ್ಲಿ ದೇವರು ಅವರಿಗೋಸ್ಕರ ಹೊಂದಿದ್ದ ಸಂಕಲ್ಪವನ್ನು ಅವರು ತಿರಸ್ಕರಿಸಿದ್ದು, ಅದರ ಕಾರಣದಿಂದ ದೇವರು ಅವರನ್ನು ತಿರಸ್ಕಾರ ಮಾಡಿದ್ದು ಸೇರಿತ್ತು. ವಿಷಯವು ಹಾಗಿರುವಾಗ, ಯೆಹೂದ್ಯರ "ಪೂರ್ಣ ಪುನಃಸ್ಥಾಪನೆಯು" ಎಂಬುದರಲ್ಲಿ ಅವರು ದೇವರ ಸಂಕಲ್ಪವನ್ನು ನೆರವೇರಿಸುವದು, ಅದರ ಕಾರಣದಿಂದ ದೇವರಿಂದ ಸ್ವೀಕಾರಕ್ಕೆ ಒಳಗಾಗುವದು ಸೇರಿರತಕ್ಕದ್ದು. 12ನೇ ವಚನಕ್ಕೆ ಸಾಮ್ಯದಲ್ಲಿರುವ 15ನೇ ವಚನವು, ಇದನ್ನು ಸ್ಪಷ್ಟಗೊಳಿಸುವದಕ್ಕೆ ಸಹಾಯ ಮಾಡುತ್ತದೆ: "ಯಾಕೆಂದರೆ ಇಸ್ರಾಯೇಲ್ಯರನ್ನು ತಳ್ಳುವದರಿಂದ ಲೋಕವು ದೇವರ ಸಂಗಡ ಸಮಾಧಾನವಾಗುವದಕ್ಕೆ ಮಾರ್ಗವಾದ ಮೇಲೆ ಅವರನ್ನು ಸೇರಿಸಿಕೊಳ್ಳುವದರಿಂದ ಏನಾಗುವದು? ಸತ್ತವರು ಜೀವಿತರಾಗಿ ಎದ್ದು ಬಂದಂತಾಗುವದಲ್ಲವೇ."

ನಾವು 11:12ರ ಬಗ್ಗೆ ಇನ್ನೊಂದು ವಿಷಯವನ್ನು ಗಮನಿಸತಕ್ಕದ್ದು: NASB ಯು ವಚನದ ಕಡೇ ಭಾಗಕ್ಕೆ ಭವಿಷ್ಯತ್ಕಾಲದ ಭಾವಾರ್ಥವನ್ನು ಒದಗಿಸುತ್ತದೆ: "ಅವರ ಪೂರ್ಣ ಪುನಃಸ್ಥಾಪನೆಯು ಎಷ್ಟೋ ಹೆಚ್ಚಾಗಿ ಇರ*ಲಿದೆ!*" "ಲಿದೆ" ಎಂಬ ಮಾತುಗಳನ್ನು ಅನುವಾದಕರು ಸೇರ್ಪಡೆಗೊಳಿಸಿರುತ್ತಾರೆ. ಗ್ರೀಕ್ ವಾಕ್ಯಭಾಗದಲ್ಲಿ "ಅವರ ಪೂರ್ಣ

ಪುನಃಸ್ಥಾಪನೆಯು ಎಷ್ಟೋ ಹೆಚ್ಚಾಗಿರುವದು" ಎಂದಷ್ಟೇ ಇರುತ್ತದೆ (ನೋಡಿರಿ KJV). ನಿಯಮದಂತೆ, ಒಂದು ವಚನದ ಭಾಗದಲ್ಲಿ ಕ್ರಿಯಾಪದವು ಇಲ್ಲವೆಂದಾದಲ್ಲಿ, ಸೇರ್ಪಡೆಗೊಳಿಸಲ್ಪಟ್ಟ ಕ್ರಿಯಾಪದವು ಈಗಾಗಲೇ ವಚನದಲ್ಲಿರುವ ಕ್ರಿಯಾಪದಗಳೊಂದಿಗೆ ಹೊಂದಾಣಿಕೆಯಾಗಿರತಕ್ಕದ್ದು. ಸಮಸ್ಯೆಯೇನೆಂದರೆ ಗ್ರೀಕ್ ವಾಕ್ಯಭಾಗದ 12ನೇ ವಚನದಲ್ಲಿ ಯಾವದೇ ಕ್ರಿಯಾ ಪದಗಳಿರುವದಿಲ್ಲ,[13] ಆದ್ದರಿಂದ ಒದಗಿಸಲ್ಪಟ್ಟ ಕ್ರಿಯಾಪದವು "ವದು" (ವರ್ತಮಾನ ಕಾಲ) ಅಥವಾ "ರಲಿದೆ" (ಭವಿಷ್ಯತ್ಕಾಲ) ಎಂದಿರಬೇಕೆಂಬುದು ನಿಖರವಾಗಿರುವದಿಲ್ಲ. R. C. H. Lenski ಈ ಮುಕ್ತಾಯಕ್ಕೆ ಬರುತ್ತಾನೆ, ಪೌಲನು ಯೆಹೂದ್ಯರ "ಪೂರ್ಣ ಪುನಃಸ್ಥಾಪನೆ" ಬಗ್ಗೆ ಮಾತಾಡಿದಾಗ, ಅಪೊಸ್ತಲನು ಭವಿಷ್ಯದ ಒಂದು ಘಟನೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳಲಿಲ್ಲ, ಆದರೆ ಆತನ ದಿನದಲ್ಲಿ ಸಂಭವಿಸುತ್ತಿದ್ದ ಸಂಗತಿಯನ್ನು ಮಾತಾಡಿದನು:

> ಪೌಲನು ಏನು ಬರೆಯುತ್ತಾನೆಂದರೆ ಈಗಾಗಲೇ ಆ ಕಾಲದಲ್ಲಿ . . . ಯೆಹೂದ್ಯರ ಬಿದ್ದು ಹೋಗುವಿಕೆ ಮತ್ತು ನಷ್ಟಗಳನ್ನು ಲೋಕದ, ಅನ್ಯಜನರ ಭಾಗ್ಯವೆಂದು ಪರಿಗಣಿಸತಕ್ಕದ್ದು . . . [ಪೌಲನು] ಹೀಗೆ ಕೇಳುತ್ತಾನೆ, ಇದು ಸತ್ಯವಾಗಿದ್ದರೆ, ಏನೆಂದರೆ "ಈಗಾಗಲೇ ಯೆಹೂದ್ಯರಲ್ಲಿ ಕೆಲವರು [ನಿಜವಾದ ಇಸ್ರಾಯೇಲ್ಯರು] ಹೊಂದಿರುವ ರಕ್ಷಣೆಯ ಪೂರ್ಣ ಪುನಃಸ್ಥಾಪನೆಯು . . . ಎಷ್ಟೋ ಹೆಚ್ಚಾಗಿ . . . ಅದೇ ರೀತಿಯಲ್ಲಿ ಲೋಕದ, ಅನ್ಯಜನರ ಭಾಗ್ಯವೆಂದು ಪರಿಗಣಿಸಲ್ಪಡತಕ್ಕದ್ದು?"[14]

12ನೇ ವಚನದಲ್ಲಿ ಪೌಲನು ಉಪಯೋಗಿಸುವ ಕೆಲವು ಪರಿಭಾಷೆಗಳು ಅಸ್ಪಷ್ಟವಾಗಿರಬಹುದು, ಆದರೆ ಆತನ ವಿಚಾರವು ಸ್ಪಷ್ಟವಾಗಿರುತ್ತದೆ: ದೇವರು ಯೆಹೂದ್ಯರನ್ನು ತಿರಸ್ಕರಿಸಿದ್ದು ಅನ್ಯಜನರನ್ನು ದೇವರು ಸ್ವೀಕರಿಸುವದಕ್ಕೆ ಕಾರಣವಾಗಿದ್ದಾದರೆ, ದೇವರು ಯೆಹೂದ್ಯರನ್ನು (ಅವರು ಪಶ್ಚಾತಾಪ ಪಟ್ಟು ಆತನ ಬಳಿಗೆ ಹಿಂದಿರುಗಿ ಬರುವಾಗ) ಸ್ವೀಕರಿಸಿಕೊಳ್ಳುವದರಿಂದ ಅನ್ಯಜನರು ಇನ್ನೆಷ್ಟೋ ಹೆಚ್ಚಾಗಿ ಪ್ರಯೋಜನಗಳನ್ನು ಪಡೆಯುವರೆಂಬುದನ್ನು ಊಹಿಸಿಕೊಳ್ಳಿರಿ! ಅದರಲ್ಲಿ ಒಂದು ಪ್ರಯೋಜನವೆಂದರೆ ಪೇತ್ರ ಮತ್ತು ಪೌಲರಂತಹ ಯೆಹೂದಿ ಬೋದಕರು. ಇಲ್ಲಿ ಸೂಚ್ಯಾರ್ಥವೇನೆಂದರೆ ಯೆಹೂದ್ಯರು ಸ್ವೀಕಾರಗೊಳ್ಳುವದರಿಂದ ಇನ್ನಷ್ಟು ಅನ್ಯಜನರ ರಕ್ಷಣೆಗೆ ಕಾರಣವಾಗುತ್ತದೆ ಎಂಬುದೇ. ಈ ಮುಂಚೆ ಕೊಡಲ್ಪಟ್ಟಿರುವ ಕ್ರಮಾನುಗತಿಯನ್ನು ಈ ಕೆಳಗಿನಂತೆ ವಿಸ್ತರಿಸಬಹುದು:

> ಯೆಹೂದ್ಯರ ತಿರಸ್ಕಾರ (ದೇವರಿಂದ)
> ಅನ್ಯಜನರ ಸ್ವೀಕಾರ (ದೇವರಿಂದ)
> ಯೆಹೂದ್ಯರ ಸ್ವೀಕಾರ (ದೇವರಿಂದ)
> ಇನ್ನಷ್ಟು ಅನ್ಯಜನರ ಸ್ವೀಕಾರ (ದೇವರಿಂದ)!

**ವಚನಗಳು 13, 14.** ದೇವರು ಯೆಹೂದ್ಯರನ್ನು ತಿರಸ್ಕರಿಸಿದ್ದು ಅನ್ಯಜನರ ಸ್ವೀಕಾರಕ್ಕೆ ಒಂದು ಸಂದರ್ಭವನ್ನು ಒದಗಿಸಿತ್ತೆಂದು ಪೌಲನು ಈಗಷ್ಟೇ ಹೇಳಿದ್ದನು (11:11).

ಯೆಹೂದ್ಯರನ್ನು ದೇವರು ತಿರಸ್ಕರಿಸಿದ್ದಕ್ಕೆ *ಕಾರಣವು* ಅನ್ಯಜನರನ್ನು ಸ್ವೀಕರಿಸಿಕೊಳ್ಳುವದಕ್ಕಾಗಿಯೇ ಎಂಬದಾಗಿ ಕೆಲವು ಅನ್ಯಜನರು ನಿರ್ಣಯಕ್ಕೆ ಬಂದು ಬಿಡಬಹುದು (11:19). ಶತಮಾನಗಳಿಂದಲೂ, ಯೆಹೂದ್ಯರು—ದೇವರ ವಿಶೇಷ ಜನಾಂಗವಾಗಿದ್ದವರು—ತಮ್ಮನ್ನು ಅನ್ಯಜನರಿಗಿಂತಲೂ ಶ್ರೇಷ್ಠರೆಂದು ಭಾವಿಸಿಕೊಂಡಿದ್ದರು. ಈಗ ಪರಿಸ್ಥಿತಿಯು ಅದಲುಬದಲು ಆಗಿತ್ತು, ಮತ್ತು ಅನ್ಯಜನರು ತಮ್ಮನ್ನು ಯೆಹೂದ್ಯರಿಗಿಂತ ಶ್ರೇಷ್ಠರೆಂದು ಭಾವಿಸಿಕೊಳ್ಳುವ ಶೋಧನೆಗೊಳಗಾಗಲಿದ್ದರು. ಆದ್ದರಿಂದ ಪೌಲನು ತನ್ನ ಗಮನವನ್ನು ಅವರ ಕಡೆಗೆ ತಿರುಗಿಸುತ್ತಾನೆ: **ಅನ್ಯಜನರಾಗಿರುವ ನಿಮ್ಮ ಸಂಗಡ ಮಾತಾಡುತ್ತೇನೆ.** ಇಲ್ಲಿಂದ ಅಧ್ಯಾಯದ ಅಂತ್ಯದ ವರೆಗೂ, ಆತನ ಮಾತುಗಳೆಲ್ಲಾ ನಿರ್ದಿಷ್ಟವಾಗಿ ಅನ್ಯಜನಾಂಗದ ಕ್ರೈಸ್ತರನ್ನು ಸಂಬೋಧಿಸುತ್ತವೆ.

ಅನ್ಯಜನರಿಗೆ ಗರ್ವಪಟ್ಟುಕೊಳ್ಳುವದಕ್ಕೆ ಯಾವ ಕಾರಣವೂ ಇರುವದಿಲ್ಲ ಯಾಕೆಂದರೆ ಯೆಹೂದ್ಯರ ತಿರಸ್ಕಾರವು ಅಂತಿಮವಾದದ್ದಾಗಿರಲಿಲ್ಲ ಎಂಬುದನ್ನು ಅವರು ತಿಳಿದುಕೊಳ್ಳಬೇಕೆಂಬುದು ಅಪೊಸ್ತಲನ ಬಯಕೆಯಾಗಿತ್ತು. ದೇವರು ಈಗಲೂ ಯೆಹೂದ್ಯರ ಬಗ್ಗೆ ಕಾಳಜಿ ಹೊಂದಿದ್ದಾನೆ ಮತ್ತು ಅವರು ತಮ್ಮ ಮೊಂಡುತನವನ್ನು ಬಿಟ್ಟು ಪಶ್ಚಾತ್ತಾಪಪಟ್ಟು ಯೇಸುವಿನಲ್ಲಿ ನಂಬಿಕೆಯಿಟ್ಟರೆ ಅವರನ್ನು ಪುನಃ ಸೇರಿಸಿಕೊಳ್ಳಲು ಸಿದ್ಧನಿದ್ದನು. ಪೌಲನು ಹೀಗೆ ಹೇಳುತ್ತಾನೆ, **ನಾನು ಅನ್ಯಜನರಿಗೆ ಅಪೊಸ್ತಲನಾಗಿರಲಾಗಿ** [ನೋಡಿರಿ 1:1, 5; 15:16], **ನನ್ನ ಉದ್ಯೋಗವನ್ನು ಗಣ್ಯತೆಗೆ ತರುತ್ತೇನೆ. ಹೀಗೆ ಒಂದು ವೇಳೆ ಸ್ವಜನರಲ್ಲಿ ಹುರುಡನ್ನು ಹುಟ್ಟಿಸಿ ಅವರಲ್ಲಿ ಸಹ ಕೆಲವರನ್ನು ರಕ್ಷಣೆಯ ಮಾರ್ಗಕ್ಕೆ ತಂದೇನು.** "ಗಣ್ಯತೆಗೆ ತರುತ್ತೇನೆ" ಎಂಬುದರ ಅನುವಾದಿತ ಗ್ರೀಕ್ ಪದದ (δοξάζω, *doxazō*) ಅಕ್ಷರಶಃ ಅರ್ಥವು "ಮಹಿಮೆಗೊಳಿಸು" ಎಂದಾಗಿರುತ್ತದೆ. ಪೌಲನ ಪ್ರಾಥಮಿಕ ಸೇವೆಯು ಅನ್ಯಜನರಿಗೋಸ್ಕರ ಆಗಿತ್ತು, ಆದರೆ ಆತನ ತನ್ನ ಸ್ವಜನರ ವಿಷಯದಲ್ಲಿ ಬಹಳವಾಗಿ ಚಿಂತೆಯುಳ್ಳವನಾಗಿದ್ದನು (9:1-3; 10:1) ಮತ್ತು ಯೆಹೂದ್ಯರು ಸಹ ಪರಿವರ್ತನೆಗೊಂಡಾಗ ತನ್ನ ಸೇವೆಯನ್ನು "ಮಹಿಮೆಗೊಂಡದ್ದು" ಎಂದು ಪರಿಗಣಿಸಿದನು.

13 ಮತ್ತು 14 ವಚನಗಳಲ್ಲಿ, ಪೌಲನು ಪುನಃ ನಿರೀಕ್ಷೆ ಪಟ್ಟಿದ್ದೇನೆಂದರೆ, ಅನ್ಯಜನರು ಮೆಸ್ಸೀಯನ ರಾಜ್ಯದ ಪ್ರಯೋಜನಗಳನ್ನು ಅನುಭವಿಸುವದನ್ನು ಯೆಹೂದ್ಯರು ಕಂಡಾಗ, ಅವರು "ಅಸೂಯೆ"ಯಿಂದ (ಒಂದು ತೀವ್ರವಾದ ಆಸಕ್ತಿ) ತುಂಬಿದವರಾಗಿ ಅದೇ ಆಶೀರ್ವಾದಗಳನ್ನು ಆಶಿಸುವರು—ಮತ್ತು ಯೇಸುವಿನಲ್ಲಿ ನಂಬಿಕೆಯಿಡುವಂತೆ ನಡಿಸಲ್ಪಡುವರು ಎಂಬದೆ (11:11ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಆತನು ಯೆಹೂದ್ಯರು ಒಟ್ಟಾರೆಯಾಗಿ ಪರಿವರ್ತನೆಗೊಳ್ಳುವರೆಂದು ಎದುರುನೋಡಲಿಲ್ಲ, ಆದರೆ "ಕೆಲವರನ್ನು" ರಕ್ಷಣೆಗೆ ತಂದೇನು ಎಂದು ನಿರೀಕ್ಷಿಸಿದನು (1 ಕೊರಿಂಥ 9:20, 22).

**ವಚನ 15.** ಪೌಲನು ಮುಂದುವರೆದು ಹೇಳುತ್ತಾನೆ, **ಯಾಕೆಂದರೆ ಇಸ್ರಾಯೇಲ್ಯರನ್ನು** [ದೇವರು] **ತಳ್ಳುವದರಿಂದ** [ಅನ್ಯಜನರ] **ಲೋಕವು ದೇವರ ಸಂಗಡ ಸಮಾಧಾನವಾಗುವದಕ್ಕೆ ಮಾರ್ಗವಾದ ಮೇಲೆ ಅವರನ್ನು** [ಯೆಹೂದ್ಯರು] [ದೇವರು] **ಸೇರಿಸಿಕೊಳ್ಳುವದರಿಂದ ಏನಾಗುವದು?** ಸತ್ತವರು ಜೀವಿತರಾಗಿ ಎದ್ದು ಬಂದಂತಾಗುವದಲ್ಲವೇ. 14 ಮತ್ತು 15 ವಚನಗಳಲ್ಲಿ, ಇದಕ್ಕೆ ಮುಂಚೆ ಹೇಳಲ್ಪಟ್ಟಿದ್ದ ಅದೇ ಕ್ರಮಾನುಗತಿಯ ಘಟನಾವಳಿಗಳನ್ನು ಕಾಣುತ್ತೇವೆ (11:11ರ ಮೇಲಿನ ವ್ಯಾಖ್ಯೆಗಳನ್ನು

ನೋಡಿರಿ). ಯೆಹೂದ್ಯರು ಸುವಾರ್ತೆಯನ್ನು ತಿರಸ್ಕರಿಸಿದಾಗ, ಅವರು ದೇವರಿಂದ ತಿರಸ್ಕರಿಸಲ್ಪಟ್ಟರು. ಇದು ಸುವಾರ್ತೆಯು ಅನ್ಯಜನರಿಗೆ ಸಾರಲ್ಪಡುವದಕ್ಕೆ ಒಂದು ಸಂದರ್ಭವನ್ನು ಒದಗಿಸಿತ್ತು, ಆ ಮೂಲಕ ಸುವಾರ್ತೆಗೆ ಕಿವಿಗೊಟ್ಟ ಅನ್ಯಜನರು ಸಮಾಧಾನಗೊಳ್ಳುವದಕ್ಕೆ (ರಕ್ಷಣೆ) ಕಾರಣವಾಯಿತು. ಅನ್ಯಜನರು ಕರ್ತನಿಂದ ಅಂಗೀಕರಿಸಲ್ಪಡುವದನ್ನು ಕಂಡ ಯೆಹೂದ್ಯರು ಸಹ ರಕ್ಷಣೆ ಹೊಂದುವದಕ್ಕೆ ಇಚ್ಛೆಸುತ್ತಾರೆಂದು ಪೌಲನು ನಿರೀಕ್ಷಿಸಿದ್ದನು (11:14).

ಅದು ಸಂಭವಿಸಿದ್ದಾದರೆ, "ಅವರನ್ನು [ದೇವರು] ಸೇರಿಸಿಕೊಳ್ಳುವದರಿಂದ ಏನಾಗುವದು?"[15] "ಸತ್ತವರು ಜೀವಿತರಾಗಿ ಎದ್ದು ಬಂದಂತಾಗುವದಲ್ಲವೇ" ಎಂದು ಪೌಲನು ಹೇಳುತ್ತಾನೆ. ಪೌಲನು "ಸತ್ತವರು ಜೀವಿತರಾಗಿ ಎದ್ದು" ಎಂಬ ಮಾತುಗಳನ್ನು ಯೆಹೂದ್ಯರು ರಕ್ಷಿಸಲ್ಪಡುವದನ್ನು ಸೂಚಿಸುವ ರೂಪಕೋಕ್ತಿಯಾಗಿ ಉಪಯೋಗಿಸಿದನು (11:14). ಆತನು ಮನಸ್ಸಿನಲ್ಲಿ ಶಾರೀರಿಕ ಪುನರುತ್ಥಾನಕ್ಕಿಂತಲೂ ಆತ್ಮೀಕ ಪುನರುತ್ಥಾನವನ್ನು ಇಟ್ಟುಕೊಂಡವನಾಗಿ ಹೇಳಿದ್ದನು (ನೋಡಿರಿ 6:4, 5). ಆತನು ಇಲ್ಲಿ ಉಪಯೋಗಿಸುವ ಭಾಷೆಯು ತಪ್ಪಿಹೋದ ಕುಮಾರನ ತಂದೆಯು ಮಗನು ತಿರಿಗಿ ಬಂದ ಕೂಡಲೇ ಹೇಳಿದ ಮಾತುಗಳನ್ನು ನೆನಪಿಗೆ ತರುತ್ತವೆ: "ನನ್ನ ಮಗನು ಸತ್ತವನಾಗಿದ್ದನು, ತಿರಿಗಿ ಬದುಕಿ ಬಂದನು" (ಲೂಕ 15:24).

ಕೆಲವರು 11ನೇ ಅಧ್ಯಾಯವನ್ನು ಕ್ರಿಸ್ತನ ಬರೋಣಕ್ಕೆ ಅತಿ ಸನಿಹದಲ್ಲಿ ಸಂಭವಿಸುವ ಘಟನೆಗಳೆಂದು ಒತ್ತು ಕೊಟ್ಟು ವ್ಯಾಖ್ಯಾನ ಮಾಡುತ್ತಾರೆ. ಅವರು 15ನೇ ವಚನದಲ್ಲಿನ "ಸತ್ತವರು ಜೀವಿತರಾಗಿ ಎದ್ದು ಬಂದಂತಾಗುವದಲ್ಲವೇ" ಎಂಬುದನ್ನು ಯೇಸುವಿನ ಪುನರಾಗಮನದ ವೇಳೆಯಲ್ಲಿ ಸಂಭವಿಸುವ ಎಲ್ಲಾ ಮನುಷ್ಯರ ಶಾರಿರೀಕ ಪುನರುತ್ಥಾನವೆಂದು ಸೂಚಿಸುತ್ತಾರೆ. ಹೇಗೂ, Leon Morris ಎತ್ತಿ ತೋರಿಸಿದ್ದೇನೆಂದರೆ, "ಪೌಲನು ಇಲ್ಲಿ ಉಪಯೋಗಿಸಿರುವ ಮಾತುಗಳು ಬೇರೆ ಯಾವ ಕಡೆಯಲ್ಲೂ ಸರ್ವರಿಗೂ ಆಗುವ ಪುನರುತ್ಥಾನವನ್ನು ಸೂಚಿಸುವದಕ್ಕೆ ಉಪಯೋಗಿಸಲ್ಪಟ್ಟಿರುವದಿಲ್ಲ."[16] Walter W. Wessel ಹೇಳಿದ್ದೇನೆಂದರೆ "ಸನ್ನಿವೇಶವು ದೈಹಿಕ ಪುನರುತ್ಥಾನದ ಕುರಿತ ಯಾವದನ್ನೂ ಸೂಚಿಸುವದಿಲ್ಲ."[17] William Hendriksen ರೋಮಾ 11:15ರ ಮುಂಚಿನ ಹಾಗೂ ನಂತರ ವಚನಗಳಲ್ಲಿನ ವಿಷಯಾಂಶವನ್ನು ಗಮನಿಸಿದ ಬಳಿಕ ಅಭಿಪ್ರಾಯ ಪಟ್ಟಿದ್ದೇನೆಂದರೆ, "ಆದುದರಿಂದ, ಮಧ್ಯದಲ್ಲಿ ಸಂಭವಿಸುವ 'ಅವರ ಅಂಗೀಕರಿಸುವಿಕೆ . . . ಸತ್ತವರಿಂದ ಜೀವಿತರಾಗುವಿಕೆ' ಸೂಚಿಸುವಿಕೆಯನ್ನು, ಕೆಲವರು ನೋಡುವಂತೆ ಲೋಕದ ಇತಿಹಾಸದ ಅಂತ್ಯದಲ್ಲಿ ಸಂಭವಿಸುವಂತದ್ದೆಂದು ಸೂಚಿಸುವದು ಸೂಕ್ತವಾದದ್ದಲ್ಲ."[18]

ಪೌಲನು ಇಲ್ಲಿ ಲೋಕಾಂತ್ಯದ ಬಗ್ಗೆ ಮಾತಾಡುತ್ತಿಲ್ಲ, ಆದರೆ ತನ್ನ ಕಾಲಕ್ಕೆ ಸಂಬಂಧಿಸಿದ ಘಟನೆಗಳನ್ನು ಕುರಿತು ಮಾತಾಡುತ್ತಿದ್ದಾನೆ. ಆತನು ಸಹ ಯೆಹೂದ್ಯರ ರಕ್ಷಣೆಯ ಬಗ್ಗೆ ಪರಿಗಣಿಸಿದಾಗ, ಆತನ ಮನಸ್ಸಿಗೆ ಬಂದ ಅತ್ಯಂಥ ಸೂಕ್ತವಾದ ರೂಪಕೋಕ್ತಿಯೆಂದರೆ "ಸತ್ತವರಿಂದ ಜೀವಿತರಾಗಿ ಎದ್ದು" ಎಂಬುದೆ. ಇದೇ ರೀತಿಯ ಸಾದೃಶ್ಯಕ್ಕಾಗಿ, ಯೆಹೆಜ್ಕೇಲನು ಇಸ್ರಾಯೇಲ್ಯರ ಪುನಃಸ್ಥಾಪನೆಯ ಕುರಿತು ನೀಡುವ ಸ್ಫುಟವಾದ ಚಿತ್ರಣವನ್ನು ನೋಡಿರಿ (ಯೆಹೆ 37:1-14).

ನಾವು 16ನೇ ವಚನಕ್ಕೆ ಹೋಗುವ ಮುನ್ನ, 12 ಮತ್ತು 15 ವಚನಗಳನ್ನು ಹೋಲಿಕೆ

ಮಾಡಿದರೆ ಸೂಕ್ತವಾಗಿರಬಹುದಾಗಿದೆ. 12ನೇ ವಚನವು ಹೀಗೆ ಹೇಳುತ್ತೆ, "ಅವರು [ಯೆಹೂದ್ಯರು] ಬಿದ್ದುಹೋದದ್ದು ಸರ್ವಲೋಕದ ಭಾಗ್ಯಕ್ಕೂ ಅವರು ಸೋತು ಹೋದದ್ದು ಅನ್ಯಜನಗಳ ಭಾಗ್ಯಕ್ಕೂ ಮಾರ್ಗವಾಗಿರಲಾಗಿ ಅವರ ಪೂರ್ಣ ಪುನಃಸ್ಥಾಪನೆಯು ಎಷ್ಟೋ ಹೆಚ್ಚಾಗಿ ಭಾಗ್ಯಕ್ಕೆ ಕಾರಣವಾಗುವದು." 15ನೇ ವಚನದಲ್ಲಿ, "ಯಾಕೆಂದರೆ ಇಸ್ರಾಯೇಲ್ಯರನ್ನು ತಳ್ಳುವದರಿಂದ ಲೋಕವು ದೇವರ ಸಂಗಡ ಸಮಾಧಾನವಾಗುವದಕ್ಕೆ ಮಾರ್ಗವಾದ ಮೇಲೆ ಅವರನ್ನು ಸೇರಿಸಿಕೊಳ್ಳುವದರಿಂದ ಏನಾಗುವದು? ಸತ್ತವರು ಜೀವತರಾಗಿ ಎದ್ದು ಬಂದಂತಾಗುವದಲ್ಲವೇ?" 12ನೇ ವಚನವು ಯೆಹೂದ್ಯರು ಏನು ಮಾಡಿದ್ದರು ಎಂಬುದರ ಕುರಿತಾಗಿದ್ದರೆ, 15ನೇ ವಚನವು ಅವರು ಮಾಡಿದ ಸಂಗತಿಯಿಂದಾದ ಪರಿಣಾಮಗಳನ್ನು ಕುರಿತಾಗಿರುತ್ತದೆ. ಈಗ, ಆ ಎರಡು ವಚನಗಳನ್ನು ಒಂದುಗೂಡಿಸೋಣ: ನಾವು ಯೆಹೂದ್ಯರ ಬಿದ್ದು ಹೋಗುವಿಕೆ ಮತ್ತು ಸೋತು ಹೋಗುವಿಕೆಗಳಿಂದ (11:12) ಅವರು ದೇವರಿಂದ ತಿರಸ್ಕರಿಸಲ್ಪಡುವಂತಾಯಿತು (11:15), ಅದೇ ವೇಳೆಯಲ್ಲಿ ಅವರು "ಪೂರ್ಣ ಪುನಃಸ್ಥಾಪನೆಯು" (11:12) ಅವರು ದೇವರಿಂದ ಅಂಗೀಕರಿಸಲ್ಪಡುವಂತೆ ಫಲಿತಗೊಂಡಿತು (11:15). 11:12ರ ಮೇಲಿನ ವ್ಯಾಖ್ಯೆಗಳಲ್ಲಿ ಗಮನಿಸಿರುವ ಹಾಗೆ, "ಪೂರ್ಣ ಪುನಃಸ್ಥಾಪನೆ" ಎಂಬ ಪದವು ಆ ಸನ್ನಿವೇಶದಲ್ಲಿ ಅವರು ದೇವರ ಸಂಕಲ್ಪಗಳನ್ನು ನೆರವೇರಿಸುವದಕ್ಕೆ ಸಂಬಂಧ ಪಟ್ಟದ್ದಾಗಿರುತ್ತದೆ. ಕೆಲವರು ಪ್ರಸ್ತಾಪಿಸುವ ಪ್ರಕಾರ ಅದಕ್ಕೂ ಯಾವದೋ ಕಲ್ಪಿತವಾದ "ಪೂರ್ಣ ಸಂಖ್ಯೆ"ಗೂ ಸಂಬಂಧವೇ ಇರುವದಿಲ್ಲ (11:25, 26ರ ಮೇಲಿನ ವ್ಯಾಖ್ಯಾನಗಳನ್ನು ನೋಡಿರಿ).

**ವಚನ 16.** ಯೆಹೂದ್ಯರು ಕರ್ತನ ಬಳಿಗೆ ಹಿಂದಿರುಗಿ ಬರುವದಕ್ಕೆ ಸಂಬಂಧಿಸಿದ ಎರಡು ರೂಪಕೋಕ್ತಿಗಳನ್ನು ಪೌಲನು ಉಪಯೋಗಿಸಿದನು. ಮೊದಲನೆಯದಾಗಿ, ಆತನು ಒಂದು ಸಂಸ್ಕಾರಕ್ಕೆ ಸಂಬಂಧಿಸಿದ ದೃಷ್ಟಾಂತವನ್ನು ಉಪಯೋಗಿಸಿದನು: **ಕಣಕದಲ್ಲಿ ಮೊದಲನೆಯ ಉರುಳಿ ನೈವೇದ್ಯಮಾದ ಮೇಲೆ ಕಣಕವೆಲ್ಲಾ ನೈವೇದ್ಯವಾದ ಹಾಗಾಯಿತು.** NIVಯಲ್ಲಿ "ಪ್ರಥಮ ಫಲವಾಗಿ ಅರ್ಪಿಸಿದ ಹಿಟ್ಟಿನಲ್ಲಿನ ಭಾಗವು ನೈವೇದ್ಯವಾಗಿರುವದಾದರೆ, ಇಡೀ ಹಿಟ್ಟೇ ನೈವೇದ್ಯವಷ್ಟೆ." ಹಳೆಯ ಒಡಂಬಡಿಕೆಯಲ್ಲಿ, ಪೈರಿನ ಧಾನ್ಯದೊಳಗಿಂದ (ಪ್ರಥಮಫಲ) ತಯಾರಿಸಲ್ಪಟ್ಟ ಹಿಟ್ಟಿನ ಒಂದು ಭಾಗವನ್ನು ಕರ್ತನಿಗೆ ನೈವೇದ್ಯ ಮಾಡಲ್ಪಡುತ್ತಿತ್ತು (ಅರಣ್ಯಕಾಂಡ 15:17-21). ಹೀಗೆ ಮಾಡುವದರಿಂದ ನೈವೇದ್ಯ ಮಾಡಿದವನು ಉಪಯೋಗಿಸುವದಕ್ಕೆ ಸಾಧ್ಯವಾಗುವಂತೆ ಇಡೀ ಕಣಕವೇ ನೈವೇದ್ಯಗೊಳಿಸಲ್ಪಡುತ್ತಿತ್ತು (ಪವಿತ್ರಗೊಳಿಸಲ್ಪಡುತ್ತಿತ್ತು). 11:16ರಲ್ಲಿ ಪೌಲನು ಎರಡು ರೂಪಕೋಕ್ತಿಗಳು ಸಾಮ್ಯತೆಯುಳ್ಳವುಗಳು ಮತ್ತು "ಮೊದಲನೆಯ ಉರುಳಿ"ಯು ಹಾಗೂ "ಬೇರು" ಒಂದೇ ಆಗಿರುವದಾದಲ್ಲಿ, ಬಹುಶಃ "ಮೊದಲನೆಯ ಉರುಳಿ" ಎಂಬುದು ಯೆಹೂದಿ ಮೂಲಪಿತೃಗಳನ್ನು ಸೂಚಿಸುತ್ತಿರಬಹುದಾಗಿದೆ—ವಿಶೇಷವಾಗಿ ಅಬ್ರಹಾಮ. ಮೂಲಪಿತೃಗಳು ಪರಿಶುದ್ಧರಾಗಿದ್ದರಿಂದ, ದೇವರು ಅವರ "ನಿಜವಾದ" ಸಂತತಿಯವರನ್ನು ಸಹ (ಅವರ ನಂಬಿಕೆಯ ಮಾದರಿಯನ್ನು ಅನುಸರಿಸಿದವರು) ಪರಿಶುದ್ಧವೆಂದು ಪರಿಗಣಿಸಿದನು.

ಪೌಲನು ಬಳಿಕ ಒಂದು ಕೃಷಿಗೆ ಸಂಬಂಧಿಸಿದ ದೃಷ್ಟಾಂತವನ್ನು ಉಪಯೋಗಿಸಿದನು: **ಬೇರು ದೇವರದ್ದಾಗಿದ್ದ ಮೇಲೆ ಕೊಂಬೆಗಳೂ ದೇವರವು.** ಈ "ಬೇರು" ಯಾವದು (ಅಥವಾ

ಯಾರು) ಎಂಬ ವಿಚಾರದಲ್ಲಿ ಸ್ವಲ್ಪ ಭಿನ್ನಾಭಿಪ್ರಾಯ ಇರುತ್ತದೆ. ಈ "ಬೇರು" ಸ್ವತಃ ದೇವರು ಎಂದು ಕೆಲವರು ಹೇಳುತ್ತಾರೆ. ಇನ್ನು ಕೆಲವರು ಅದು ದೇವರ ವಿಮೋಚನಾ ಯೋಜನೆ ಎಂದು ಹೇಳುತ್ತಾರೆ. ಸಾದೃಶ್ಯವನ್ನು ಅದರ ಸಂಪೂರ್ಣತೆಯೊಂದಿಗೆ ಪರಿಗಣಿಸುವದಾದರೆ (11:16-24), "ಬೇರು" ಎಂಬುದನ್ನು "ಪಿತೃಗಳು [ಮೂಲಪಿತೃಗಳು]"—ವಿಶೇಷವಾಗಿ, ದೇವರ ವಾಗ್ದಾನಗಳು ಮೂಲತಃ ಕೊಡಲ್ಪಟ್ಟ ಅಬ್ರಹಾಮನು (ನೋಡಿರಿ 11:28)—ಎಂದು ಅರ್ಥಮಾಡಿಕೊಂಡರೆ ಅತ್ಯುತ್ತಮವಾಗಿರುತ್ತದೆ. ಖಂಡಿತವಾಗಿಯೂ, ಹೇಳಲ್ಪಟ್ಟಿರುವ ಆಯ್ಕೆಗಳ ನಡುವೆ ಯಾವದೇ ದೊಡ್ಡ ವಿರುದ್ಧತೆಗಳಿರುವದಿಲ್ಲ: ದೇವರು *ಅಬ್ರಹಾಮ*ನಿಗೆ ಮತ್ತು ಇತರ ಪಿತೃಗಳಿಗೆ ಅಮೂಲ್ಯವಾದ ವಾಗ್ದಾನಗಳನ್ನು ಕೊಟ್ಟಾಗಲೇ *ದೇವರ ವಿಮೋಚನಾ ಯೋಜನೆಯು* ಪ್ರಕಟವಾಯಿತು. ಪೌಲನು ಪ್ರಾಥಮಿಕವಾಗಿ ಮನಸ್ಸಿನಲ್ಲಿ ಅಬ್ರಹಾಮನನ್ನು ಇಟ್ಟುಕೊಂಡಿದ್ದಲ್ಲಿ, 16ನೇ ವಚನವು ಈ ರೀತಿಯ ಅರ್ಥವನ್ನು ಹೊಂದಿರುತ್ತದೆ: "ಬೇರು [ಅಬ್ರಹಾಮ] ದೇವರದಾಗಿದ್ದ ಮೇಲೆ ಕೊಂಬೆಗಳೂ ['ಪಿತೃವಾಗಿರುವ ಅಬ್ರಹಾಮನಿಗೆ . . . ಇದ್ದ ನಂಬಿಕೆಯ ಹೆಜ್ಜೆಗಳನ್ನು ಹಿಡಿದು' ನಡೆಯುವವರೂ (4:12)] ದೇವರವು."

ಈ ವಿಭಾಗದಲ್ಲಿ, ಯೆಹೂದ್ಯರ ತಿರಸ್ಕಾರವು ಅಂತಿಮವಾದದ್ದಲ್ಲ ಎಂಬ ಸತ್ಯದ ಬಗ್ಗೆ ಒತ್ತಿ ಹೇಳುವದನ್ನು ಪೌಲನು ಮುಂದುವರೆಸುತ್ತಾನೆ. ಯೆಹೂದ್ಯರಿಗೋಸ್ಕರ ರಕ್ಷಣೆಯ ದ್ವಾರವು ಇನ್ನೂ ತೆರೆದಿಡಲ್ಪಟ್ಟಿತ್ತಾದ್ದರಿಂದ, ಆ ದ್ವಾರದ ಮೂಲಕ ಬಂದ ಹಾದು ಬಂದಿದ್ದ ಅನ್ಯಜನರಿಗೆ ತಮ್ಮನ್ನು ಶ್ರೇಷ್ಠರೆಂದು ಎಣಿಸಿಕೊಳ್ಳುವದಕ್ಕೆ ಯಾವದೇ ನೆಲೆಗಟ್ಟು ಇರಲಿಲ್ಲ.

## ಯೆಹೂದ್ಯರು ಕಸಿಕಟ್ಟಲ್ಪಟ್ಟಿದ್ದು (11:17-24)

**17ಆದರೆ ಕೆಲವು ಕೊಂಬೆಗಳು ಮುರಿದುಹಾಕಲ್ಪಡಲು ಕಾಡೆಣ್ಣೇಮರದಂತಿರುವ ನೀನು
ಅವುಗಳ ತಾವಿನಲ್ಲಿ ಕಸಿಕಟ್ಟಿಸಿಕೊಂಡವನಾಗಿ ಊರೆಣ್ಣೇಮರದ ರಸವತ್ತಾದ ಬೇರಿನಲ್ಲಿ
ಪಾಲು ಹೊಂದಿದರೂ ಆ ಕೊಂಬೆಗಳನ್ನು ಕಡೆಗಣಿಸಿ ನಿನ್ನನ್ನು ಹೆಚ್ಚಿಸಿಕೊಳ್ಳಬೇಡ;
18ಹೆಚ್ಚಿಸಿಕೊಂಡರೂ ಆ ಬೇರಿಗೆ ನೀನು ಆಧಾರವಲ್ಲ, ಅದು ನಿನಗೆ ಆಧಾರವಾಗಿದೆಯಷ್ಟೆ.
19ಈ ಮಾತಿಗೆ—ನಾನು ಕಸಿಕಟ್ಟಿಸಿಕೊಳ್ಳುವಂತೆ ಕೊಂಬೆಗಳು ಮುರಿದುಹಾಕಲ್ಪಟ್ಟವಲ್ಲಾ
ಎಂದು ನೀನು ಒಂದು ವೇಳೆ ಹೇಳಬಹುದು. 20ನೀನು ಹೇಳುವದು ನಿಜ; ಅವರು
ನಂಬದೆಹೋದದರಿಂದ ಮುರಿದುಹಾಕಲ್ಪಟ್ಟರು, 21ನೀನು ನಿಂತಿರುವದು ನಂಬಿಕೆಯಿಂದಲೇ.
ಗರ್ವಪಡಬೇಡ, ಭಯದಿಂದಿರು; ದೇವರು ಹುಟ್ಟುಕೊಂಬೆಗಳನ್ನು ಉಳಿಸದೆ ಇದ್ದ ಮೇಲೆ
ನಿನ್ನನ್ನೂ ಉಳಿಸುವದಿಲ್ಲ. 22ಆದದರಿಂದ ದೇವರ ದಯೆಯನ್ನೂ ಕಾಠಿಣ್ಯವನ್ನೂ ನೋಡು'
ಬಿದ್ದವರ ಕಡೆಗೆ ಕಾಠಿಣ್ಯ; ನಿನ್ನ ಕಡೆಗೆ ನೀನು ದೇವರ ದಯೆಯನ್ನು ಆಶ್ರಯಿಸಿಕೊಂಡೇ ಇದ್ದರೆ
ಆತನ ದಯೆ; ಇಲ್ಲವಾದರೆ ನಿನ್ನನ್ನೂ ಕಡಿದುಹಾಕುವನು. 23ಇಸ್ರಾಯೇಲ್ಯರು ಕೂಡ ಇನ್ನು
ಅಪನಂಬಿಕೆಯಲ್ಲಿ ನಿಲ್ಲದ ಪಕ್ಷಕ್ಕೆ ಕಸಿಕಟ್ಟಲ್ಪಡುವರು; ದೇವರು ಅವರನ್ನು ತಿರಿಗಿ
ಕಸಿಕಟ್ಟುವದಕ್ಕೆ ಸಮರ್ಥನಾಗಿದ್ದಾನೆ. 24ನೀನು ಹುಟ್ಟು ಕಾಡುಮರದಿಂದ ಕಡಿದು
ತೆಗೆಯಲ್ಪಟ್ಟು ನಿನಗೆ ಸಂಬಂಧಪಡದ ಊರು ಮರದಲ್ಲಿ ಕಸಿಕಟ್ಟಿಸಿಕೊಂಡವನಾದ ಮೇಲೆ
ಅದರಲ್ಲಿ ಹುಟ್ಟಿದ ಕೊಂಬೆಗಳಾಗಿರುವ ಅವರು ಸ್ವಂತ ಮರದಲ್ಲಿ ಕಸಿಕಟ್ಟಿಲ್ಪಡುವದು ಎಷ್ಟೋ
ಸಹಜವಾಗಿದೆಯಲ್ಲವೇ.**

ದೇವರು ಅವರಿಗೆ ಮಾಡಿದ ಕಾರ್ಯಕ್ಕೆ ತಾವು ಅರ್ಹರಲ್ಲದ ಅನ್ಯಜನರು ಗರ್ವಪಟ್ಟುಕೊಳ್ಳುವದಕ್ಕೆ ಕಾರಣವೇ ಇರಲಿಲ್ಲ; ಅವರು ಅಂಗೀಕರಿಸಲ್ಪಟ್ಟಿದ್ದು ಕೇವಲ ಕೃಪೆಯಿಂದಲೇ ಆಗಿತ್ತು. ಪೌಲನು ಆಗಾಗ ಈ ಸತ್ಯವನ್ನು ಘೋಷಿಸಿದನು (ಉದಾಹರಣೆಗೆ, 3:24ರಲ್ಲಿ), ಆದರೆ ಈ ಸಾರಿ ಆತನೊಂದು ಅಸಹಜವಾದ ದಾರಿಯನ್ನು ಅನುಸರಿಸುತ್ತಾನೆ—ಒಂದು ಅನಿರೀಕ್ಷಿತವಾದ ತಿರುವುವುಳ್ಳ ಒಂದು ಸಹಜವಾದ ದಾರಿ.

**ವಚನ 17.** ಪೌಲನು 16ನೇ ವಚನದಲ್ಲಿ "ಬೇರು" ಮತ್ತು "ಕೊಂಬೆಗಳು" ಎಂದು ಸೂಚಿಸಿದ್ದರಿಂದ ಅದು ಆತನನ್ನು ಒಂದು ಎಣ್ಣೇಮರದಲ್ಲಿ ಕೊಂಬೆಗಳನ್ನು ಕಸಿಕಟ್ಟುವದರ ಕುರಿತ ಒಂದು ವಿಸ್ತರಿಸಲ್ಪಟ್ಟ ಸಾದೃಶ್ಯವನ್ನು ಉಪಯೋಗಿಸುವಂತೆ ಸ್ಫೂರ್ತಿಗೊಳಿಸಿತು.[19] ಪೌಲನ ವಾಚಕರಿಗೆ ಎಣ್ಣೇಮರಗಳ ಬಗ್ಗೆ ಪರಿಚಯವಿತ್ತು, ಆದರೆ ನಮ್ಮಲ್ಲಿ ಅನೇಕರಿಗೆ ಪರಿಚಯವಿರುವದಿಲ್ಲ. ಈ ದೃಷ್ಟಾಂತವನ್ನು ಅರ್ಥಮಾಡಿಕೊಳ್ಳಬೇಕೆಂದರೆ ಮೊದಲು ನಾವು ಎಣ್ಣೇಮರಗಳು (olive trees) ಮತ್ತು ಕಸಿಕಟ್ಟುವಿಕೆ ಬಗ್ಗೆ ತಿಳಿಯುವದು ಅಗತ್ಯವಿರುತ್ತದೆ. ಮೆಡಿಟರೇನಿಯನ್ ಸಮುದ್ರದ ಸುತ್ತಮುತ್ತಲೆಲ್ಲಾ ಕಂದು—ಹಸಿರು ಬಣ್ಣದ ಎಲೆಗೊಂಚಲುಗಳುಳ್ಳ ಮರಗಳನ್ನು ಕಾಣಬಹುದಾಗಿದೆ. ಅಡುಗೆ, ವೈದ್ಯಕೀಯ ಪ್ರಯೋಜನಗಳು, ಮತ್ತು ಇತರೆ ಉದ್ದೇಶಗಳಿಗಾಗಿ ಬಳಸುವ ಎಣ್ಣೆಗೆ ಈ ಎಣ್ಣೇಮರಗಳು ಮೂಲವಾಗಿದ್ದವು. ಕಾಡೆಣ್ಣೇಮರಗಳು ಕೃಷಿಮಾಡಲ್ಪಟ್ಟ ಎಣ್ಣೇಮರಗಳಿಗಿಂತಲೂ ಗಟ್ಟಿಮುಟ್ಟಾಗಿರುತ್ತಿದ್ದವು, ಆದರೆ ಕೃಷಿಮಾಡಲ್ಪಟ್ಟ ಮರಗಳು ದೊಡ್ಡ ಗಾತ್ರದ ಹಾಗೂ ಹೆಚ್ಚು ಸಂಖ್ಯೆಯ ಎಣ್ಣೆಯ ಕಾಯಿಗಳನ್ನು (ಒಲಿವ್) ಉತ್ಪಾದಿಸುತ್ತಿದ್ದವು.

ಕಸಿಕಟ್ಟುವುದು ಎರಡು ಬೇರೆ ವಿಧವಾದ ಮರಗಳನ್ನು ಒಂದಾಗಿ ಜೋಡಿಸುವ ಪ್ರಕ್ರಿಯೆಯಾಗಿರುತ್ತದೆ. ಒಂದು ವಿಶಿಷ್ಟವಾದ ಕಾರ್ಯವಿಧಾನದಲ್ಲಿ, ಒಂದು ಮರದಿಂದ ಕೊಂಬೆಯೊಂದನ್ನು ಕತ್ತರಿಸಲಾಗುತ್ತದೆ, ಕೆಲವು ಇಂಚುಗಳಷ್ಟು ಉದ್ದ ಮೋಟು ಹಾಗೆಯೇ ಬಿಡಲ್ಪಟ್ಟಿರುತ್ತದೆ. ಮೋಟು ಇಬ್ಭಾಗಿಸಲ್ಪಡುತ್ತದೆ. ನಂತರ, ಇನ್ನೊಂದು ಮರದಿಂದ ಒಂದು ಚಿಕ್ಕ ಕೊಂಬೆಯನ್ನು ಕತ್ತರಿಸಲಾಗುತ್ತದೆ, ಮತ್ತು ಕತ್ತರಿಸಲ್ಪಟ್ಟ ಕೊಂಬೆಯು ಒಂದು ಗೂಟದ ಆಕಾರಕ್ಕೆ ತರಲ್ಪಡುತ್ತದೆ. ಆ ಗೂಟವನ್ನು ಇಬ್ಭಾಗಿಸಲ್ಪಟ್ಟಿದ್ದ ಮೊದಲ ಮರದ ಮೋಟಿನೊಳಕ್ಕೆ ತೂರಕಲ್ಪಡುತ್ತದೆ, ಮತ್ತು ಮರ ಹಾಗೂ ಕಸಿಮಾಡಲ್ಪಟ್ಟ ಕೊಂಬೆಗಳು ಪರಸ್ಪರ ಒಟ್ಟಾಗಿ ಬೆಳೆಯುವಂತೆ ಪ್ರೋತ್ಸಾಹಿಸುವದಕ್ಕಾಗಿ ಜೋಡಣೆಯನ್ನು ಬಿಗಿಯಾಗಿ ಕಟ್ಟಲಾಗುತ್ತದೆ. ಕಸಿಮಾಡುವದರಿಂದ ಯಾವಾಗಲೂ ಒಂದು ಆರೋಗ್ಯಕರ ಕೊಂಬೆಯಲ್ಲಿ ಫಲಿತಗೊಳ್ಳುವದಿಲ್ಲ; ಆದರೆ ಸಮರ್ಪಕವಾಗಿ ಮಾಡುವದಾದಲ್ಲಿ, ಅದು ಅನೇಕ ಸಾರಿ ಯಶಸ್ವಿಕರವಾಗುತ್ತದೆ.

ಎಣ್ಣೇ ಮರಗಳ ವಿಷಯದಲ್ಲಿ ನೋಡುವದಾದರೆ, ಕೊಂಬೆಗಳು ಕಾಡೆಣ್ಣೇಮರದ ಬಲದಿಂದ ಪ್ರಯೋಜನವನ್ನು ಪಡೆಯುವಂತಾಗಲು ಕೃಷಿ ಮಾಡಲ್ಪಟ್ಟ ಮರದ ಕೊಂಬೆಗಳನ್ನು ಕಾಡೆಣ್ಣೇಮರಕ್ಕೆ ಕಸಿಮಾಡುವದು ಸರ್ವಸಾಮಾನ್ಯವಾಗಿತ್ತು. ಒಂದು ಕಾಡೆಣ್ಣೇಮರದ ಕೊಂಬೆಯನ್ನು ಕೃಷಿಮಾಡಲ್ಪಟ್ಟ ಎಣ್ಣೇಮರದಲ್ಲಿ ಕಸಿಕಟ್ಟುವದು ವಿರಳವಾಗಿತ್ತು.[20] ಹೇಗಿದ್ದರೂ, ಆ ಕಾರ್ಯವಿಧಾನವು ಪೌಲನ ಉದ್ದೇಶಕ್ಕೆ ಸೂಕ್ತವಾಗಿ ಸರಿಹೊಂದುವದಾಗಿತ್ತು, ಆದ್ದರಿಂದ ಆತನು (ಆತನ ಪದಗುಚ್ಛವನ್ನೇ ಉಪಯೋಗಿಸುವದಾದರೆ) "ಸಂಬಂಧಪಡದ" ಮರದಲ್ಲಿ ಕಸಿಕಟ್ಟಲ್ಪಡುವ ಪ್ರಕ್ರಿಯೆಯ ಬಗ್ಗೆ

ಬರೆದನು (11:24).

ನಾವು ವಾಕ್ಯಭಾಗದ ಮೂಲಕ ಹಾದುಹೋಗುತ್ತಿರುವ ಹಾಗೆ, ನಿಮ್ಮ ಮನಸ್ಸಿನಲ್ಲಿ ಒಂದು ಕೃಷಿಮಾಡಲ್ಪಟ್ಟ ಎಣ್ಣೇಮರವನ್ನು ಚಿತ್ರಿಸಿಕೊಳ್ಳಿರಿ. ಮರವು ದೇವರ ಪ್ರಜೆಯನ್ನು ಪ್ರತಿನಿಧಿಸುತ್ತದೆ. ನಿರ್ದಿಷ್ಟವಾಗಿ, ಅದು ದೇವರ ವಿಶೇಷ ಪ್ರಜೆಯಾಗಿದ್ದ ಇಸ್ರಾಯೇಲ್ಯರನ್ನು ಪ್ರತಿನಿಧಿಸುತ್ತದೆ. ಹಳೆಯ ಒಡಂಬಡಿಕೆಯಲ್ಲಿ, ಎಣ್ಣೇ ಮರವು ಇಸ್ರಾಯೇಲ್ಯರಿಗೆ ಸಂಕೇತವಾಗಿತ್ತು (ಯೆರೆಮೀಯ 11:16, 17; ಹೋಶೇಯ 14:4-6). ದೇವರು ಲೋಕದೊಳಗೆ ಮೆಸ್ಸೀಯನನ್ನು ಕರೆತರುವ ಯೋಜನೆಯನ್ನು ಕಾರ್ಯರೂಪಕ್ಕೆ ತರುವವನಾಗಿ ಇಸ್ರಾಯೇಲನ್ನು ಕೃಷಿಮಾಡಿದನು—ಆ ಜನಾಂಗಕ್ಕೆ ವಿಶೇಷ ಗಮನವನ್ನು ಕೊಟ್ಟನು.

17ನೇ ವಚನವು **ಆದರೆ ಕೆಲವು ಕೊಂಬೆಗಳು ಮುರಿದುಹಾಕಲ್ಪಡಲು** ಎಂಬದಾಗಿ ಆರಂಭಗೊಳ್ಳುತ್ತದೆ. ಮುರಿದುಹಾಕಲ್ಪಟ್ಟ ಕೊಂಬೆಗಳು "ನಂಬದೆಹೋದದರಿಂದ ಮುರಿದುಹಾಕಲ್ಪಟ್ಟ" ಯೆಹೂದ್ಯರಾಗಿದ್ದರು (11:20). "ಕೆಲವರು" ಎಂಬುದು ಒಂದು ವಿಶಿಷ್ಟವಾದ ನ್ಯೂನೋಕ್ತಿಯಾಗಿರುತ್ತದೆ ಯಾಕೆಂದರೆ *ಬಹುಪಾಲು* ಯೆಹೂದ್ಯ "ಕೊಂಬೆಗಳು" ಯೇಸುವಿನಲ್ಲಿ ನಂಬಿಕೆಯಿಡುವದಕ್ಕೆ ನಿರಾಕರಿಸಿದ್ದರಿಂದಾಗಿ ಮುರಿದು ಹಾಕಲ್ಪಟ್ಟಿದ್ದವು.

ವಚನವು ಹೀಗೆ ಮುಂದುವರೆಯುತ್ತದೆ, **ಕಾಡೆಣ್ಣೇಮರದಂತಿರುವ ನೀನು ಅವುಗಳ ತಾವಿನಲ್ಲಿ ಕಸಿಕಟ್ಟಿಸಿಕೊಂಡವನಾಗಿ.** "ನೀನು" ಎಂಬುದು ಅನ್ಯಜನಾಂಗದ ಕ್ರೈಸ್ತರನ್ನು ಸೂಚಿಸುತ್ತದೆ (11:13). ಅವರ ಮೂಲವು "ಕಾಡೆಣ್ಣೇಮರ" ಎಂದು ಕರೆಯಲ್ಪಟ್ಟಿದೆ (11:24) ಯಾಕೆಂದರೆ, ಹಳೆಯ ಒಡಂಬಡಿಕೆಯ ಕಾಲದಲ್ಲಿ, ಅನ್ಯಜನರು ಯೆಹೂದ್ಯರ ರೀತಿಯಲ್ಲಿ ತೀಕ್ಷ್ಣವಾದ ಗಮನವನ್ನು ಪಡೆದುಕೊಂಡಿರಲಿಲ್ಲ. ಈಗ, ಹೇಗೂ, ದೇವರ ಅಂತಿಮ ಯೋಜನೆ ಹಾಗೂ ಸಂಕಲ್ಪಗಳಲ್ಲಿ ಪಾಲ್ಗೊಳ್ಳುವ ಅವಕಾಶವು ಅನ್ಯಜನರಿಗೆ ಕೊಡಲ್ಪಟ್ಟಿತ್ತು. ಯೇಸುವನ್ನು ಮತ್ತು ಆತನ ಮಾರ್ಗವನ್ನು ಅಂಗೀಕರಿಸಿಕೊಂಡಿದ್ದ ಅನ್ಯಜನರು ನಂಬಿಕೆಯಿಟ್ಟಿದ್ದ ಯೆಹೂದ್ಯರ "ತಾವಿನಲ್ಲಿ ಕಸಿಕಟ್ಟಿಸಿಕೊಂಡಿದ್ದರು."

17ನೇ ವಚನವು ಹೀಗೆ ಮುಕ್ತಾಯಗೊಳ್ಳುತ್ತದೆ, **ಊರೆಣ್ಣೇಮರದ** [ನಂಬಿಕೆಯಿಟ್ಟ ಯೆಹೂದ್ಯರು] **ರಸವತ್ತಾದ ಬೇರಿನಲ್ಲಿ ಪಾಲು ಹೊಂದಿದರೂ.** 16ನೇ ವಚನದಲ್ಲಿರುವ ಹಾಗೆಯೇ, ಬೇರು ಎಂಬುದನ್ನು ಪಿತೃಗಳೆಂಬದಾಗಿ—ವಿಶೇಷವಾಗಿ ದೇವರು ವಾಗ್ದಾನಗಳನ್ನು ಕೊಟ್ಟಿದ್ದ ಅಬ್ರಹಾಮನೆಂದು—ತಿಳಿದುಕೊಳ್ಳಬಹುದು. ಗ್ರೀಕ್ ವಾಕ್ಯದಲ್ಲಿ "ಬೇರಿನ ಫಲವಂತಿಕೆ [πιότης, *piotēs*]" ಎಂದಿರುತ್ತದೆ (ನೋಡಿರಿ KJV). ಇಲ್ಲಿ ಅದು ಬೇರುಗಳಿಂದ ಹರಿದು ಕಾಂಡಗಳ ಮೂಲಕ ಕೊಂಬೆಗಳಿಗೆ ಹೋಗುವ "ಪೋಷಣೆ ನೀಡುವ ಸಸ್ಯರಸವನ್ನು" ಸೂಚಿಸುತ್ತದೆ (NIV).

**ವಚನ 18.** ಪೌಲನು ಅನ್ವಯಿಸುವಿಕೆಯನ್ನು ಮಾಡುವದಕ್ಕೆ ಸಿದ್ಧನಾಗಿದ್ದನು. ಆತನು ತನ್ನ ಅನ್ಯಜನಾಂಗದ ವಾಚಕರಿಗೆ, **ಆ ಕೊಂಬೆಗಳನ್ನು ಕಡೆಗಣಿಸಿ ನಿನ್ನನ್ನು ಹೆಚ್ಚಿಸಿಕೊಳ್ಳಬೇಡ** ಎಂದು ಹೇಳುತ್ತಾನೆ. "ಹೆಚ್ಚಿಸಿಕೊಳ್ಳಬೇಡ" ಎಂಬುದು κατακαυχάομαι (*katakauchaomai*) ಎಂಬ ಪದದಿಂದ ಬಂದದ್ದಾಗಿದೆ. ಅದು καυχάομαι (*kauchaomai* "ಬಡಾಯಿ ಕೊಚ್ಚು" ಎಂದರ್ಥ) ಎಂಬ ಪದ ಮತ್ತು ತೀವ್ರಗೊಳಿಸುವ κατά (*kata*) ಎಂಬ ಪೂರ್ವಪ್ರತ್ಯಯದ ಸಂಯೋಜನೆಯಾಗಿರುತ್ತದೆ.

“ದುರಹಂಕಾರದಿಂದಿರಬೇಡಿರಿ” ಎಂಬುದರ ಬದಲಾಗಿ KJV ಯಲ್ಲಿ “ಅವರಿಗೆ ಹೋಲಿಸಿಕೊಂಡು ಹೆಚ್ಚಳಪಡಬೇಡ” ಎಂದಿರುತ್ತದೆ. “ಕೊಂಬೆಗಳು” ಎಂಬುದು “ನಂಬದೆಹೋದದರಿಂದ ಮುರಿದುಹಾಕಲ್ಪಟ್ಟ” ಯೆಹೂದ್ಯರೆಂದಷ್ಟೆ ಅರ್ಥವನ್ನು ಕೊಡಬಹುದಾಗಿದೆ (11:20), ಆದರೆ ಇಲ್ಲಿ ಬಹುಶಃ ಸಾಮಾನ್ಯ ಯೆಹೂದ್ಯರನ್ನು ಸೂಚಿಸಿ—“ಹುಟ್ಟುಕೊಂಬೆಗಳು” (11:21), ಅಂದರೆ ಇನ್ನೂ “ಮರದಲ್ಲಿ” ಇದ್ದ ಯೆಹೂದಿ ಕ್ರೈಸ್ತರು ಸೇರಿದಂತೆ—ಹೇಳಿರಬಹುದಾಗಿದೆ. ಗತಕಾಲದಲ್ಲಿ ಯೆಹೂದ್ಯರು ಅನ್ಯಜನರ ವಿರುದ್ಧ ವೈಷಮ್ಯದಿಂದಿದ್ದರು; ಆದರೆ ಈಗ ಪರಿಸ್ಥಿತಿ ತಿರುಗುಮುರುಗಾಗಿತ್ತು. ಒಬ್ಬ ಗರ್ವಪಟ್ಟುಕೊಳ್ಳುವ ಅನ್ಯಜನಾಂಗದವನು ಯೆಹೂದ್ಯನೊಬ್ಬನಿಗೆ, “ದೇವರು ನಿನ್ನನ್ನು ತಿರಸ್ಕರಿಸಿ ನನ್ನನ್ನು ಸ್ವೀಕರಿಸಿಕೊಂಡಿದ್ದಾನೆ” ಎಂದು ಹೇಳುವದನ್ನು ಊಹಿಸಿಕೊಳ್ಳುವದು ಸುಲಭವಾಗಿರುತ್ತದೆ!

ಪೌಲನು ಮುಂದುವರೆಯುತ್ತಾ ಅನ್ಯಜನರಲ್ಲಿದ್ದ ಉಬ್ಬಿದ ಮನಸ್ಸನ್ನು ಚುಚ್ಚಿ ಒಡೆಯುತ್ತಾನೆ, **ಹೆಚ್ಚಿಸಿಕೊಂಡರೂ ಆ ಬೇರಿಗೆ ನೀನು ಆಧಾರವಲ್ಲ, ಅದು ನಿನಗೆ ಆಧಾರವಾಗಿದೆಯಷ್ಟೆ.** ಸಸ್ಯರಸವು ಕೊಂಬೆಗಳಿಂದ ಬೇರಿಗೆ ಹರಿಯಲಿಲ್ಲ, ಆದರೆ ಬೇರಿನಿಂದ ಕೊಂಬೆಗಳಿಗೆ ಹರಿಯುತ್ತದೆ. ಆ ಮೂಲಕ, ಪೌಲನು ಅನ್ಯಜನಾಂಗದ ಕ್ರೈಸ್ತರಿಗೆ ಹೇಳಿದ್ದೇನೆಂದರೆ, “ನಿಮ್ಮ ಗತಕಾಲದ ಯಾವುದರಿಂದಲೂ ಯೆಹೂದ್ಯರು ಪ್ರಯೋಜನವನ್ನು ಪಡೆಯುತ್ತಿಲ್ಲ. ಬದಲಾಗಿ, ಯೆಹೂದ್ಯರ ಶಾರೀರಿಕ ಮೂಲಪಿತೃಗಳಿಗೆ ದೀರ್ಘಕಾಲದ ಹಿಂದೆ ಕೊಡಲ್ಪಟ್ಟ ವಾಗ್ದಾನಗಳ ಪ್ರಯೋಜನವನ್ನು ನೀವೇ ಪಡೆಯುತ್ತಿದ್ದೀರಿ.” ತಾವು ಅನುಭವಿಸಿದ ಆತ್ಮೀಕ ಆಶೀರ್ವಾದಗಳು ಯೆಹೂದಿ ನೆಲದಲ್ಲಿ ಬೇರೂರಿದ್ದವೆಂಬುದನ್ನು ಅನ್ಯಜನಾಂಗದ ಕ್ರೈಸ್ತರು ಅರ್ಥಮಾಡಿಕೊಳ್ಳುವ ಅಗತ್ಯವಿದೆ. ಯೇಸು ಸಮಾರ್ಯದ ಸ್ತ್ರೀಗೆ, “ರಕ್ಷಣೆಯು ಯೆಹೂದ್ಯರೊಳಗಿಂದ ಬರುತ್ತದಷ್ಟೆ” ಎಂದು ಹೇಳಿದ್ದನು (ಯೋಹಾನ 4:22).

ರೋಮಾಪುರದವರಿಗೆ ಪತ್ರಿಕೆಯ ಈ ವಿಭಾಗವನ್ನು ಬರೆಯುವದರಲ್ಲಿ, ಪೌಲನು ತನ್ನ ಅನ್ಯಜನಾಂಗದ ವಾಚಕರನ್ನು ದೀನತೆಗೆ ನಡಿಸುವದಕ್ಕೆ ಇಚ್ಛಿಸಿದನು. ಅವರು ಅನುಭವಿಸುತ್ತಿರುವ ಆಶೀರ್ವಾದಗಳು ಅವರಿಗೆ ಅವರ ಯಾವದೇ ಅರ್ಹತೆ ಹಾಗೂ ಶ್ಲಾಘ್ಯದ ಕಾರಣದಿಂದ ಬಂದವುಗಳಾಗಿರಲಿಲ್ಲ. *ಕೃಪೆಯಿಂದ*, ದೇವರು ಅವರನ್ನು “ಕಸಿಕಟ್ಟಿದ್ದನು” ಮತ್ತು ತಾನು ಯೆಹೂದಿ ಜನಾಂಗದ ಮೂಲಕ ಕಾರ್ಯಸಾಧಿಸಿದ ತನ್ನ ಯೋಜನೆ ಮತ್ತು ಸಂಕಲ್ಪಗಳ ಭಾಗವಾಗಿ ಅವರನ್ನು ಮಾಡಿದ್ದನು. ಅನ್ಯಜನಾಂಗದವರಿಗೆ ಗರ್ವಪಟ್ಟುಕೊಳ್ಳುವದಕ್ಕೆ ಯಾವ ಕಾರಣವೇ ಇರಲಿಲ್ಲ.

**ವಚನ 19.** ಪೌಲನು ಅನ್ಯಜನಾಂಗದ ಕ್ರೈಸ್ತರಿಂದ ಒಂದು ಆಕ್ಷೇಪಣೆಯನ್ನು ಎದುರುನೋಡಿದನು: **ಈ ಮಾತಿಗೆ—ನಾನು ಕಸಿಕಟ್ಟಿಸಿಕೊಳ್ಳುವಂತೆ** [ἵνα, *hina,* ‘*ಹೀಗಾಗುವ ಹಾಗೆ*’] **ಕೊಂಬೆಗಳು ಮುರಿದುಹಾಕಲ್ಪಟ್ಟವಲ್ಲಾ ಎಂದು ನೀನು ಹೇಳಬಹುದು.** ಈ ಆಕ್ಷೇಪಣೆಯಲ್ಲಿನ ಮಾತುಗಳನ್ನು ನೋಡುವದಾದರೆ ಯೆಹೂದ್ಯರು “ಮುರಿದುಹಾಕಲ್ಪಟ್ಟದ್ದು” ಅನ್ಯಜನಾಂಗದವರಿಗೆ *ಸ್ಥಳಾವಕಾಶ ಮಾಡುವದಕ್ಕಾಗಿ* ಎಂಬದಾಗಿ ಅನ್ಯಜನಾಂಗದಲ್ಲಿ ಕೆಲವರು ಭಾವಿಸಿಕೊಂಡಿದ್ದರೆಂದು ತೋರುತ್ತದೆ. ಅದು ಸತ್ಯವಾಗಿರಲಿಲ್ಲ. ಯೆಹೂದ್ಯರು ನಂಬಿಕೆಯಿಡುವದಕ್ಕೆ ವಿಫಲರಾಗಿದ್ದರಿಂದಲೇ ಮುರಿದು

ಹಾಕಲ್ಪಟ್ಟಿದ್ದರು (11:20). ಯೆಹೂದ್ಯರು ನಂಬಿಕೆಯಿಟ್ಟಿದ್ದರೂ, ನಂಬಿಕೆಯಿಡುವ ಅನ್ಯಜನರಿಗೋಸ್ಕರವಾಗಿ "ಮರ"ದಲ್ಲಿ ಸ್ಥಳಾವಕಾಶವು ಇದ್ದೇ ಇರುತ್ತಿತ್ತು.

**ವಚನ 20.** ವಿಷಯವು ಹಾಗಿರುವಾಗ, 20ನೇ ವಚನದಲ್ಲಿ ಪೌಲನ ಪ್ರತ್ಯುತ್ತರವು ಸಕಾರಾತ್ಮಕವಾಗಿಯಲ್ಲ, ನಕಾರಾತ್ಮವಾಗಿರುವದೆಂದು ನಾವು ನಿರೀಕ್ಷಿಸುವೆವು—ಆದರೆ ವಚನವು καλῶς (*kalōs*) ಎಂಬ ಪದದಿಂದ ಆರಂಭಗೊಳ್ಳುತ್ತದೆ, ಅದರ ಮೂಲಭೂತ ಅರ್ಥವು "ಒಳ್ಳೇದು" ಅಥವಾ "ನಿಜವೇ" (ನೋಡಿರಿ KJV). NASBಯು *kalōs* ಎಂಬುದನ್ನು **ಭಾಗಶಃ ಸರಿಯೇ,** ಎಂದು ಅನುವಾದಿಸುತ್ತದೆ, ಮತ್ತು ನಂತರ **ಅವರು ಅಪನಂಬಿಕೆಯ ನಿಮಿತ್ತ ಮುರಿದುಹಾಕಲ್ಪಟ್ಟರು, ಆದರೆ ನೀನು ನಂಬಿಕೆಯಿಂದಾಗಿ ನಿಂತಿರುವಿ** ಎಂದು ಸೇರ್ಪಡೆಗೊಳಿಸುತ್ತದೆ. ನಾವು NASBಯ ಪರಿಭಾಷೆಯನ್ನು ಉಪಯೋಗಿಸುವದಾದರೆ, ಪೌಲನು ಇಲ್ಲಿ ಒಂದು ವಿಪರ್ಯಾಸದ ಸ್ಪರ್ಶದೊಂದಿಗೆ "ನೀನು ಹೇಳಿದ್ದು ಭಾಗಶಃ ಸರಿಯೇ" ಎಂಬದಾಗಿ ಹೇಳುತ್ತಿರುವದನ್ನು ಕಲ್ಪಿಸಿಕೊಳ್ಳಬಹುದು.[21] ಬಹುಶಃ ಆತನು ಮುಂಚಿನ ಹೇಳಿಕೆಯೊಂದಿಗೆ ಭಾಗಶಃ ಸಮ್ಮತಿ ಹೊಂದಿದ್ದನು: ಯೆಹೂದ್ಯರು ಮುರಿದು ಹಾಕಲ್ಪಟ್ಟಿದ್ದಾರೆ ಮತ್ತು ಅನ್ಯಜನಾಂಗದವರು ಕಸಿಕಟ್ಟಲ್ಪಟ್ಟಿದ್ದಾರೆಂಬ ವಾಸ್ತವಾಂಶ. ಅದು 20ನೇ ವಚನದ ಮೊದಲ ಭಾಗವು ಈ ರೀತಿಯಲ್ಲಿ ಇರುವಂತೆ ಮಾಡುತ್ತದೆ: "ಕೊಂಬೆಗಳು ಮುರಿದು ಹಾಕಲ್ಪಟ್ಟವೆಂಬುದು ನಿಜವೇ, ಆದರೆ ಅದಕ್ಕೆ ಕಾರಣ ನೀವು ಕಸಿಕಟ್ಟಲ್ಪಡುವಂತೆ *ಆಗಬೇಕು* ಎಂಬುದಾಗಿರಲಿಲ್ಲ. ಬದಲಾಗಿ, ಅವರು *ನಂಬಿಕೆ*ಯಿಡಲಿಲ್ಲ ಎಂಬ ಕಾರಣಕ್ಕೆ ಮುರಿದು ಹಾಕಲ್ಪಟ್ಟರು" (ನೋಡಿರಿ SEB).

ಯೆಹೂದ್ಯರು "ನಂಬದೆಹೋದದರಿಂದ ಮುರಿದುಹಾಕಲ್ಪಟ್ಟರು," ಆದರೆ ಅನ್ಯಜನರು "ನಿಂತಿರುವದು [ನಿಲ್ಲುವುದು] ನಂಬಿಕೆಯಿಂದಲೇ." ಅವರ ನಂಬಿಕೆಯ ಕಾರಣದಿಂದ, ಅನ್ಯಜನರು ಕೃಷಿಮಾಡಲ್ಪಟ್ಟ ಎಣ್ಣೇಮರದಲ್ಲಿ ಕಸಿಕಟ್ಟಲ್ಪಟ್ಟಿದ್ದರು, ಮತ್ತು ಅವರು ನಂಬಿಕೆಯಲ್ಲಿ ಮುಂದುವರೆಯುವ ಕಾರಣದಿಂದಾಗಿ ಆ ಮರದ ಭಾಗವಾಗಿಯೇ ಉಳಿದಿರುತ್ತಾರೆ. NEBಯಲ್ಲಿ "ನಂಬಿಕೆಯಿಂದ ನೀವು ನಿಮ್ಮ ಸ್ಥಾನವನ್ನು ಹಿಡಿದುಕೊಂಡಿರುತ್ತೀರಿ" ಎಂದಿರುತ್ತದೆ.

ಬಳಿಕ ಪೌಲನು ಪುನಃ ಹೆಚ್ಚಿಸಿಕೊಳ್ಳುವಿಕೆಯ ಚರ್ಚೆಯಾಂಶಕ್ಕೆ ಹಿಂದಿರುಗುತ್ತಾನೆ. ಆತನು ಹೀಗೆ ಹೇಳುತ್ತಾನೆ, **ಗರ್ವಪಡಬೇಡ, ಭಯದಿಂದಿರು.** ಗ್ರೀಕ್ ನಲ್ಲಿ "ಮೇಲಾದವುಗಳ ಮೇಲೆ ಮನಸ್ಸಿಡಬೇಡಿರಿ" ಎಂದಿರುತ್ತದೆ. ὑψηλός (*hupsēlos*) ಎಂಬ ಕ್ರಿಯಾಪದವು "ಉನ್ನತ" ಅಥವಾ "ಎತ್ತರ"ದಲ್ಲಿರುವ ಸಂಗತಿಯನ್ನು ಸೂಚಿಸುತ್ತದೆ[22] (ನೋಡಿರಿ KJV). ಮುಂದಿನ ಅಧ್ಯಾಯದಲ್ಲಿ, ಪೌಲನು ಎಲ್ಲಾ ಕ್ರೈಸ್ತರಿಗೆ ಬುದ್ಧಿವಾದವನ್ನು ಹೇಳುತ್ತಾನೆ, ಏನೆಂದರೆ "ಯಾರೂ ತನ್ನ ಯೋಗ್ಯತೆಗೆ ಮೀರಿ ತನ್ನನ್ನು ಭಾವಿಸಿಕೊಳ್ಳದೆ"[23] ಇರಲಿ ಎಂಬದೆ (12:3). ಇಲ್ಲಿ ಒತ್ತಿ ಹೇಳಲಾಗಿರುವ ಪರಿಭಾಷೆಯಲ್ಲಿ, ಅದರ ಮೂಲಕ ಪೌಲನು, ಅನ್ಯಜನಾಂಗದ ವಾಚಕರಿಗೆ "ಗರ್ವಿಷ್ಠರಾಗಿರಬೇಡಿರಿ, ಭಯದಿಂದಿರಿ" ಎಂದು ಹೇಳುತ್ತಿದ್ದಾನೆ. "ಭಯದಿಂದಿರು" (φοβέω, *phobeō* ಎಂಬದರಿಂದ ಬಂದಿರುವ) ಎಂಬ ಪದವು ಸ್ತಂಬನಗೊಳಿಸಿ ಬಿಡುವ ಭಯ ಎಂಬ ಭಾವಾರ್ಥವನ್ನು ಕೊಡುವದಿಲ್ಲ, ಆದರೆ ಬದಲಾಗಿ ಅದು ಅಪನಂಬಿಕೆಯಿಂದಾಗುವ ಪರಿಣಾಮಗಳ ಕುರಿತಾಗಿ ಒಂದು ಬಲವಾದ ಹಾಗೂ ಆರೋಗ್ಯಕರ ಭಯವನ್ನು ಸೂಚಿಸುತ್ತದೆ.[24]

**ವಚನ 21.** ಈ ಸಹೋದರರಿಗೆ, ಪೌಲನು ಇಲ್ಲೊಂದು ಎಚ್ಚರಿಕೆಯನ್ನು ಕೊಡುತ್ತಿದ್ದಾನೆ: **ದೇವರು ಹುಟ್ಟುಕೊಂಬೆಗಳನ್ನು** [ಯೆಹೂದ್ಯರನ್ನು] **ಉಳಿಸದೆ ಇದ್ದ ಮೇಲೆ ನಿನ್ನನ್ನೂ** [ಅನ್ಯಜನರನ್ನು] **ಉಳಿಸುವದಿಲ್ಲ.** ಯೆಹೂದ್ಯರು ನಂಬಲಿಲ್ಲವೆಂಬ ಕಾರಣಕ್ಕೆ ದೇವರು ಅವರನ್ನು "ಮುರಿದುಹಾಕಿದನು." ವಿಷಯವು ಹಾಗಿರುವಾಗ, ಅನ್ಯಜನರು ನಂಬಿಕೆಯಲ್ಲಿ ಮುಂದುವರೆಯದಿದ್ದಲ್ಲಿ ಅವರನ್ನು ಸಹ "ಮುರಿದುಹಾಕುವದಕ್ಕೆ" ದೇವರು ಹಿಂದುಮುಂದು ನೋಡುವದಿಲ್ಲ.

**ವಚನ 22.** ಮುಂದಿನ ವಚನವು ದೇವರ ಗುಣಸ್ವಭಾವದ ಕುರಿತಾದ ಒಂದು ಅತ್ಯುತ್ಕೃಷ್ಠ ವರ್ಣನೆಯೊಂದಿಗೆ ಆರಂಭಗೊಳ್ಳುತ್ತದೆ: **ಆದದರಿಂದ ದೇವರ ದಯೆಯನ್ನೂ ಕಾಠಿಣ್ಯವನ್ನೂ ನೋಡು.**[25] Wessel ಮುಕ್ತಾಯಕ್ಕೆ ಬಂದದ್ದೇನೆಂದರೆ, "ದೇವರ ಕುರಿತ ಯಾವದೇ ಪರ್ಯಾಪ್ತ ಸಿದ್ಧಾಂತವು ಈ ಎರಡು ಅಂಶಗಳನ್ನು ಒಳಗೊಂಡಿರತಕ್ಕದ್ದು. ನಾವು ಆತನ ದಯೆಯನ್ನು ನಿರ್ಲಕ್ಷಿಸಿದರೆ, ದೇವರು ಒಬ್ಬ ಕಠೋರ ಪ್ರಜಾಪೀಡಕನಂತೆ ತೋರುವನು; ನಾವು ಆತನ ನಿಷ್ಠುರತೆಯನ್ನು [ಕಾಠಿಣ್ಯವನ್ನು] ನಿರ್ಲಕ್ಷಿಸುವಾಗ, ಆತನು ಒಬ್ಬ ಹುಚ್ಚುಪ್ರೀತಿಯನ್ನು ತೋರಿಸುವ ತಂದೆಯಂಬಂತೆ ತೋರುವನು."[26]

ಪೌಲನು ಹೀಗೆ ಬರೆಯುತ್ತಾನೆ, **ಬಿದ್ದವರ** [ಅಪನಂಬಿಕೆಯುಳ್ಳ ಯೆಹೂದ್ಯರು] **ಕಡೆಗೆ ಕಾಠಿಣ್ಯ; ನಿನ್ನ ಕಡೆಗೆ** [ನಂಬಿಕೆಯಿಟ್ಟಿರುವ ಅನ್ಯಜನರು] **. . . ದಯೆ.** ಬಳಿಕ ಆತನು ಮುಂದುವರೆದು ಈ ಸಂಯಮದ ಮಾತುಗಳನ್ನು ಹೇಳುತ್ತಾನೆ: **ನೀನು ದೇವರ ದಯೆಯನ್ನು ಆಶ್ರಯಿಸಿಕೊಂಡೇ ಇದ್ದರೆ ಆತನ ದಯೆ; ಇಲ್ಲವಾದರೆ ನಿನ್ನನ್ನೂ ಕಡಿದುಹಾಕುವನು.** "ದೇವರ ದಯೆಯನ್ನು ಆಶ್ರಯಿಸಿಕೊಂಡೇ ಇದ್ದರೆ" ಎಂಬುದು ದೇವರಿಂದ ಅನುಗ್ರಹಿಸಲ್ಪಟ್ಟಿರುವ ಆಶೀರ್ವಾದಗಳನ್ನು ನಿರಂತರವಾಗಿ ಅನುಭವಿಸುವಂತಾಗಲು ಅವರು ನಂಬಿಕೆಭರಿತರಾಗಿಯೇ ಇರಬೇಕು ಎಂಬುದನ್ನು ಸೂಚಿಸುತ್ತದೆ. ಖಂಡಿತವಾಗಿಯೂ, ರಕ್ಷಣೆಯುಂಟು ಮಾಡುವ ನಂಬಿಕೆಯಲ್ಲಿ ಹೃದಯ–ಪೂರ್ವಕವಾದ ವಿಧೇಯತೆಯು ಸಹ ಸೇರಿರತಕ್ಕದ್ದು (6:17; ನೋಡಿರಿ 1:5; 16:26).

Douglas J. Moo ಅಭಿಪ್ರಾಯ ಪಟ್ಟದ್ದೇನೆಂದರೆ ನಾವು ಆಲೋಚಿಸುತ್ತಿರುವ ವಚನಗಳು "ನಂಬಿಕೆಯಲ್ಲಿ ಮುಂದುವರೆಯುವ ಕುರಿತಾಗಿ ಹೊಸ ಒಡಂಬಡಿಕೆಯಲ್ಲಿ ನಮಗೆ ಬೇರೆ ಯಾವ ಕಡೆಯಲ್ಲಾದರೂ ಸಿಕ್ಕುವ ಎಚ್ಚರಿಕೆಗಳಿಗಿಂತಲೂ ಅತ್ಯಂಥ ಗಂಭೀರವಾದ ಎಚ್ಚರಿಕೆಯ ರಚನೆ" ಆಗಿರುತ್ತವೆ.[27] ಅನ್ಯಜನಾಂಗದ ಕ್ರೈಸ್ತರಿಗೆ ಗರ್ವಪಟ್ಟುಕೊಳ್ಳಲು ಯಾವದೇ ಕಾರಣವಿರಲಿಲ್ಲ ಯಾಕೆಂದರೆ ಅವರು ದೇವರಿಂದ ಸ್ವೀಕಾರವಾಗಲ್ಪಟ್ಟಿದ್ದು ಅಪರಿವರ್ತನೀಯ ಆಗಿರಲಿಲ್ಲ. ಅವರು "ದೇವರ ದಯೆಯನ್ನು ಆಶ್ರಯಿಸಿಕೊಂಡೇ" ಇರದಿದ್ದರೆ ಯೆಹೂದ್ಯರು ಕಡಿದುಹಾಕಲ್ಪಟ್ಟಂತೆಯೇ ಅವರು ಸಹ ಕಡಿದುಹಾಕಲ್ಪಡುವ ಸಂಭವವಿತ್ತು. Eugene Peterson ಈ ಭಾವಾರ್ಥವನ್ನು ನೀಡುತ್ತಾನೆ: "ನೀವು ಸತ್ತ ಮರವಾದ ಕ್ಷಣವೇ, ನೀವು ಹೊರಕ್ಕೆ ಹೋಗುವಿರಿ" (MSG).

**ವಚನಗಳು 23, 24.** ದೇವರ ಕೃಪೆಯ ವಿಷಯದಲ್ಲಿ, ಯೆಹೂದ್ಯರು ಹಳೆಯ ಒಡಂಬಡಿಕೆಯ ಕಾಲದಲ್ಲಿ "ಒಳಗೆ" ಇದ್ದರು, ಮತ್ತು ಬಹುತೇಕ ಅನ್ಯಜನರು "ಹೊರಗೆ" ಇದ್ದರು (ಎಫೆಸ 2:12). ರೋಮಾಪುರದವರಿಗೆ ಪುಸ್ತಕವು ಬರೆಯಲ್ಪಡುವ ವೇಳೆಯಲ್ಲಿ, ಅನೇಕ ಅನ್ಯಜನರು "ಒಳಗೆ" ಇದ್ದರು ಮತ್ತು ಬಹುತೇಕ ಯೆಹೂದ್ಯರು "ಹೊರಗೆ" ಇದ್ದರು.

ಹೇಗೂ, ಆ ಪರಿಸ್ಥಿತಿಯು ಪುನಃ ತಿರುಗುಮುರುಗಾಗುವ ಸಾಧ್ಯತೆಯಿತ್ತು. ಅನ್ಯಜನಾಂಗದ ಕ್ರೈಸ್ತರು "ಕಡಿದುಹಾಕ"ಲ್ಪಡುವ ಸಾಧ್ಯತೆಯಿದೆ ಎಂದು ಹೇಳಿದ ಮೇಲೆ, ಪೌಲನು ಮುಂದುವರೆದು, **ಇಸ್ರಾಯೇಲ್ಯರು ಕೂಡ ಇನ್ನು ಅಪನಂಬಿಕೆಯಲ್ಲಿ ನಿಲ್ಲದ ಪಕ್ಷಕ್ಕೆ ಕಸಿಕಟ್ಟಲ್ಪಡುವರು** ಎಂದು ಹೇಳುತ್ತಾನೆ. ದೇವರು ಯೆಹೂದ್ಯರಿಗೆ ದ್ವಾರವನ್ನು ಮುಚ್ಚಿ ಬಿಟ್ಟು ಅದು ಇನ್ನೆಂದಿಗೂ ತೆರೆಯಲ್ಪಡದಂತೆ ಭದ್ರಪಡಿಸಿರಲಿಲ್ಲ.

23ನೇ ವಚನದಲ್ಲಿನ "ಪಕ್ಷಕ್ಕೆ" ಎಂಬ ಪದವು ಮಹತ್ವಪೂರ್ಣವಾಗಿರುತ್ತದೆ. ಪೌಲನು "ಅವರು ತಮ್ಮ ಅಪನಂಬಿಕೆಯಲ್ಲಿ ನಿಲ್ಲದಿರು*ವಾಗ*" ಎಂದು ಹೇಳಲಿಲ್ಲ, ಆದರೆ "ಅವರು ತಮ್ಮ ನಂಬಿಕೆಯಲ್ಲಿ ನಿಲ್ಲದ *ಪಕ್ಷಕ್ಕೆ*" ಎಂದು ಹೇಳಿದನು. Hendriksen ಹೀಗೆ ವ್ಯಾಖ್ಯಾನಿಸುತ್ತಾನೆ, "ಒಂದು ದಿನ ಎಲ್ಲಾ ಯೆಹೂದ್ಯರು ತಮ್ಮ ಸ್ವಂತ ಎಣ್ಣೇಮರದಲ್ಲಿ ಕಸಿಕಟ್ಟಲ್ಪಡಲಿರುವರು, ಅವರು ರಕ್ಷಣೆ ಹೊಂದಲಿರುವರು ಎಂದಾಗಲಿ ಅಥವಾ ಎಂಬರ್ಥವನ್ನಾಗಲಿ ಅಪೊಸ್ತಲನು ನೀಡಲಿಲ್ಲ."[28] ನಮ್ಮೆಲ್ಲರ ಹಾಗೆಯೇ, ಯೆಹೂದ್ಯರು ಸ್ವತಂತ್ರವಾದ ನೈತಿಕ ಪ್ರತಿನಿಧಿಗಳಾಗಿದ್ದಾರೆ ಮತ್ತು ನಂಬಿಕೆಯಿಡುವದಕ್ಕೆ ಅಥವಾ ನಂಬಿಕೆಯಿಡದೆ ಇರುವದಕ್ಕೆ ಆಯ್ಕೆಯನ್ನು ಮಾಡಿಕೊಳ್ಳಬಲ್ಲರು.

"ನಂಬಿಕೆಯಿಂದ ಹಿಂಜರಿಯುವಿಕೆ ಅಸಾಧ್ಯ" ಎಂಬ ಸಿದ್ಧಾಂತವನ್ನು ಪ್ರತಿಪಾದಿಸುವವರು ಕೆಲವು ಸಾರಿ ದೇವರ ಮಗುವೊಬ್ಬನು ಪಾಪ ಮಾಡಿ ಬಿದ್ದುಹೋಗಬಲ್ಲನು ಎಂಬ ಉಪದೇಶಕ್ಕೆ ಸವಾಲೊಡ್ಡುತ್ತಾರೆ. ಅವರು ಕುಚೋದ್ಯ ಮಾಡುವವರಾಗಿ, "ಅಂದರೆ ವಿಶ್ವಾಸಿಯೊಬ್ಬನು ಕಳೆದು ಹೋಗಬಲ್ಲನು ಎಂದು ನೀನು ಹೇಳುತ್ತೀರುವಿಯೋ?" ಎಂದು ಕೇಳುತ್ತಾರೆ. ಇಂಥವರು ನಮ್ಮ ಅಧ್ಯಯನದ ವಚನಗಳಲ್ಲಿ ಪೌಲನು ಏನು ಹೇಳಿದನೆಂಬುದನ್ನು ಜಾಗರೂಕತೆಯಿಂದ ಪರಿಗಣಿಸಬೇಕಾಗಿರುತ್ತದೆ. ಅಪೊಸ್ತಲನು ಇಲ್ಲ ಒಬ್ಬ ವಿಶ್ವಾಸಿಯಲ್ಲದವನು ವಿಶ್ವಾಸಿಯಾಗಿ ರಕ್ಷಣೆ ಹೊಂದುವದು ಸಾಧ್ಯವಿದೆ (11:23)—ಮತ್ತು ಒಬ್ಬ ವಿಶ್ವಾಸಿಯು ಅವಿಶ್ವಾಸಿಯಾಗಿ ಕಳೆದು ಹೋಗುವದಕ್ಕೆ ಸಾಧ್ಯವಿದೆ (11:20-22)—ಎಂಬುದನ್ನು ಸ್ಪಷ್ಟಗೊಳಿಸುತ್ತಾನೆ.

ನಾವು ಕ್ರೈಸ್ತರಾದ ಬಳಿಕವೂ, ನಾವು ಸ್ವತಂತ್ರ ನೈತಿಕ ಪ್ರತಿನಿಧಿಗಳಾಗಿ ಉಳಿಯುತ್ತೇವೆ. ನಾವು "ದೇವರ ದಯೆಯನ್ನು ಆಶ್ರಯಿಸಿಕೊಂಡೇ" ಇರಬಲ್ಲೆವು, ಅಥವಾ ಆತನು ಹೇಳಿದಂತೆ ಜೀವಿಸದಿರುವದಕ್ಕೆ ತೀರ್ಮಾನಿಸಿಕೊಳ್ಳಬಲ್ಲೆವು. ಇದು ಹೇಗೆ ನಾವು ಅಧ್ಯಯನ ಮಾಡುತ್ತಿರುವ ಗರ್ವದ ವಿಷಯಕ್ಕೆ ಸಂಬಂಧಿಸುತ್ತದೆ? F. F. Bruce ವಾದಿಸುವದೇನೆಂದರೆ "ಒಂದು ಗರ್ವದ ಆತ್ಮವು" ನಮ್ಮನ್ನು "ದೇವರ ಕೃಪೆಯ ಮೇಲಿನ ಅವಲಂಭನೆಯನ್ನು ಮರೆಯುವಂತೆ ಮಾಡಿ ದೇವರಲ್ಲಿ ನಂಬಿಕೆಯಿಡುವ ಬದಲಿಗೆ ತನ್ನ ಸಾಮರ್ಥ್ಯದಲ್ಲಿಯೇ ನಂಬಿಕೆಯಿಡುವಂತೆ" ನಡಿಸುತ್ತದೆ. ಅದು ಸಂಭವಿಸುವದಾದಲ್ಲಿ, ನಾವು ಸಹ, "ಕಡಿದುಹಾಕಲ್ಪಡುವೆವು."[29] ಪೌಲನು ನಮ್ಮೊಬ್ಬೊಬ್ಬರನ್ನು "ಕ್ರಿಸ್ತನಂಬಿಕೆಯಲ್ಲಿ ಇದ್ದೀರೋ ಇಲ್ಲವೋ ಎಂದು ನಿಮ್ಮನ್ನು ನೀವೇ ಪರೀಕ್ಷಿಸಿಕೊಳ್ಳಿರಿ" ಎಂಬದಾಗಿ ಕರೆ ಕೊಡುತ್ತಾನೆ (2 ಕೊರಿಂಥ 13:5).

ಯೆಹೂದ್ಯರು "ಕೂಡ ಇನ್ನು ಅಪನಂಬಿಕೆಯಲ್ಲಿ ನಿಲ್ಲದ ಪಕ್ಷಕ್ಕೆ" ದೇವರು ಅವರನ್ನು ಪುನಃ ಕಸಿಕಟ್ಟುವನು ಎಂದು ಹೇಳಿದ ಬಳಿಕ, ಪೌಲನು ಹೀಗೆ ಮುಂದುವರೆಸುತ್ತಾನೆ,

**ದೇವರು ಅವರನ್ನು ತಿರಿಗಿ ಕಸಿಕಟ್ಟುವದಕ್ಕೆ ಸಮರ್ಥನಾಗಿದ್ದಾನೆ. ನೀನು ಹುಟ್ಟು**

**ಕಾಡುಮರದಿಂದ ಕಡಿದು ತೆಗೆಯಲ್ಪಟ್ಟು ನಿನಗೆ ಸಂಬಂಧಪಡದ ಊರು ಮರದಲ್ಲಿ ಕಸಿಕಟ್ಟಿಸಿಕೊಂಡವನಾದ ಮೇಲೆ ಅದರಲ್ಲಿ ಹುಟ್ಟಿದ ಕೊಂಬೆಗಳಾಗಿರುವ ಅವರು ಸ್ವಂತ ಮರದಲ್ಲಿ ಕಸಿಕಟ್ಟಲ್ಪಡುವದು ಎಷ್ಟೋ ಸಹಜವಾಗಿದೆಯಲ್ಲವೇ.**

ತರ್ಕಬದ್ಧತೆಯು ನಮಗೆ ತಿಳಿಸುವದೇನೆಂದರೆ "ಅಪರಿಚಿತ" ಕೊಂಬೆಗಳನ್ನು (ಅನ್ಯಜನರು) ಕಸಿಕಟ್ಟುವದಕ್ಕಿಂತಲೂ "ಅದರಲ್ಲಿ ಹುಟ್ಟಿದ" ಸಹಜ ಕೊಂಬೆಗಳನ್ನು (ಯೆಹೂದ್ಯರು) ಕಸಿಕಟ್ಟುವದು ಸುಲಭವಾಗಿರುತ್ತದೆ ಎಂಬುದೆ.

ಕೆಲವು ಬರಹಗಾರರು ಈ ಹಂತದಲ್ಲಿ ಕ್ಷೋಭೆಗೊಳ್ಳುತ್ತಾರೆ. ಅವರು ಆಕ್ಷೇಪಣೆಯನ್ನೆತ್ತಿ ಒಬ್ಬ ಫಲೋದ್ಯಾನ ಪಾಲಕನು ಫಲಕೊಡದ ಕೊಂಬೆಗಳನ್ನು ಕಡಿದು ಹಾಕಿ (ನೋಡಿರಿ ಯೋಹಾನ 15:2) ಮತ್ತು ನಂತರ ಅದನ್ನು ಪುನಃ ಕಸಿಕಟ್ಟುವದಿಲ್ಲ ಎಂದು ಹೇಳುತ್ತಾರೆ. ಅಲ್ಲದೆ ಅವರು ಗಮನಕ್ಕೆ ತರುವದೇನೆಂದರೆ ಕಾಂಡದಿಂದ ಕತ್ತರಿಸಲ್ಪಟ್ಟ ಒಂದು ಕೊಂಬೆಯು ಶೀಘ್ರವೇ ಒಣಗಿ ಹೋಗುತ್ತದೆ ಮತ್ತು ಅದು ಸುಡುವದಕ್ಕಷ್ಟೆ ಉತ್ತಮವಾಗಿರುತ್ತದೆ (ನೋಡಿರಿ ಯೋಹಾನ 15:6); ಅದನ್ನು ಪುನಃ ಕಸಿಕಟ್ಟುವದು *ಅಸಾಧ್ಯವಾದದ್ದು* ಎಂಬುದೆ. ಅವರು ಪೌಲನನ್ನು ಕುರಿತು ಆತನೊಬ್ಬ ಪಟ್ಟಣದ ಹುಡುಗನಾಗಿದ್ದು ತೋಟಗಾರಿಕೆಯ ಬಗ್ಗೆ ತನ್ನ ಅಜ್ಞಾನವನ್ನು ತೋರಿಸುವವನಾಗಿ ದ್ದಾನೆಂದು ಭಾವಿಸುತ್ತಾರೆ. ಇಂಥವರಿಗೆ, "ಅಷ್ಟೊಂದು ರೋಮಾಂಚನಗೊಳ್ಳದಿರಿ. ಅಂತೂ, ಅದು ಕೇವಲ ಒಂದು *ದೃಷ್ಟಾಂತ*ವಷ್ಟೇ" ಎಂಬದಾಗಿ ಮೊದಲು ಹೇಳುವವರು ನಾವೇ ಆಗಿರುವೆವು. ಪೌಲನ ಉದ್ದೇಶವು ದೈವಿಕ ಸತ್ಯಗಳನ್ನು ಕಲಿಸುವದಾಗಿತ್ತೇ ಹೊರತು ತೋಟಗಾರಿಕೆಯ ಬಗ್ಗೆ ಒಂದು ಭಾಷಣವನ್ನು ಮಾಡುವದಾಗಿರಲಿಲ್ಲ. ಯೇಸು ಒಮ್ಮೆ ತನಗೆ ಲಕ್ಷಾಂತರ ರೂಪಾಯಿಗಳ ಸಾಲ ಹೊಂದಿದ್ದ ಸೇವಕನ ಸಾಲವನ್ನೆಲ್ಲಾ ಕ್ಷಮಿಸಿಬಿಟ್ಟ ಒಬ್ಬ ಯಜಮಾನನ ಕುರಿತು ಹೇಳಿದನು (ಮತ್ತಾಯ 18:23-27), ಇದೊಂದು ಸಂಭವಿಸುವದಕ್ಕೆ ಅತ್ಯಂಥ ಅಸಾಧ್ಯವಷ್ಟೇ! ಹಾಗಾದರೆ ಇದು ಯೇಸು ತನ್ನ ಕಾಲದಲ್ಲಿದ್ದ ಯಜಮಾನ ಹಾಗೂ ಸೇವಕನ ಸಂಬಂಧದ ಬಗ್ಗೆ ಅಜ್ಞಾನವಿತ್ತೆಂದು ಅರ್ಥವಾಗುತ್ತದೋ? ಇಲ್ಲ, ಅದೊಂದು ದೃಷ್ಟಾಂತವಾಗಿದೆಯಷ್ಟೆ.

ಎರಡನೆಯದಾಗಿ, ವಾಕ್ಯಭಾಗವು "*ಮನುಷ್ಯನು* ಅವರನ್ನು ತಿರಿಗಿ ಕಸಿಕಟ್ಟುವದಕ್ಕೆ ಸಮರ್ಥನು" ಎಂದು ಹೇಳುವದಿಲ್ಲ, ಆದರೆ "*ದೇವರು* ಅವರನ್ನು ತಿರಿಗಿ ಕಸಿಕಟ್ಟುವದಕ್ಕೆ ಸಮರ್ಥನು" ಎಂದು ಹೇಳುತ್ತದೆ. ಮತ್ತಾಯ 19:26ರಲ್ಲಿನ ಈ ಮಾತುಗಳು ಸೂಕ್ತವೆಂದು ತೋರುತ್ತವೆ: "ಇದು ಮನುಷ್ಯರಿಗೆ ಅಸಾಧ್ಯ; ಆದರೆ ದೇವರಿಗೆ ಎಲ್ಲವು ಸಾಧ್ಯವೇ." ಕರ್ತನು ಸತ್ತವರನ್ನು ಎಬ್ಬಿಸಲು ಶಕ್ತನಾಗಿರುವದರಿಂದ (ನೋಡಿರಿ 11:15), ಆತನು ಪುನಃ ಕಸಿಕಟ್ಟುವದಕ್ಕಾಗಿ ಒಂದು ಒಣಗಿಹೋಗಿರುವ ಕೊಂಬೆಯನ್ನು ಖಂಡಿತವಾಗಿಯೂ ಪುನರುಜ್ಜೀವಿಸಗೊಳಿಸಬಲ್ಲನು.

ಬಹುತೇಕ ಯೆಹೂದ್ಯರು ತಿರಸ್ಕರಿಸಲ್ಪಟ್ಟರು ಮತ್ತು ತಾವು ಸ್ವೀಕರಿಸಿಕೊಳ್ಳಲ್ಪಟ್ಟೆವು ಎಂಬ ಕಾರಣದಿಂದ ದುರಹಂಕಾರವುಳ್ಳವರಾಗಿ ಇರುವದಕ್ಕೆ ಅನ್ಯಜನರಿಗೆ ಏನಾದರೂ ಕಾರಣವು ಇತ್ತೋ? ಇಲ್ಲ, ಯಾಕೆಂದರೆ ಪರಿಸ್ಥಿತಿಯು ಪುನಃ ಸುಲಭವಾಗಿ ತಿರುಗುಮುರುಗಾಗುವದಕ್ಕೆ ಸಾಧ್ಯವಿತ್ತು. ಯೆಹೂದ್ಯರ ಸ್ವೀಕಾರವು ಈಗಲೂ ಸಾಧ್ಯವಿತ್ತು—ಯೆಹೂದ್ಯರು ತಮ್ಮ ಅಪನಂಬಿಕೆಯನ್ನು ಬಿಟ್ಟು ವಿಮುಖರಾದರೆ ಅದು ಸಾಧ್ಯವಿತ್ತು.

## ಯೆಹೂದ್ಯರ ತಿರಸ್ಕಾರವು ಮಾರ್ಪಡಿಸಲಾಗದ್ದಲ್ಲ (11:25-32)

[25]ಸಹೋದರರೇ, ನಿಮ್ಮನ್ನು ನೀವೇ ಬುದ್ಧಿವಂತರೆಂಬದಾಗಿ ಎಣಿಸಿಕೊಳ್ಳದಂತೆ ಇದುವರೆಗೆ ಗುಪ್ತವಾಗಿದ್ದ ಒಂದು ಸಂಗತಿ ನಿಮಗೆ ತಿಳಿದಿರಬೇಕೆಂದು ಅಪೇಕ್ಷಿಸುತ್ತೇನೆ; ಅದೇನಂದರೆ ಇಸ್ರಾಯೇಲ್ಯರಲ್ಲಿ ಒಂದು ಪಾಲು ಜನರಿಗೆ ಉಂಟಾದ ಮೊಂಡುತನವು ಯಾವಾಗಲೂ ಇರದೆ ಅನ್ಯಜನಗಳ ಸಮುದಾಯವು ದೇವರ ರಾಜ್ಯದಲ್ಲಿ ಸೇರುವ ತನಕ ಮಾತ್ರ ಇರುವದು; [26]ಆ ಮೇಲೆ ಇಸ್ರಾಯೇಲ್ ಜನವೆಲ್ಲಾ ರಕ್ಷಣೆಹೊಂದುವದು. ಇದಕ್ಕೆ ಆಧಾರವಾಗಿ ಶಾಸ್ತ್ರದಲ್ಲಿ—

ಬಿಡಿಸುವವನು ಚೀಯೋನಿನೊಳಗಿಂದ ಹೊರಟು ಬಂದು
ಯಾಕೋಬನಲ್ಲಿರುವ ಭಕ್ತಿಹೀನತೆ ಯನ್ನು ನಿವಾರಣೆಮಾಡುವನು.
[27]ನಾನು ಅವರ ಸಂಗಡ ಮಾಡಿಕೊಂಡ ಈ ಒಡಂಬಡಿಕೆಯು
ನಾನು ಅವರ ಪಾಪಗಳನ್ನು ಪರಿಹರಿಸು ವಾಗ ನೆರವೇರುವದು

ಎಂದು ಬರೆದದೆ. [28]ಅವರು ಸುವಾರ್ತೆಯನ್ನು ಬೇಡವೆಂದದ್ದರಿಂದ ದೇವರು ನಿಮಗೆ ಹಿತವನ್ನು ಉಂಟು ಮಾಡಿ ಅವರನ್ನು ಶತ್ರುಗಳೆಂದೆಣಿಸಿದ್ದಾನೆ. ಆದರೂ ಅವರು ತಾನು ಆರಿಸಿಕೊಂಡ ಅಬ್ರಹಾಮ ಇಸಾಕ ಯಾಕೋಬರೆಂಬ ಪಿತೃಗಳ ವಂಶಸ್ಥರಾಗಿರುವದರಿಂದ ಅವರನ್ನು ಪ್ರಿಯರೆಂದು ಎಣಿಸಿದ್ದಾನೆ. [29]ದೇವರು ವರಗಳನ್ನು ಅನುಗ್ರಹಿಸಿದ್ದಕ್ಕೂ ಜನರನ್ನು ಕರೆದದ್ದಕ್ಕೂ ಪಶ್ಚಾತ್ತಾಪಪಡುವವನಲ್ಲ. [30]ಯಾವ ಪ್ರಕಾರ ನೀವು ಪೂರ್ವದಲ್ಲಿ ಅವಿಧೇಯತೆಯರಾಗಿದ್ದರೂ ಈಗ ಅವರ ಅವಿಧೇಯತೆಯ ದೆಸೆಯಿಂದ ಕರುಣೆಹೊಂದಿದ್ದೀರೋ [31]ಅದೇ ಪ್ರಕಾರವಾಗಿ ಅವರು ಈಗ ಅವಿಧೇಯರಾಗಿದ್ದರೂ ನಿಮಗೆ ದೊರಕಿದ ಕರುಣೆಯನ್ನು ಹೊಂದುವರು. [32]ಯಾಕೆಂದರೆ ದೇವರು ಎಲ್ಲರಿಗೂ ಕರುಣೆಯನ್ನು ತೋರಿಸಬೇಕೆಂಬ ಉದ್ದೇಶವುಳ್ಳವನಾಗಿದ್ದು ಎಲ್ಲರನ್ನೂ ಅವಿಧೇಯತೆ ಯೆಂಬ ದುಃಸ್ಥಿತಿಯಲ್ಲಿ ಕಟ್ಟಿಹಾಕಿದ್ದಾನೆ.

**ವಚನಗಳು 25, 26a.** ಈ ವಿಭಾಗವು ರೋಮಾಪುರದವರಿಗೆ ಪುಸ್ತಕದಲ್ಲಿರುವ ಕೆಲವೊಂದು ಅತ್ಯಂಥ ಗೊಂಲಕ್ಕೀಡು ಮಾಡುವಂಥ ಪರಿಭಾಷೆಯೊಂದಿಗೆ ಆರಂಭಗೊಳ್ಳುತ್ತದೆ:

> ಸಹೋದರರೇ, ನಿಮ್ಮನ್ನು ನೀವೇ ಬುದ್ಧಿವಂತರೆಂಬದಾಗಿ ಎಣಿಸಿಕೊಳ್ಳದಂತೆ ಇದುವರೆಗೆ ಗುಪ್ತವಾಗಿದ್ದ ಒಂದು ಸಂಗತಿ ನಿಮಗೆ ತಿಳೀದಿರಬೇಕೆಂದು ಅಪೇಕ್ಷಿಸುತ್ತೇನೆ; ಅದೇನಂದರೆ ಇಸ್ರಾಯೇಲ್ಯರಲ್ಲಿ ಒಂದು ಪಾಲು ಜನರಿಗೆ ಉಂಟಾದ ಮೊಂಡುತನವು ಯಾವಾಗಲೂ ಇರದೆ ಅನ್ಯಜನಗಳ ಸಮುದಾಯವು ದೇವರ ರಾಜ್ಯದಲ್ಲಿ ಸೇರುವ ತನಕ ಮಾತ್ರ ಇರುವದು; ಆ ಮೇಲೆ ಇಸ್ರಾಯೇಲ್ ಜನವೆಲ್ಲಾ ರಕ್ಷಣೆಹೊಂದುವದು.

ಇದೊಂದು ಕಠಿಣವಾದ ಹಾಗೂ ವಿವಾದಾತ್ಮಕ ವಾಕ್ಯಭಾಗವಾಗಿರುವದರಿಂದ, ವಿವಿಧ ಅಭಿಪ್ರಾಯಗಳನ್ನು ಪರೀಕ್ಷಿಸಲಾಗುವದು ಮತ್ತು ವಿಮರ್ಶಿಸಲಾಗುವದು, ಮತ್ತು ಕೆಲವೊಂದು ಶಕ್ಯವಾದ ವ್ಯಾಖ್ಯೆಗಳನ್ನು ಒದಗಿಸಲಾಗುವದು.

ಈ ಸನ್ನಿವೇಶದಲ್ಲಿ, ಧಾರ್ಮಿಕ ಜಗತ್ತಿನಲ್ಲಿರುವ ಅನೇಕರು "ಅನ್ಯಜನರ ಸಂಪೂರ್ಣತೆ" ಯನ್ನು "ಅನ್ಯಜನರ ಪೂರ್ಣ ಸಂಖ್ಯೆ" ಎಂಬದಾಗಿ ಅರ್ಥೈಸುತ್ತಾರೆ. ದೇವರು

ಅನ್ಯಜನಾಂಗದಿಂದ ಇಂತಿಷ್ಟು ಸಂಖ್ಯೆಯ ಜನರು ಪರಿವರ್ತನೆಗೊಳ್ಳುವರೆಂದು ಲೆಕ್ಕ ಹಾಕಿಕೊಂಡಿದ್ದಾನೆಂದು ನಂಬುತ್ತಾರೆ. ಬಳಿಕ, ಆ ನಿರ್ದಿಷ್ಟವಾದ ಸಂಖ್ಯೆಯು ಪೂರ್ಣವಾದಾಗ, ಅವರು ಯೆಹೂದ್ಯರ ಅಖಂಡ ಪರಿವರ್ತನೆಯಾಗುವದೆಂದು ("ಇಸ್ರಾಯೇಲ್ ಜನವೆಲ್ಲಾ ರಕ್ಷಣೆಹೊಂದುವದು") ಎದುರುನೋಡುತ್ತಾರೆ. ಈ ಮಹತ್ವಪೂರ್ಣವಾದ ಘಟನೆಯು ಎರಡನೆಯ ಬರೋಣದಲ್ಲಿ ಅಥವಾ ಅದರ ಹತ್ತಿರದಲ್ಲಿ ಸಂಭವಿಸುವದೆಂದು ಇವರು ನಂಬುತ್ತಾರೆ.

ಈ ಅರ್ಥನಿರೂಪಣೆಯು ವ್ಯಾಪಕವಾಗಿರುತ್ತದೆ. ಅನೇಕ ವರ್ಷಗಳಿಂದಲೂ, ಸಹಸ್ರ ವರ್ಷಾಡಳಿತದ ಮುಂಚೆ ಕ್ರಿಸ್ತನು ಬರುವನೆಂದು ನಂಬುವವರು (premillennialists) "ಅಂತ್ಯಕಾಲದ" ಕುರಿತ ತಮ್ಮ ಬೋಧನೆಯಲ್ಲಿ ಆ ಚಿತ್ರಣವನ್ನು ಸ್ವಂತವಾಗಿಸಿಕೊಂಡಿರುತ್ತಾರೆ. ಅಷ್ಟುಮಾತ್ರವಲ್ಲದೆ, ಕರ್ತನ ಸಭೆಯ ಸದಸ್ಯರಿಂದ ಬರೆಯಲ್ಪಟ್ಟಿರುವ ಕೆಲವು ಹಳೆಯ ವ್ಯಾಖ್ಯಾನ ಗ್ರಂಥಗಳು ಸಹ ಈ ಭಾವನೆಗಳನ್ನು ಪ್ರತಿಫಲಿಸುತ್ತವೆ.[30] ಹೇಗೂ, ಆಶ್ಚರ್ಯವುಂಟು ಮಾಡುವ ಸಂಗತಿಯೇನೆಂದರೆ, ಅನೇಕ ವ್ಯಾಖ್ಯಾನ ಗ್ರಂಥಗಳು—ಸಹಸ್ರ ವರ್ಷಾಡಳಿತದ ಮುಂಚೆ ಕ್ರಿಸ್ತನು ಬರುವನೆಂದು ನಂಬುವ ಗುಂಪಿಗೆ ಸೇರದವರು ಸಹ—ಪೌಲನು 25 ಮತ್ತು 26 ವಚನಗಳಲ್ಲಿ ಹಿಂದೆಂದೂ ಬಯಲುಗೊಳಿಸಲ್ಪಟ್ಟಿರದಂತಹ ಒಂದು ಗುಟ್ಟನ್ನು ("ಗುಪ್ತವಾಗಿದ್ದ ಒಂದು ಸಂಗತಿ") ಹಂಚಿಕೊಳ್ಳುತ್ತಿದ್ದಾನೆಂದು ನಂಬುತ್ತಾರೆ: ಏನೆಂದರೆ ಕರ್ತನು ಬರುವದಕ್ಕೆ ಸ್ವಲ್ಪ ಕಾಲ ಮುಂಚೆ, ಯೆಹೂದ್ಯರು ಸಮೂಹವಾಗಿ ಪರಿವರ್ತನೆಗೊಳ್ಳುವರು ಎಂಬದೆ.

25 ಮತ್ತು 26 ವಚನಗಳನ್ನು ಚರ್ಚಿಸುವದರಲ್ಲಿ, ನಾವು ಮೊದಲು ತಿರಸ್ಕರಿಸತಕ್ಕ ಹಲವಾರು ಪ್ರಮೇಯಗಳನ್ನು ಕುರಿತು ಕಲಿಯಲಿದ್ದೇವೆ.

*ಪ್ರಮೇಯ 1: "ಪೌಲನು ಒಂದು ಹೊಸ ಚರ್ಚೆಯ ವಿಷಯವನ್ನು ಪರಿಚಯಿಸಿದನು."* ಅರ್ಥನಿರೂಪಣಕಾರರು 11ನೇ ಅಧ್ಯಾಯದ ಕಡೇ ಭಾಗವನ್ನು—ಪೌಲನು ಒಂದು ಹೊಸದಾದ ಚರ್ಚೆಯ ವಿಷಯವನ್ನು ಪರಿಚಯಿಸುತ್ತಿದ್ದಾನೋ ಎಂಬಂತೆ—ಅಧ್ಯಾಯದ ಉಳಿದ ಭಾಗದಿಂದ ಬೇರ್ಪಡಿಸುವಾಗಲೇ ಸಮಸ್ಯೆಯು ಆರಂಭಗೊಳ್ಳುತ್ತದೆ. 25ನೇ ವಚನವು ಅಂಥ ನಿಲುವನ್ನು ತಳ್ಳಿಹಾಕುತ್ತದೆ ಯಾಕೆಂದರೆ ಆಂಗ್ಲದಲ್ಲಿ ಅದು "for" (γάρ, *gar*) ಎಂದು ಆರಂಭಗೊಳ್ಳುತ್ತದೆ, ಹೀಗೆ ನಂತರ ಬರುವ ಮಾತುಗಳನ್ನು ಹಿಂದಿನ ಮಾತುಗಳೊಂದಿಗೆ ಜೋಡಿಸುತ್ತದೆ. 25ನೇ ವಚನದಲ್ಲಿನ "ಸಹೋದರರೇ" ಎಂಬುವವರು ಪೌಲನು ಸಂಬೋಧಿಸಿ ಮಾತಾಡುತ್ತಿದ್ದ ಅದೇ ಅನ್ಯಜನಾಂಗದ ಕ್ರೈಸ್ತರಾಗಿದ್ದರು (11:13). ಅಪೊಸ್ತಲನು ಇನ್ನು ಕೂಡ ಅನ್ಯಜನರಿಗೆ "ಹೆಚ್ಚಿಕೊಳ್ಳಬೇಡ" ಅಥವಾ "ಗರ್ವಪಡಬೇಡ" (11:18, 20), "ನಿಮ್ಮನ್ನು ನೀವೇ ಬುದ್ಧಿವಂತರೆಂಬದಾಗಿ ಎಣಿಸಿಕೊಳ್ಳದಿರಿ" ಎಂದು ಬೇಡಿಕೊಳ್ಳುತ್ತಿದ್ದಾನೆ (11:25).

25 ಹಾಗೂ 26 ವಚನಗಳ ಬಳಿಕ ಬರುವ ವಚನದಲ್ಲಿ, ಪೌಲನು ಅಧ್ಯಾಯದ ಮೊದಲ ಭಾಗದಲ್ಲಿ ಪರಿಚಯಿಸಿದ ವಿಚಾರಧಾರೆಯನ್ನು ಮುಂದುವರೆಸುತ್ತಾನೆ (11:11-14). ಯೆಹೂದ್ಯರ (ದೇವರಿಂದ) ತಿರಸ್ಕಾರವು (ದೇವರಿಂದ) ಅನ್ಯಜನರ ಸ್ವೀಕಾರಗೊಳ್ಳುವದರಲ್ಲಿ ಫಲಿತಗೊಂಡಿತ್ತು. ಇದರ ಉದ್ದೇಶವು ಯೇಸುವನ್ನು ಅಂಗೀಕರಿಸಿಕೊಳ್ಳುವಂತೆ ಯೆಹೂದ್ಯರನ್ನು ಕೇರಳಿಸುವದಾಗಿತ್ತು, ಅದರ ಫಲಿತವಾಗಿ ಯೆಹೂದ್ಯರು (ದೇವರಿಂದ)

ಸ್ವೀಕಾರಕ್ಕೊಳಗಾಗುತ್ತಿದ್ದರು. ಈ ವಿಚಾರಧಾರೆಯು 11ನೇ ಅಧ್ಯಾಯದ ಕಡೇ ಭಾಗದಲ್ಲಿ ಪುನರಾವರ್ತಿಸಲ್ಪಡುತ್ತದೆ. ಉದಾಹರಣೆಗೆ, 30 ಹಾಗೂ 31 ನೇ ವಚವಗಳು ಈ ಕ್ರಮಾನುಗತಿಯನ್ನು ವ್ಯಕ್ತಪಡಿಸುತ್ತವೆ:

ಯೆಹೂದ್ಯರ ಅವಿಧೇಯತೆ (ದೇವರಿಂದ ಯೆಹೂದ್ಯರು ತಿರಸ್ಕರಿಸಲ್ಪಡುವದರಲ್ಲಿ ಫಲಿತಗೊಂಡಿತು)
ಅನ್ಯಜನರಿಗೆ ತೋರಿದ ಕರುಣೆ (ಅನ್ಯಜನರು ದೇವರಿಂದ ಸ್ವೀಕರಿಸಲ್ಪಟ್ಟಿದ್ದು)
ಯೆಹೂದ್ಯರಿಗೆ ತೋರಿದ ಕರುಣೆ (ಯೆಹೂದ್ಯರು ದೇವರಿಂದ ಅಂಗೀಕರಿಸಲ್ಪಡುವದು)

*ಪ್ರಮೇಯ 2: "'ಗುಪ್ತವಾಗಿದ್ದ ಒಂದು ಸಂಗತಿ' ಎಂದರೆ ಹಿಂದೆಂದೂ ಬಯಲುಗೊಳಿಸಲ್ಪಡದ ಒಂದು ಗುಟ್ಟು ಎಂದರ್ಥ."* ಇಲ್ಲಿ ಸಮಸ್ಯೆಯು "ಗುಪ್ತವಾಗಿದ್ದ ಒಂದು ಸಂಗತಿ" ಎಂಬ ಪದದ ವಿಷಯದಲ್ಲಿ ಮುಂದುವರೆಯುತ್ತದೆ. "Mystery" ("ಗುಪ್ತವಾಗಿದ್ದ ಒಂದು ಸಂಗತಿ") ಎಂಬುದು ಗ್ರೀಕ್ ಪದದ (μυστήριον, *mustērion ಎಂಬದರಿಂದ*) ಲಿಪ್ಯಂತರಣವಾಗಿರುತ್ತದೆ. ಬೈಬಲಿನ ಬಳಕೆಯಲ್ಲಿ, *mustērion* ಎಂಬ ಪದವು ಗೊತ್ತಿರದ ಸಂಗತಿ ಎಂಬದನ್ನು ಸೂಚಿಸುವದಿಲ್ಲ, ಆದರೆ ಅದು ದೇವರಿಂದ ಪ್ರಕಟಗೊಳಿಸಲ್ಪಡದಿದ್ದಲ್ಲಿ ಗೊತ್ತಾಗದೆ ಇರುತ್ತಿದ್ದ ಸಂಗತಿಯೊಂದನ್ನು ಸೂಚಿಸುತ್ತದೆ (1 ಕೊರಿಂಥ 2:7; ಎಫೆಸ 3:9). W. E. Vine ಬರೆದದ್ದೇನೆಂದರೆ "ಸಾಧಾರಣ ಅರ್ಥದಲ್ಲಿ 'ಗುಪ್ತವಾಗಿದ್ದ ಒಂದು ಸಂಗತಿ' ಎಂಬುದು ತಿಳಿಸಿದೆ ಹಿಡಿದಿಟ್ಟುಕೊಂಡಿರುವದೆಂಬ ಸೂಚ್ಯಾರ್ಥವನ್ನು ನೀಡುತ್ತದೆ; ಅದರ ವಾಕ್ಯಾಧಾರಿತ ಮಹತ್ವವೆಂದರೆ ಪ್ರಕಟಗೊಳಿಸಲ್ಪಟ್ಟ ಸತ್ಯ" ಎಂದಾಗುತ್ತದೆ.[31] ಹೊಸ ಒಡಂಬಡಿಕೆಯಲ್ಲಿ, "ಗುಪ್ತವಾಗಿದ್ದ ಒಂದು ಸಂಗತಿ" ಎಂಬುದು ಬಹಳಷ್ಟು ಸಾರಿ ದೇವರು ಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿ ಕೊಡುವ ಯೋಜನೆ ಮತ್ತು ಈ ಯೋಜನೆಯಲ್ಲಿ ಸೇರಿರುವದೆಲ್ಲವನ್ನೂ ಸೂಚಿಸುವ ಸಂಬಂಧದಲ್ಲಿಯೇ ಇರುತ್ತದೆ (ಕೊಲೊಸ್ಸೆ 1:27; 2:2; 1 ತಿಮೊಥೆ 3:16). ಪೌಲನು ರೋಮಾಪುರದವರಿಗೆ ಬರೆದ ತನ್ನ ಪತ್ರಿಕೆಯ ಮುಕ್ತಾಯಕ್ಕೆ ಬರುತ್ತಿದ್ದ ಹಾಗೆ, ಹೀಗೆ ಹೇಳುತ್ತಾನೆ,

> ಅನಾದಿಯಾಗಿ *ಗುಪ್ತವಾಗಿದ್ದ ಮರ್ಮವು* ಈಗ ಪ್ರಕಾಶಕ್ಕೆ ಬಂದು ನಿತ್ಯನಾದ ದೇವರ ಅಪ್ಪಣೆಯ ಪ್ರಕಾರ ಪ್ರವಾದಿಗಳ ಗ್ರಂಥಗಳ ಮೂಲಕ ಅನ್ಯಜನರೆಲ್ಲರಿಗೆ ನಂಬಿಕೆಯೆಂಬ ವಿಧೇಯತ್ವವನ್ನು ಉಂಟು ಮಾಡುವದಕ್ಕೋಸ್ಕರ ತಿಳಿಸಲ್ಪಟ್ಟಿದೆ. *ಪ್ರಕಾಶಕ್ಕೆ ಬಂದಿರುವ ಈ ಮರ್ಮಕ್ಕೆ* ಅನುಸಾರ ಅಂದರೆ ಯೇಸು ಕ್ರಿಸ್ತನ ವಿಷಯವಾದಂಥ ನಾನು ಸಾರುವಂಥ ಸುವಾರ್ತೆಗನುಸಾರ ನಿಮ್ಮನ್ನು ಸ್ಥಿರಪಡಿಸುವದಕ್ಕೆ ಶಕ್ತನಾಗಿರುವ ಜ್ಞಾನನಿಧಿಯಾದ ಒಬ್ಬನೇ ದೇವರಿಗೆ . . . (16:25, 26; ಒತ್ತಿ ಹೇಳಿದ್ದು ನನ್ನದು).

ಬಹುತೇಕ ಬರಹಗಾರರಿಗೆ *mustērion* ಎಂಬುದರ ಪ್ರಾಥಮಿಕ ಅರ್ಥದ ತಿಳುವಳಿಕೆಯಿರುತ್ತದೆ. ಹೀಗಿದ್ದರೂ, ರೋಮಾ 11:25ರಲ್ಲಿ, ಅವರು ಇನ್ನೇನು ಪೌಲನು ತನ್ನ ವಾಚಕರೊಂದಿಗೆ ಹಂಚಿಕೊಳ್ಳಬೇಕೆಂದಿದ್ದ ಸಂಗತಿಯನ್ನು ಗುಟ್ಟು ಎಂದು ಹೆಸರಿಸುವಂತೆ ವಾಕ್ಯವನ್ನು ತಿರುಚುವದಕ್ಕೆ ಬಯಸುತ್ತಾರೆ. ಈ ಗುಟ್ಟು—ಶಾಸ್ತ್ರಗಳಲ್ಲಿ ಹಿಂದೆಂದೂ ಪ್ರಕಟಗೊಳ್ಳದ ಮತ್ತು ಮುಂದೆಂದೂ ಉಲ್ಲೇಖಿಸಲ್ಪಡದ್ದು—ಎಂಬುದು ಯೆಹೂದ್ಯರ ಸಮೂಹ ಪರಿವರ್ತನೆಯಾಗಿರುತ್ತದೆಂದು ಹೇಳಲಾಗುತ್ತದೆ.

ಬದಲಾಗಿ, *mustērion* ಎಂಬುದು ಈ ವಾಕ್ಯಭಾಗದಲ್ಲಿ ಮರ್ಮವೆಂಬದಾಗಿ ತೋರುವದಿಲ್ಲ ಅನ್ನಿಸುತ್ತದೆ. ಈಗಾಗಲೇ ಗಮನಿಸಿರುವ ಪ್ರಕಾರವೇ, ಪೌಲನು ಒಂದು ಹೊಸ ಚರ್ಚೆಯ ವಿಷಯವನ್ನು ಪರಿಚಯಿಸುತ್ತಿದ್ದಿಲ್ಲ; ಬದಲಾಗಿ, ಆತನು ತನ್ನ ಪ್ರಮುಖ ವಿಚಾರಧಾರೆಯನ್ನು ಮುಂದುವರೆಸುವವನಾಗಿದ್ದನು. ಆದುದರಿಂದ, ಸನ್ನಿವೇಶದಲ್ಲಿ, *mustērion* ಎಂಬುದು ಬಹಳ ಸಂಭಾವ್ಯವಾಗಿ ಅನ್ಯಜನರನ್ನು ಸ್ವೀಕರಿಸಿಕೊಳ್ಳುವ ಮೂಲಕವಾಗಿ ಯೆಹೂದ್ಯರಲ್ಲಿ ತೀವ್ರಾಸಕ್ತಿಯನ್ನು (ಅತ್ಯಾಸಕ್ತಿಯಿಂದ ಹಂಬಲಿಸುವಿಕೆ) ಕೆರಳಿಸಿ ಅವರನ್ನು ರಕ್ಷಣೆಗೆ ನಡಿಸುವ ದೇವರ ಆಶ್ಚರ್ಯಕರವಾದ ಯೋಜನೆಯನ್ನು ಸೂಚಿಸುತ್ತದೆ. 25 ಮತ್ತು 26 ವಚನಗಳು ಹೇಗೆ ಈಗಾಗಲೇ ಚರ್ಚಿಸಿರುವ ಕ್ರಮಾನುಗತಿಯೊಳಗೆ ಸರಿಹೊಂದುತ್ತವೆಂಬುದನ್ನು ಪರಿಗಣಿಸೋಣ:

ಯೆಹೂದ್ಯರ ಭಾಗಶಃ ಕಠಿಣಗೊಳ್ಳುವಿಕೆ (ಯೆಹೂದ್ಯರು ದೇವರಿಂದ ತಿರಸ್ಕರಿಸಲ್ಪಡುವಿಕೆ)
ಅನ್ಯಜನರ ಸಂಪೂರ್ಣತೆ (ಅನ್ಯಜನರು ದೇವರಿಂದ ಅಂಗೀಕರಿಸಲ್ಪಡುವಿಕೆ)
ಇಸ್ರಾಯೇಲ್ಯರ ರಕ್ಷಣೆ (ಯೆಹೂದ್ಯರು ದೇವರಿಂದ ಅಂಗೀಕರಿಸಲ್ಪಡುವಿಕೆ)

ಕೆಲವರು ಆಕ್ಷೇಪಣೆ ಮಾಡುತ್ತಾರೆ, ಏನೆಂದರೆ ರೋಮಾ 11:26ನೇ ವಚನದ ವಿಷಯದಲ್ಲಿ, ಈ ವ್ಯಾಖ್ಯಾನವು *mustērion* ಎಂಬುದನ್ನು ಪೌಲನು ಈಗಾಗಲೇ ಪ್ರಕಟಗೊಳಿಸಿದ ಸಂಗತಿಯನ್ನು ಸೂಚಿಸುತ್ತದೆಯೇ ಹೊರತು ಒಂದು ಹೊಸ ಸತ್ಯವನ್ನಲ್ಲ ಎಂದಾಗಿಸುತ್ತದೆ ಎಂಬದೆ. *Mustērion* ಎಂಬುದು ಉಪಯೋಗಿಸಲ್ಪಟ್ಟಿರುವ ಹೊಸ ಒಡಂಬಡಿಕೆಯ ವಾಕ್ಯಭಾಗಗಳನ್ನು ಒಬ್ಬನು ಪರೀಕ್ಷಿಸುವದಾದರೆ, ಪೌಲನು ಕ್ರಿಸ್ತನನ್ನು ಸೂಚಿಸುವದಕ್ಕೆ ಆಗಾಗ್ಗೆ ಈ ಪದವನ್ನು ಬಳಸಿದನೆಂಬುದನ್ನು ಕಂಡುಕೊಳ್ಳುವನು, ಖಂಡಿತವಾಗಿಯೂ ಪೌಲನ ವಾಚಕರಿಗೆ ಕ್ರಿಸ್ತನು "ಒಂದು ಹೊಸ ಚರ್ಚೆಯ ವಿಷಯ" ಆಗಿರಲಿಲ್ಲವಷ್ಟೆ.

ಇನ್ನು ಕೆಲವರು ರೋಮಾ 11:25, 26ನ್ನು ಈ ರೀತಿಯಲ್ಲಿ ಅರ್ಥೈಸುವಿಕೆಯು *mustērion* ಎಂಬ ಪದಕ್ಕೆ ಸಿಕ್ಕಬೇಕಾದ ಸಾಕಷ್ಟು ನಾಟಕೀಯತೆಯನ್ನು ಕೊಡುವದಿಲ್ಲ ಎಂದು ವಿರೋಧಿಸುತ್ತಾರೆ. ಪೌಲನು *mustērion* ಎಂಬ ಪದವನ್ನು ಕೆಲವರು "ನಾಟಕೀಯವಲ್ಲ" ಎಂದು ಪರಿಗಣಿಸುವಂತಹ ಹಲವಾರು ಚರ್ಚೆಯ ವಿಷಯಗಳನ್ನು ಸೂಚಿಸುವದಕ್ಕೆ ಉಪಯೋಗಿಸಿದನು, ಉದಾಹರಣೆಗೆ ಕ್ರಿಸ್ತನು ಮತ್ತು ಸಭೆಯ ನಡುವಿನ ಸಂಬಂಧ (ಎಫೆಸ 5:32). ಸತ್ಯದಲ್ಲಿ, ಪೌಲನಿಗೆ ದೊರೆತ ದೇವರ ಮನಸ್ಸಿನ ಜ್ಞಾನಪ್ರಕಾಶವು—ದೇವರು ಹೇಗೆ ಯೆಹೂದ್ಯರ ತಿರಸ್ಕಾರವನ್ನು ಅನ್ಯಜನರ ಸ್ವೀಕಾರಕ್ಕೆ ದಾರಿ ಮಾಡುವಂತೆ ಮತ್ತು ಹಾಗೆಯೇ ಇವರ ತಿರಸ್ಕಾರವನ್ನು ಅವರ ಸ್ವೀಕಾರಕ್ಕೆ ದಾರಿಯಾಗುವಂತೆ ಉಪಯೋಗಿಸುತ್ತಾನೆಂಬದು—ಆಶ್ಚರ್ಯಕರವಾಗಿದೆ ಮತ್ತು ನಾಟಕೀಯವೂ ಆಗಿದೆ. Hendriksen ಹೀಗೆ ಬರೆಯುತ್ತಾನೆ, "ಈಗ ಮಾತುಗಳಿಗೆ ಅತ್ಯಂಥ ಅದ್ಭುತವಲ್ಲವೇ? . . . ಅನ್ಯಜನರ ರಕ್ಷಣೆ ಮತ್ತು ಇಸ್ರಾಯೇಲ್ಯರ ರಕ್ಷಣೆಯ ನಡುವಿನ ಈ ಪರಸ್ಪರ ಅವಲಂಭನೆಯು ದೈವಿಕ 'ಮರ್ಮ'ದ ತಿರುಳಾಗಿರುತ್ತದೆ."[32]

*ಪ್ರಮೇಯ 3: "ಯೆಹೂದ್ಯರು ಈಗಲೂ 'ದೇವರ ಆದುಕೊಳ್ಳಲ್ಪಟ್ಟ ಪ್ರಜೆ.'"* ಈಗಿನ ಇಸ್ರಾಯೇಲ ಜನಾಂಗದೊಂದಿಗೆ ದೇವರಿಗಿರುವ ಸಂಬಂಧದ ಕುರಿತ

ಅಪಾರ್ಥಮಾಡಿಕೊಳ್ಳಲ್ಪಡುವಿಕೆಯು ಸಮಸ್ಯೆಯನ್ನು ಮತ್ತಷ್ಟು ಜಟಿಲಗೊಳಿಸುತ್ತದೆ. ಯೆಹೂದ್ಯರು ಈಗಲೂ "ದೇವರ ಆದುಕೊಳ್ಳಲ್ಪಟ್ಟ ಪ್ರಜೆ" ಎಂಬುದಕ್ಕೆ ರೋಮಾ 11:28b, 29 ವಚನಗಳನ್ನು ದೃಡೀಕರಣವೆಂದು ತೆಗೆದುಕೊಳ್ಳಲಾಗಿರುತ್ತದೆ. ಯೆಹೂದ್ಯರಿಗೆ ಇನ್ನು ಮೇಲೆ ದೇವರ ವಿಷಯದಲ್ಲಿ ಯಾವದೇ ವಿಶೇಷ ಹಕ್ಕುಗಳಿರುವದಿಲ್ಲ ಎಂಬುದನ್ನು ನಾವು ಒತ್ತಿ ಹೇಳಲಿದ್ದೇವೆ (ನೋಡಿರಿ *ಅನ್ವಯಿಸುವಿಕೆ: ದೇವರು ಮತ್ತು ಇಸ್ರಾಯೇಲ್ಯರು*, 264-68). ಒಂದು ಜನಾಂಗವಾಗಿ ಅವರು ಈಗ ಆತನ "ವಿಶೇಷ ಪ್ರಜೆ"ಯಾಗಿ ಉಳಿದಿರುವದಿಲ್ಲ.

ಈ ಮಿಥ್ಯ ಪ್ರಮೇಯಗಳನ್ನು ಪರೀಕ್ಷಿಸಿದ ಬಳಿಕ, ನಾವು ದೂರವಿರಬೇಕಾದ ಹಲವಾರು ನಿಲುವುಗಳಿರುತ್ತವೆ. ಅದು ಏನು *ಹೇಳುತ್ತದೆ* ಎಂಬುದಕ್ಕಿಂತಲೂ ಅದು ಏನನ್ನು *ಹೇಳುವದಿಲ್ಲ* ಎಂಬದಾಗಿ ಒಬ್ಬ ವ್ಯಕ್ತಿಯು ದೃಢವಾಗಿ ತಿಳಿದುಕೊಳ್ಳಬಹುದಾದ ವಾಕ್ಯಭಾಗಗಳಲ್ಲಿ ರೋಮಾ 11:25, 26 ವಾಕ್ಯಭಾಗವು ಒಂದಾಗಿರುತ್ತದೆ.

*ಸಹಸ್ರವರ್ಷಾಳ್ವಿಕೆ ಮುಂಚೆ ಕ್ರಿಸ್ತನ ಬರೋಣವೆಂಬ ನಿಲುವಿನಿಂದ ದೂರವಿರಬೇಕು.* ಮೊದಲನೆಯದಾಗಿ, ಸಹಸ್ರ ವರ್ಷಾಳ್ವಿಕೆ ಮುಂಚೆ ಕ್ರಿಸ್ತನ ಬರೋಣದಲ್ಲಿ ನಂಬಿಕೆಯಿಡುವವರು ಹೇಳಿಕೊಳ್ಳುವ ಪ್ರಕಾರ ಯಾವದನ್ನೂ ಈ ವಾಕ್ಯಭಾಗವು ಕಲಿಸುವದಿಲ್ಲ. ಒಂದು ಸಹಸ್ರ ವರ್ಷಾಳ್ವಿಕೆ ಮುಂಚೆ ಕ್ರಿಸ್ತನ ಬರೋಣದ ಚಿತ್ರಣವು ಹೀಗೆ ಸಾಗುತ್ತದೆ: ಯೇಸು ಭೂಮಿಗೆ ಬರುವಾಗ, ಯೆರೂಸಲೇಮಿನಲ್ಲಿ ಒಂದು ಭೌತಿಕ ರಾಜ್ಯವನ್ನು ಸ್ಥಾಪಿಸುವದು ಆತನ ಉದ್ದೇಶವಾಗಿರುತ್ತದೆ—ಆದರೆ ಇದು ಯೆಹೂದ್ಯರು ಆತನನ್ನು ಅರಸನನ್ನಾಗಿ ಅಂಗೀಕರಿಸಿಕೊಳ್ಳುತ್ತಾರೋ ಇಲ್ಲವೋ ಎಂಬುದರ ಮೇಲೆ ಅವಲಂಭನೆಗೊಂಡಿರುತ್ತದೆ. ಯೆಹೂದ್ಯರು ಯೇಸುವನ್ನು ಅಂಗೀಕರಿಸಿಕೊಳ್ಳುವರು ಎಂದು ಪ್ರವಾದಿಸಲ್ಪಟ್ಟಿತ್ತು, ಆದರೆ ಅವರು ಯೇಸುವನ್ನು ಅರಸನೆಂದು ಒಪ್ಪದೆ ತಿರಸ್ಕರಿಸಿದ್ದರಿಂದ ದೇವರ ಯೋಜನೆಯನ್ನು ಭಂಗಪಡಿಸಿದ್ದರು. ಯೆಹೂದ್ಯರು ಅಂತಿಮವಾಗಿ ಯೇಸುವನ್ನು ಅಂಗೀಕರಿಸಿಕೊಳ್ಳುವ ತನಕ ತಾತ್ಕಾಲಿಕ ಕ್ರಮದ ರೂಪದಲ್ಲಿ ಸಭೆಯು ಸ್ಥಾಪಿಸಲ್ಪಟ್ಟಿತು. ಇಲ್ಲಿಯೇ ನಮ್ಮ ವಾಕ್ಯಭಾಗವು ಒಳಗೆ ಬರುತ್ತದೆ. ಒಂದು ದಿನ, ಯೆಹೂದ್ಯರು ಯೇಸುವನ್ನು ಅಂಗೀಕರಿಸಿ*ಕೊಳ್ಳುವರು* ಎಂಬದಾಗಿ ಸಹಸ್ರವರ್ಷ ಪೂರ್ವಾಳ್ವಿಕೆ ವಾದಿಗಳು (premillennialists) ಹೇಳುತ್ತಾರೆ. (ಯೆಹೂದ್ಯರೆಲ್ಲರೂ ಸತ್ತವರೊಳಗಿಂದ ಎಬ್ಬಿಸಲ್ಪಡುವರು ಮತ್ತು ಆಗ ಪರಿವರ್ತನೆಗೊಳ್ಳುವರೆಂದು ಕೆಲವು ಸಹಸ್ರವರ್ಷ ಪೂರ್ವಾಳ್ವಿಕೆ ವಾದಿಗಳು ನಂಬುತ್ತಾರೆ. ಅಲ್ಲದೆ, ಈ ಹೊಸದಾಗಿ ಪರಿವರ್ತನೆಗೊಂಡ ಯೆಹೂದಿಗಳು ಬಲಿಷ್ಠ ಸುವಾರ್ತಿಕ ಪಡೆಗಳಾಗಿರುವರೆಂದು ಸಹ ಕೆಲವರು ಕಲಿಸುತ್ತಾರೆ.) ಈ ಯೆಹೂದಿ ಉಜ್ಜೀವನವು, ಅವರು ಹೇಳಿಕೊಳ್ಳುವ ಪ್ರಕಾರ, ಕ್ರಿಸ್ತನು ಭೂಮಿಗೆ ಬರುವಿಕೆಗೆ ದಾರಿಮಾಡಿ ಕೊಡುತ್ತದೆ, ಆ ಕಾಲದಲ್ಲಿ ಆತನು ಒಂದು ಭೌತಿಕ ರಾಜ್ಯವನ್ನು (ಅಕ್ಷರಶಃ ರಾಜ್ಯವನ್ನು) ಸ್ಥಾಪಿಸುವನು ಎಂಬದೆ.

ಈ ಕ್ಲಿಷ್ಟಕರ ಕಥಾಹಂದರಲ್ಲಿ ಪೊಳ್ಳುತನಗಳು ಸಾಕಷ್ಟಿರುತ್ತವೆ.[33] ಯೇಸು ಭೌತಿಕ ರಾಜ್ಯವನ್ನು ಸ್ಥಾಪಿಸುವದಕ್ಕೆ ಬರಲಿಲ್ಲ (ಯೋಹಾನ 18:36). ಯೆಹೂದ್ಯರು ಯೇಸುವನ್ನು ಒಬ್ಬ ಭೌತಿಕ ರಾಜನನ್ನಾಗಿ ಅಂಗೀಕರಿಸಿಕೊಳ್ಳಲು ಸಿದ್ಧರಾ*ಗಿದ್ದರು* (ಯೋಹಾನ 6:15), ಆದರೆ ಅವರು ಆತನನ್ನು ತಮ್ಮ *ಆತ್ಮೀಕ* ರಾಜನನ್ನಾಗಿ ಅಂಗೀಕರಿಸಿಕೊಳ್ಳಲು ಮನಸ್ಸಿಲ್ಲದವರಾಗಿದ್ದರು (9:32, 33ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಸಭೆಯು

ಅನಂತರದಲ್ಲಿ ಯೋಚಿಸಿದ್ದಾಗಲಿ ಅಥವಾ "ತಾತ್ಕಾಲಿಕ ಕ್ರಮದ ರೂಪದಲ್ಲಿ" ಸ್ಥಾಪಿಸಿದ್ದಾಗಲಿ ಆಗಿರು*ವದಿಲ್ಲ* (ಎಫೆಸ 3:10, 11); ಬದಲಾಗಿ, ಯೇಸು ಸ್ಥಾಪಿಸುವದಕ್ಕೆ ಬಂದ ರಾಜ್ಯವು ಸಭೆಯೇ ಆಗಿರುತ್ತದೆ. (ಮತ್ತಾಯ 16:18, 19ರಲ್ಲಿ "ಸಭೆ" ಮತ್ತು "ರಾಜ್ಯ" ಎಂಬ ಪದಗಳು ಪರ್ಯಾಯವಾಗಿ ಉಪಯೋಗಿಸಲ್ಪಟ್ಟಿವೆ.) ಎಲ್ಲಾ (ಅಥವಾ ಅವರಲ್ಲಿ ಬಹುತೇಕರು) ಯೆಹೂದ್ಯರು ಒಂದು ದಿನ ಯೇಸುವನ್ನು ಅಂಗೀಕರಿಸಿಕೊಳ್ಳುವ ಕುರಿತಾಗಿ, ಒಂದು ಪ್ರಶ್ನೆಯನ್ನು ಕೇಳತಕ್ಕದ್ದು: ಹಿಂದೊಮ್ಮೆ (ಸಹಸ್ರವರ್ಷ ಪೂರ್ವಾಳ್ವಿಕೆ ವಾದಿಗಳ ಉಪದೇಶದ ಪ್ರಕಾರ), ಯೆಹೂದ್ಯರು ಯೇಸುವನ್ನು ಅಂಗೀಕರಿಸಿಕೊಳ್ಳದೆ ಹೋಗುವ ಮೂಲಕ ದೇವರ ಸಂಕಲ್ಪವನ್ನು ಭಂಗಪಡಿಸಿರುವದಾದರೆ, ಅವರು ಭವಿಷ್ಯದಲ್ಲಿ ಪುನಃ ಯೇಸುವನ್ನು ತಿರಸ್ಕರಿಸುವ ಮೂಲಕ ದೇವರ ಸಂಕಲ್ಪಕ್ಕೆ ಭಂಗ ತರುವದಿಲ್ಲವೆಂದು ನಾವು ಹೇಗೆ ಖಚಿತವಾಗಿ ತಿಳಿಯಬಲ್ಲೆವು?

ಸಹಸ್ರವರ್ಷ ಪೂರ್ವಾಳ್ವಿಕೆ ವಾದಿಗಳು ರೋಮಾ 11:25, 26ನ್ನು ಉಪಯೋಗಿಸುವ ವಿಚಾರದಲ್ಲಿ ಇತರ ಪೊಳ್ಳುತನಗಳನ್ನು ಪ್ರಸ್ತಾಪಿಸಬಹುದಾಗಿದೆ. ಉದಾಹರಣೆಗೆ, ಒಂದು ವೇಳೆ (ಕೆಲವರು ಕಲಿಸುವ ಪ್ರಕಾರ), ಯೆಹೂದ್ಯರು ಸಮೂಹವಾಗಿ ಪರಿವರ್ತನೆಗೊಂಡ ಬಳಿಕ ಬಲಿಷ್ಠ ಸುವಾರ್ತಿಕ ಪಡೆಯಾಗುವದೇ ನಿಜವಾದಲ್ಲಿ, ಅನ್ಯಜನರ "ಸಮುದಾಯವು ದೇವರ ರಾಜ್ಯದಲ್ಲಿ ಸೇರುವ" ಕಾರ್ಯವು ಈಗಾಗಲೆ ಪೂರ್ತಿಯಾಗಿರುವದಾದರೆ (ರಕ್ಷಣೆ ಹೊಂದಲಿರುವ ಎಲ್ಲಾ ಆನ್ಯಜನರು) ಇವರು ಯಾರಿಗೆ ಸುವಾರ್ತೆಯನ್ನು ಸಾರಲಿದ್ದಾರೆ? ಖಂಡಿತವಾಗಿಯೂ, ಅತ್ಯಂಥ ದೊಡ್ಡ ಪೊಳ್ಳುತನವೇನೆಂದರೆ ಈ ವಾಕ್ಯವು ಏನು ಕಲಿಸುತ್ತದೆಂದು ಅವರು ಹೇಳಿಕೊಳ್ಳುತ್ತಾರೋ ಅದನ್ನು ಅದು ಕಲಿಸು*ವದಿಲ್ಲ*ವೆಂಬುದೇ. ಇದನ್ನೇ ನಾವು ಮುಂದೆ ಚರ್ಚಿಸಲಿದ್ದೇವೆ.

*ದೂರವಿರಬೇಕಾದ ಒಂದು ಜನಪ್ರಿಯ ನಿಲುವು.* ಈ ಮುಂಚೆ ಗಮನಿಸಿದ ಪ್ರಕಾರ, ಸಹಸ್ರವರ್ಷ ಪೂರ್ವಾಳ್ವಿಕೆ ವಾದಿಗಳೊಂದಿಗೆ ಸರಿಹೊಂದಾಣಿಕೆಯಿಲ್ಲದ ಅನೇಕ ಲೇಖಕರು ನಂಬುವದೇನೆಂದರೆ ನಮ್ಮ ವಾಕ್ಯಭಾಗವು ಯೆಹೂದ್ಯರ ಸಮೂಹ ಪರಿವರ್ತನೆಯು ಸಂಭವಿಸಲಿದೆ ಎಂಬ ಬಗ್ಗೆ ಕಲಿಸುತ್ತದೆ ಎಂಬುದೆ. ಅವರು ಇದನ್ನು ಭವಿಷ್ಯದ ಒಂದು ದಿನದಲ್ಲಿ (ಬಹುಶಃ ಕರ್ತನು ಹಿಂದಿರುಗಿ ಬರುವ ಸ್ವಲ್ಪ ಕಾಲ ಮುಂಚೆ) ಸಂಭವಿಸುತ್ತದೆ, ಆಗ ಮುಂದಾಗಿ ನಿಗದಿಗೊಳಿಸಿರುವ ಸಂಖ್ಯೆಯ ಅನ್ಯಜನರು ಕ್ರೈಸ್ತರಾಗುವರೆಂದು ನಂಬುತ್ತಾರೆ. ಯಾವದೇ ಪರಿಸ್ಥಿತಿಯಲ್ಲೂ, ಪ್ರತಿಯೊಬ್ಬ ಯೆಹೂದ್ಯನು ಸಹ ಯೇಸುವಿನ ಬಳಿಗೆ ಬರುವದು ಕಷ್ಟಕರವಾದ್ದರಿಂದ, ಈ ಲೇಖಕರಲ್ಲಿ ಬಹುಮಂದಿ "ಇಸ್ರಾಯೇಲ್ ಜನವೆಲ್ಲಾ" ಎಂಬ ಪದಗುಚ್ಛವನ್ನು ಒಂದು ರೀತಿಯಲ್ಲಿ ವಿಶೇಷಿಸುತ್ತಾರೆ. ಅವರು "ಒಂದು ಮಹತ್ವಪೂರ್ಣ ಸಂಖ್ಯೆಯವರು," "ಯೆಹೂದ್ಯರ ಮಹಾ ಸಮೂಹ," ಅಥವಾ "ಒಟ್ಟಾರೆಯಾಗಿ ಇಸ್ರಾಯೇಲ್ಯರು" ಎಂಬ ಪದಗಳನ್ನು ಬಳಸುತ್ತಾರೆ.

ಈ ಅತ್ಯಾಶ್ಚರ್ಯವಾದ ಘಟನೆಯು ನಿಖರವಾಗಿ *ಹೇಗೆ* ಸಂಭಿಸುವದೆಂಬ ವಿಚಾರದಲ್ಲಿ ಸ್ಪಷ್ಟತೆಯಿರುವದಿಲ್ಲ. ಅದು ನಂಬಿಕೆಯ ಆಧಾರದಲ್ಲಿಯೇ ಸಂಭವಿಸಬೇಕೆಂಬುದನ್ನು ಬಹುತೇಕರು ಒಪ್ಪಿಕೊಳ್ಳುತ್ತಾರೆ (3:30), ಆದರೆ ಅಪನಂಬಿಕೆಯಲ್ಲಿಯೇ ಸಹಸ್ರಾರು ವರ್ಷಗಳನ್ನು ಕಳೆದ ಯೆಹೂದ್ಯರೆಲ್ಲರನ್ನು ಯೇಸುವಿನಲ್ಲಿ ನಂಬಿಕೆಯಿಡುವಂತೆ ಯಾವುದು ಏಕಕಾಲದಲ್ಲಿ ಪ್ರಚೋದಿಸುವದೆಂಬ ವಿಷಯದಲ್ಲಿ ಊಹೆಗಳನ್ನು ಮಾಡುವದಕ್ಕೆ ಕೆಲವರು

ಮಾತ್ರವೇ ಸಿದ್ಧರಿದ್ದಾರೆ. ಒಬ್ಬ ವ್ಯಾಖ್ಯಾನಕಾರನು ಹೀಗೆ ಅಭಿಪ್ರಾಯ ಪಡುತ್ತಾನೆ, ಏನೆಂದರೆ ಮೆಸ್ಸೀಯನಿಗೋಸ್ಕರ ಶತಮಾನಗಳಿಂದ ಎದುರುನೋಡಿ ಹತಾಶರಾಗಿರುವದರಿಂದ, ಯೆಹೂದ್ಯರು ಯೇಸುವಿನ ಬಗ್ಗೆ ಇನ್ನೊಮ್ಮೆ ಯೋಚಿಸುವದಕ್ಕೆ ಮನಸ್ಸುಳ್ಳವರಾಗುವರು ಎಂಬುದೆ. ಹೇಗೂ, ಬಹುತೇಕ ಲೇಖಕರು "ಹೇಗೆ" ಎಂಬುದು "ಮರ್ಮ" ದ ಒಂದು ಭಾಗವಾಗಿರುತ್ತದೆಂದಷ್ಟೇ ಹೇಳುತ್ತಾರೆ.

"ಸಮುದಾಯವು ಸೇರುವ ತನಕ" ಎಂಬ ಅರ್ಥವನ್ನು ನೀಡುವ "ಸಂಪೂರ್ಣತೆ" ಎಂಬದರ ಕುರಿತಾಗಿ ನೋಡುವದಾದರೆ, ಒಬ್ಬ ಸರ್ವಶಕ್ತ ದೇವರು ತಾನಿಚ್ಚಿಸುವದಾದಲ್ಲಿ ಎಷ್ಟು ಸಂಖ್ಯೆಯ ಅನ್ಯಜನರು ರಕ್ಷಣೆ ಹೊಂದುವರೆಂಬುದನ್ನು ತಿಳಿದಿರಬಲ್ಲನೆಂಬುದನ್ನು ಒಪ್ಪಿಕೊಳ್ಳುವದಕ್ಕೆ ನಾವು ಸಿದ್ಧರಿದ್ದೇವೆ. ಅಷ್ಟುಮಾತ್ರವಲ್ಲದೆ, ಯೇಸುವಿನ ಬಹುಪಾಲು ಹಿಂಬಾಲಕರ ಹಾಗೆಯೇ, ಬೃಹತ್ ಸಂಖ್ಯೆಯಲ್ಲಿ ಯೆಹೂದ್ಯರು ಕ್ರೈಸ್ತರಾಗುವದಾದರೆ ನಾವು ಸಹ ರೋಮಾಂಚನಗೊಳ್ಳುವೆವು. ಹೇಗೂ, ಇವುಗಳಲ್ಲಿ ಯಾವದೇ ಭಾವನೆಯು ರೋಮಾ 11:25, 26 ವಚನಗಳಲ್ಲಿ ಕಲಿಸಲ್ಪಟ್ಟಿದೆ ಎಂಬುದನ್ನು ನಾವು ನಂಬುವದಿಲ್ಲ. ಈ ಅಂತಿಮ ನಿರ್ಣಯವು ಹಲವಾರು ಕಾರಣಗಳ ಮೇಲೆ ಆಧಾರವಾಗಿರುತ್ತದೆ.

1. ಒಂದು ಅಸ್ಪಷ್ಟವಾದ ಪದಗುಚ್ಛವನ್ನು ಒಂದು ಸಾರಿ ಉಪಯೋಗಿಸುವದರಿಂದ ಸತ್ಯವು ಸ್ಥಾಪಿತಗೊಳ್ಳುವದಿಲ್ಲ. ಜನಪ್ರಿಯ ಅರ್ಥನಿರೂಪಣೆಯ ಪ್ರಕಾರ, ಪೌಲನು 25 ಮತ್ತು 26 ವಚನಗಳಲ್ಲಿ ಹಿಂದೆಂದೂ ಮತ್ತು ಮುಂದೆಂದೂ ಪ್ರಕಟಗೊಳಿಸದ ಸತ್ಯಗಳನ್ನು ಪ್ರಕಟಗೊಳಿಸಿದನು ಎಂಬದೆ. ಆ ರೀತಿಯಲ್ಲಿ ಶಾಸ್ತ್ರಗಳು ಸತ್ಯವನ್ನು ಸ್ಥಾಪಿಸುವದಿಲ್ಲ. ಬೈಬಲಿನ ಮೂಲಭೂತ ಸತ್ಯಗಳು ವಿವಿಧ ವಾಕ್ಯಭಾಗಗಳ ಹಿನ್ನಲೆಗಳಲ್ಲಿ ಪ್ರೇರಿತವಾದ ಪುನರಾವರ್ತನೆಗಳಿಂದ ಸ್ಥಾಪಿಸಲ್ಪಟ್ಟಿರುತ್ತವೆ.

ಒಂದು ಅಸ್ಪಷ್ಟವಾದ ವಾಕ್ಯದಿಂದ ವಾಕ್ಯಭಾಗವೊಂದನ್ನು ಬೇರ್ಪಡಿಸಿ ಅದಕ್ಕೊಂದು ಸ್ವೇಚ್ಛಾನುಸಾರವಾದ ಅರ್ಥವನ್ನು ಕೊಡುವದರಿಂದ ಮಿಥ್ಯ ಸಿದ್ಧಾಂತಗಳು ಹುಟ್ಟಿಕೊಂಡಿರುತ್ತವೆ. ಉದಾಹರಣೆಗೆ, ಸಹಸ್ರವರ್ಷ ಪೂರ್ವಾಳ್ವಿಕೆ ವಾದಿಗಳು ಒಂದು ಅತ್ಯಂಥ ಸಾಂಕೇತಿಕ ಭಾಷೆಯನ್ನು ಹೊಂದಿದ ಪುಸ್ತಕದಿಂದ "ಸಾವಿರ ವರ್ಷ" (ಪ್ರಕಟನೆ 20:1-5) ಎಂಬ ಪದಗುಚ್ಛವನ್ನು ತೆಗೆದುಕೊಂಡು ಆ ಸಾಂಕೇತಿಕ ಭಾಷೆಯ ಸುತ್ತ ಒಂದು ಸಕಲವನ್ನೊಳಗೊಂಡ ದೈವಶಾಸ್ತ್ರವನ್ನೇ ರಚಿಸಿದ್ದಾರೆ. ಅದೇ ಪ್ರಕಾರವಾಗಿ, ಒಂದು ಗುಂಪಿನವರು "ಸತ್ತವರಿಗೋಸ್ಕರ ದೀಕ್ಷಾಸ್ನಾನ" ಎಂಬ (1 ಕೊರಿಂಥ 15:29) ಗಹನವಾದ ಪದಗುಚ್ಛವನ್ನು ತೆಗೆದುಕೊಂಡು ಪಾಪಪ್ರಾಯಶ್ಚಿತ್ತ ಮಾಡುವದಕ್ಕೋಸ್ಕರವಾಗಿ ಸತ್ತವರ ಬಗ್ಗೆ ಮಾಹಿತಿಯನ್ನು ಸಂಗ್ರಹಿಸುವಂತಹ ಒಂದು ನಂಬುವದಕ್ಕೂ ಅಸಾಧ್ಯವಾದ ಗೊಂದಲಕರ ವ್ಯವಸ್ಥೆಯನ್ನೇ ಅಭಿವೃದ್ಧಿಗೊಳಿಸಿರುತ್ತಾರೆ. ಪುನಃ, ಸತ್ಯವನ್ನು ಸ್ಥಾಪಿಸುವ ರೀತಿಯು ಇದಾಗಿರುವದಿಲ್ಲ.

2. ಸನ್ನಿವೇಶವು ಅಂತಹ ಯಾವದೇ ವಿಚಾರವನ್ನು ಸೂಚಿಸುವದಿಲ್ಲ. ದೇವರು ಒಂದು ದಿನ ಎಲ್ಲಾ ಯೆಹೂದ್ಯರನ್ನು ರಕ್ಷಿಸುವನು ಎಂಬುದನ್ನು ಮುಂದಿನ ವಚನಗಳಲ್ಲಿ ಯಾವದೇ ಸೂಚನೆಯಿರುವದಿಲ್ಲ. Hendriksen ಹೀಗೆ ವಿವರಿಸುತ್ತಾನೆ:

> ವಾಚಕನು ಇಸ್ರಾಯೇಲ್ಯರ ಸಮೂಹ ಪರಿವರ್ತನೆಯ ವಿಚಾರಕ್ಕಾಗಿ ಸಿದ್ಧಗೊಂಡಿರುವದಿಲ್ಲ. ಇಲ್ಲಿಯ ವರೆಗೂ ಪೌಲನು ಅದಕ್ಕೆ ಅತ್ಯಂತ ತದ್ವಿರುದ್ಧವಾದದ್ದನ್ನೇ

> ಒತ್ತಿ ಹೇಳುತ್ತಾ ಬಂದಿದ್ದಾನೆ, ಏನೆಂದರೆ, ಯಾವದೇ ಯುಗದಲ್ಲಿ (ಗತ, ವರ್ತಮಾನ, ಭವಿಷ್ಯ) ಒಂದು ಶೇಷಜನ ರಕ್ಷಣೆ ಹೊಂದುವರು ಎಂಬುದು. . . . ರೋಮಾ 11:26ನೇ ವಚನವು ಯೆಹೂದ್ಯರ ಸಮೂಹ ಪರಿವರ್ತನೆ ಬಗ್ಗೆ ಕಲಿಸುವದಾದಲ್ಲಿ, ಪೌಲನು, "ನಾನು ಈ ಮುಂಚೆ ಹೇಳಿದ್ದನ್ನು ಮರೆತುಬಿಡಿ" ಎಂದು ಹೇಳುತ್ತಿದ್ದಾನೇನೋ ಎಂದನ್ನಿಸುವದಿಲ್ಲವೇ?[34]

ಪುನರಾವಲೋಕನೆಯಲ್ಲಿ, ರೋಮಾ 9-11 ಅಧ್ಯಾಯಗಳಲ್ಲಿ ಯೆಹೂದ್ಯರ ಬಗ್ಗೆ ಪೌಲನು ಏನು ಹೇಳಿದನು? ಅಪೊಸ್ತಲನ ಹೃದಯದಲ್ಲಿ ಶರೀರಸಂಬಂಧವಾಗಿ ಸ್ವಜನರಾಗಿರುವ ತನ್ನ ಸಹೋದರರು ಕಳೆದು ಹೋಗಿರುವದಕ್ಕಾಗಿ "ಮಹಾದುಃಖವೂ . . . ಎಡೆಬಿಡದೆ ವೇದನೆಯೂ" ಇತ್ತು (9:1-3; 10:1). ಆತನು ಅವರಲ್ಲಿ "ಕೆಲವರನ್ನು" ಸಾಧ್ಯವಾದರೆ ರಕ್ಷಣೆಗೆ ನಡಿಸಬೇಕೆಂದು ಹಂಬಲಿಸಿದನು (11:14). ಅವರು ತಮ್ಮ ಅಪನಂಬಿಕೆಯಲ್ಲಿ ಮುಂದುವರೆಯದಿದ್ದಲ್ಲಿ, ಅವರು ಪುನಃ ದೇವರ ಯೋಜನೆ ಹಾಗೂ ಸಂಕಲ್ಪಗಳಲ್ಲಿ ಸೇರಿಸಿಕೊಳ್ಳಲ್ಪಡುವರು; ಅವರು "ಕಸಿಕಟ್ಟಲ್ಪಡುವರು" ಎಂಬುದನ್ನು ಒತ್ತಿ ಹೇಳಿದನು (11:23). ಭವಿಷ್ಯದಲ್ಲಿ ಯೆಹೂದ್ಯರು ತಮ್ಮ ಅಪನಂಬಿಕೆಯನ್ನು ಎಸೆದು ಬಿಡುವರೆಂಬ ಬಗ್ಗೆ ಆತನು ಯಾವ ಗಳಿಗೆಯಲ್ಲಿ ಸಹ ಸ್ವಲ್ಪವೂ ಸುಳಿವು ನೀಡಲಿಲ್ಲ.

3. ಉಪದೇಶವು "ಯೆಹೂದಿ ಸಮಸ್ಯೆ" ಗೆ ಯಾವದೇ ಪರಿಹಾರವನ್ನು ಸೂಚಿಸುವದಿಲ್ಲ. ನಾವು ಕರೆಯುವಂಥ "ಯೆಹೂದಿ ಸಮಸ್ಯೆ"—ದೇವರು ಇಸ್ರಾಯೇಲ್ ಜನಾಂಗಕ್ಕೆ ನೀಡಿದ ತನ್ನ ವಾಗ್ದಾನಗಳನ್ನು ತ್ಯಜಿಸಿದ್ದಾನೋ ಇಲ್ಲವೋ—ಎಂಬುದಕ್ಕೆ ರೋಮಾ 11:25, 26 ವಚನಗಳ ಕುರಿತ ಜನಪ್ರಿಯ ನಿಲುವು ನಿಜವಾಗಿಯೂ ಯಾವದೇ ಪರಿಹಾರವನ್ನು ಸೂಚಿಸುವದಿಲ್ಲ. ಈ ಸಾಮಾನ್ಯವಾಗಿ ಅಂಗೀಕರಿಸಿಕೊಳ್ಳಲ್ಪಟ್ಟಿರುವ ದಾರಿಯನ್ನು ಸಮರ್ಥಕರು ವಾದಿಸುವದೇನೆಂದರೆ ಕ್ರಿಸ್ತನ ಬರೋಣಕ್ಕೆ ಸ್ವಲ್ಪ ಮುಂಚೆಯೇ ಈ ಪೀಳಿಗೆಯಲ್ಲಿ ಜೀವಿಸುತ್ತಿರುವ ಎಲ್ಲಾ (ಅಥವಾ "ಒಂದು ಮಹತ್ವಪೂರ್ಣವಾದ ಸಂಖ್ಯೆಯವರನ್ನು") ಯೆಹೂದ್ಯರನ್ನು ರಕ್ಷಿಸುವನಾದ್ದರಿಂದ ದೇವರು ನಂಬಿಗಸ್ತನು ಎಂಬುದೆ. ಹೇಗೂ, ಆ ಕಡೇ ಪೀಳಿಗೆಯ ಮುಂಚೆ ಸತ್ತಿರುವ ಮತ್ತು ತಮ್ಮ ಅಪನಂಬಿಕೆಯಲ್ಲಿಯೇ ಸಾಯಲಿರುವ ಅಸಂಖ್ಯಾತ ಯೆಹೂದ್ಯರ ವಿಷಯವೇನು? "ಕ್ರಿಸ್ತನಿಂದ ಹೊರತಾಗಿ ಅನೇಕಾನೇಕ ಪೀಳಿಗೆಗಳವರು ಮರಣಿಸಿದ ಬಳಿಕ, 'ಇಸ್ರಾಯೇಲ್ ಜನವೆಲ್ಲಾ' ಎಂದು ಹೇಳುವದು ಕಡೇ ಪೀಳಿಗೆ ಬಹುಪಾಲು ಜನರನ್ನು ಸೂಚಿಸುವ ಒಂದು ವಿಲಕ್ಷಣವಾದ ವಿಧವಾಗಿದೆ" ಎಂದು ಹೇಳಲಾಗುತ್ತದೆ.[35] "ಯೆಹೂದಿ ಸಮಸ್ಯೆ" ಯ ವಿಷಯದಲ್ಲಿ, Jim McGuiggan ಹೀಗೆ ಬರೆಯುತ್ತಾನೆ,

> ಪೌಲನು ಏನನ್ನು ಅಭಿಪ್ರಾಯ ಪಡುತ್ತಿಲ್ಲವೆಂದರೆ: "ಇಂದಿನಿಂದ ಹಲವು ಸಾವಿರ ವರ್ಷಗಳ ಬಳಿಕ ದೇವರು ಯೆಹೂದ್ಯರ ಇಡೀ ಪೀಳಿಗೆಯ ದೊಡ್ಡ ಪಾಲನ್ನು ನಂಬಿಕೆಗೆ ನಡಿಸಿ ತತ್ಫಲಿತವಾಗಿ ರಕ್ಷಣೆಗೆ ತರುವಾಗ ನಿಮ್ಮ ಸಮಸ್ಯೆಗೆ ಉತ್ತರವು ಕೊಡಲ್ಪಡುವದು." ಅದು ಒಂದು ಉತ್ತರವೇ ಆಗಿರುತ್ತಿದ್ದಿರಲಿಲ್ಲವೇನೋ. . . . ಅಂಥ ಪ್ರತ್ಯುತ್ತರವು ಆ ಪೀಳಿಗೆಯ ಮುಂಚೆ ಕಡಿದುಹಾಕಲ್ಪಟ್ಟ ಯೆಹೂದ್ಯರ ಕುರಿತ ಸಮಸ್ಯೆಯನ್ನು ನಿರ್ವಹಿಸುವದಿಲ್ಲ.[36]

ರೋಮಾ 9-11ರಲ್ಲಿ ಮಾತಾಡಲ್ಪಟ್ಟಿರುವ "ಯೆಹೂದಿ ಸಮಸ್ಯೆ"ಯು ನೇರವಾಗಿ

ಪೌಲನ ದಿನಗಳಲ್ಲಿದ್ದ ಯೆಹೂದ್ಯ ಪೀಳಿಗೆಗೆ ಸಂಬಂಧಿಸುತ್ತದೆ. ದೇವರು *ಆ* ಯೆಹೂದ್ಯರ ವಿಷಯದಲ್ಲಿ ನ್ಯಾಯವಾಗಿದ್ದನೋ ಎಂಬುದೇ ಜ್ವಲಂತ ಪ್ರಶ್ನೆಯಾಗಿತ್ತು. ಸಾವಿರ ವರ್ಷಗಳ ನಂತರದಲ್ಲಿ ಕರ್ತನು ಏನು ಮಾಡುವನು ಅಥವಾ ಮಾಡುವದಿಲ್ಲ ಎಂಬುದು ಅವರಿಗೆ ಅಪ್ರಸ್ತುತವಾಗಿತ್ತು.

4. ಯೆಹೂದ್ಯರ ಅಖಂಡ ಪರಿವರ್ತನೆಯ ವಿಚಾರವು ಬೈಬಲಿನಲ್ಲಿ ಬೇರೆಡೆಯಲ್ಲಿರುವ ಉಪದೇಶಕ್ಕೆ ತದ್ವಿರುದ್ಧವಾಗಿರುತ್ತದೆ. ಬೈಬಲಾಧಾರಿತ ಅರ್ಥನಿರೂಪಣೆಯ ಮೂಲಭೂತ ತತ್ವವೇನೆಂದರೆ ಒಬ್ಬನು ಅಸ್ಪಷ್ಟವಾದ ವಾಕ್ಯಭಾಗವೊಂದನ್ನು ತೆಗೆದುಕೊಂಡು ಅದನ್ನು ಬೇರೆ ಕಡೆಯಲ್ಲಿರುವ ಸರಳವಾದ ವಾಕ್ಯಗಳಿಗೆ ತದ್ವಿರುದ್ಧವಾಗಿರುವಂತೆ ಅರ್ಥನಿರೂಪಣೆ ಮಾಡಕೂಡದು. ಈಗಾಗಲೇ ಹೇಳಿರುವ ಪ್ರಕಾರ, ದೇವರು ಒಂದು ದಿನ ಎಲ್ಲಾ (ಅಥವಾ ಬಹುತೇಕ) ಯೆಹೂದ್ಯರನ್ನು ರಕ್ಷಿಸುವನು ಎಂಬ ವಿಚಾರವು ದೇವರು ಯೆಹೂದ್ಯರಲ್ಲಿ ಒಂದು ಅಂಶದವರನ್ನು ಮಾತ್ರವೇ ರಕ್ಷಿಸುವನೆಂಬ ಪೌಲನ ಸರಳವಾದ ಉಪದೇಶಕ್ಕೆ ವಿರುದ್ಧವಾಗಿರುತ್ತದೆ (9:27; 11:5).

ಅಷ್ಟುಮಾತ್ರವಲ್ಲದೆ, ನಾವು ಈ ಕೆಳಗಿನದನ್ನು ಆಲೋಚಿಸೋಣ: ಯೆಹೂದ್ಯರ "ಪೂರ್ಣ ಪುನಃಸ್ಥಾಪನೆ" ಯು (*plērōma*) (11:12) ಯೇಸು ಹಿಂದಿರುಗಿ ಬರುವ ಮುಂಚೆ ಬಹುಪಾಲು ಯೆಹೂದ್ಯರು ರಕ್ಷಣೆ ಹೊಂದುತ್ತಾರೆಂಬದನ್ನು ಸೂಚಿಸುವದಾದರೆ, "ಅನ್ಯಜನರ ಸಮುದಾಯವು ದೇವರ ರಾಜ್ಯದಲ್ಲಿ ಸೇರುವ ತನಕ [*plērōma*]" (11:25) ಎಂಬುದು ಸಹ ಬಹುಪಾಲು ಯೆಹೂದ್ಯರು ರಕ್ಷಣೆ ಹೊಂದುವದಕ್ಕೆ ಸ್ವಲ್ಪ ಮುಂಚೆ ಅನ್ಯಜನಾಂಗದ ಬಹುಪಾಲು ಜನರು ರಕ್ಷಣೆ ಹೊಂದುವರೆಂಬುದನ್ನು ಸೂಚಿಸುತ್ತೆಂಬದನ್ನು ನಂಬುವದು ತರ್ಕಬದ್ಧವಾದದ್ದಷ್ಟೆ. ಅಂಥ ನಿರ್ಣಯಕ್ಕೆ ಬರುವದು ಲೂಕ 18:8ರಲ್ಲಿ ಯೇಸು ಕೇಳುವ ಪ್ರಶ್ನೆಗೆ ಕಳಂಕವುಂಟು ಮಾಡಿದಂತಾಗುತ್ತದೆ: "ಹೀಗಿದ್ದರೂ ಮನುಷ್ಯ ಕುಮಾರನು ಬಂದಾಗ ಭೂಮಿಯ ಮೇಲೆ ನಂಬಿಕೆಯನ್ನು ಕಾಣುವನೋ?"

ನಿಶ್ಚಯವಾಗಿಯೂ, ನಾವೆಲ್ಲರೂ ಸಹ ಭೂಮಿಯ ಮೇಲಿನ ಬಹುತೇಕ ಜನರು (ಯೆಹೂದ್ಯರು ಮತ್ತು/ಅಥವಾ ಅನ್ಯಜನರು) ರಕ್ಷಿಸಲ್ಪಡುವರೆಂಬ ಸಂಭಾವ್ಯತೆಯ ವಿಷಯದಲ್ಲಿ ಸಂಭ್ರಮಿಸುವೆವು—ಆದರೆ ಅದು ಹಾಗಿರು*ವದಿಲ್ಲ* ಎಂಬದಾಗಿ ಯೇಸು ಹೇಳಿದನು. ಆತನು ಹೀಗೆ ಹೇಳುತ್ತಾನೆ, "ಹೀಗೆ ಕರೆಯಲ್ಪಟ್ಟವರು ಬಹು ಜನ; ಆರಿಸಿಕೊಳ್ಳಲ್ಪಟ್ಟವರು *ಸ್ವಲ್ಪ ಜನ*" (ಮತ್ತಾಯ 22:14; ಒತ್ತಿ ಹೇಳಿದ್ದು ನನ್ನದು). ಪರ್ವತದ ಮೇಲಿನ ಪ್ರಸಂಗದಲ್ಲಿ, ಆತನು ಎರಡು ದಾರಿಗಳ ಬಗ್ಗೆ ಕಲಿಸಿದನು, ಸ್ವಲ್ಪ ಜನರು ಮಾತ್ರವೇ ಜೀವದ ದಾರಿಯನ್ನು ಅನುಸರಿಸುವರೆಂಬದನ್ನು ಸೂಚಿಸುತ್ತಾನೆ:

> ಇಕ್ಕಟ್ಟಾದ ಬಾಗಲಿನಿಂದ ಒಳಕ್ಕೆ ಹೋಗಿರಿ, ನಾಶಕ್ಕೆ ಹೋಗುವ ಬಾಗಲು ದೊಡ್ಡದು, ದಾರಿ ಅಗಲವು; ಅದರಲ್ಲಿ ಹೋಗುವವರು ಬಹು ಜನ, ನಿತ್ಯಜೀವಕ್ಕೆ ಹೋಗುವ ಬಾಗಲು ಇಕ್ಕಟ್ಟು, ದಾರಿ ಬಿಕ್ಕಟ್ಟು; ಅದನ್ನು ಕಂಡುಹಿಡಿಯುವವರು *ಸ್ವಲ್ಪ ಜನ* (ಮತ್ತಾಯ 7:13, 14; ಒತ್ತಿ ಹೇಳಿದ್ದು ನನ್ನದು).

ಜನಪ್ರಿಯ ನಿಲುವನ್ನು ತಿರಸ್ಕರಿಸುವದಕ್ಕಿರುವ ಇನ್ನೊಂದು ಕಾರಣವನ್ನು ಇಲ್ಲಿ ಪ್ರಸ್ತಾಪಿಸಬಹುದು. ಉದಾಹರಣೆಗೆ, ರೋಮಾ 11:25, 26ರ ಕುರಿತ ಈ ಅಭಿಪ್ರಾಯವನ್ನು *ರಾಷ್ಟ್ರೀಯ* (ಜನಾಂಗೀಯ) ರಕ್ಷಣೆ ಉಪದೇಶವೆಂಬಂತೆ ಅರ್ಥೈಸಿಕೊಳ್ಳಬಲ್ಲದು. ರಕ್ಷಣೆಯ

ವಿಷಯದಲ್ಲಿ, ದೇವರು ಎಂದಿಗೂ ಒಂದು ಜನಾಂಗೀಯ ಅಥವಾ ಗುಂಪಿನ ಆಧಾರದಲ್ಲಿ ವ್ಯವಹರಿಸಿರುವದಿಲ್ಲ, ಆದರೆ ಯಾವಾಗಲೂ ಒಬ್ಬ *ವ್ಯಕ್ತಿಯ* ಆಧಾರದಲ್ಲಿಯೇ ಕಾರ್ಯಮಾಡಿದ್ದಾನೆ. ಆದುದರಿಂದ, ಎರಡನೆಯ ಬರೋಣಕ್ಕೆ ಸ್ವಲ್ಪ ಕಾಲ ಮುಂಚೆ "ಇಸ್ರಾಯೇಲ್ ಜನವೆಲ್ಲಾ" ರಕ್ಷಣೆ ಹೊಂದುವರೆಂದು ರೋಮಾ 11:25, 26 ಕಲಿಸುತ್ತದೆಂಬ ವಿಚಾರವನ್ನು ನಾವು ತಿರಸ್ಕರಿಸತಕ್ಕದ್ದು.

*ದೂರವಿರಬೇಕಾಗಿರುವ ಒಂದು ವಿಕೃತರೂಪದ ನಿಲುವು.* ಬಹುತೇಕ ಲೇಖಕರು ಜನಪ್ರಿಯ ನಿಲುವಿನಲ್ಲಿ ಅಂತರ್ಗತವಾಗಿರುವ ಸಮಸ್ಯೆಯನ್ನು ಕಂಡಿದ್ದಾರೆ: ಯೆಹೂದ್ಯರ ಸಮೂಹ ಪರಿವರ್ತನೆಯು *ಹೇಗೆ* ಸಂಭವಿಸುವದು? ಈಗಾಗಲೇ ಗಮನಿಸಿರುವ ಪ್ರಕಾರ, ಅನೇಕರು "ಮರ್ಮ"ದಲ್ಲಿ "ಹೇಗೆ" ಎಂಬುದನ್ನು ಸೇರಿಸುತ್ತಾರಷ್ಟೇ. ಹೇಗೂ, ಇತ್ತೀಚಿನ ವರ್ಷಗಳಲ್ಲಿ, ಹೆಚ್ಚೆಚ್ಚಾದ ಧಾರ್ಮಿಕ ಪಂಥೀಯ ಬರಹಗಾರರು ಯೇಸುವಿನಲ್ಲಿ ನಂಬಿಕೆಯಿಡದೆಯೇ ಧರ್ಮಶಾಸ್ತ್ರವನ್ನು ಅನುಸರಿಸುವದರಿಂದ ಪ್ರಸ್ತುತ ಕಾಲದ ಯೆಹೂದ್ಯರು ರಕ್ಷಣೆ ಹೊಂದಬಲ್ಲರೆಂದು ಹೇಳುವ ಮೂಲಕ ಸಮಸ್ಯೆಯನ್ನು ಪರಿಹರಿಸುವದಕ್ಕೆ ಪ್ರಯತ್ನಿಸಿದ್ದಾರೆ. ಅವರು "ಅನ್ಯಜನರ ರಕ್ಷಣೆಯ ಜಾಡು" ಮತ್ತು "ಯೆಹೂದಿ ರಕ್ಷಣೆಯ ಜಾಡು" ಎಂಬುದರ ಬಗ್ಗೆ ಮಾತಾಡುತ್ತಾರೆ. ಅವರು ಅನ್ಯಜನರಿಗೋಸ್ಕರ "ಒಂದು ಕ್ರಿಸ್ತನ ಒಡಂಬಡಿಕೆ" ಮತ್ತು ಯೆಹೂದ್ಯರಿಗೋಸ್ಕರ "ಒಂದು ಧರ್ಮಶಾಸ್ತ್ರದ ಒಡಂಬಡಿಕೆ" ಇರುತ್ತದೆಂದು ಹೇಳುತ್ತಾರೆ. "ಈ ವಿಧದಲ್ಲಿ ಎಲ್ಲಾ ಇಸ್ರಾಯೇಲ್ಯರು ರಕ್ಷಿಸಲ್ಪಡುವರು" ಎಂಬದಾಗಿ ಅವರು ವಾದಿಸುತ್ತಾರೆ.

ಈ ದಿಗಿಲು ಹುಟ್ಟಿಸುವ ನಿಲುವು ಪೌಲನ ಸಂದೇಶವನ್ನು ವಿಕೃತಗೊಳಿಸುವದಾಗಿರುತ್ತದೆ. ಅಪೊಸ್ತಲನು ರೋಮಾಪುರದವರಿಗೆ ಪತ್ರಿಕೆಯಲ್ಲಿ ಯೆಹೂದ್ಯರು ಹಾಗೂ ಅನ್ಯಜನರು ಒಂದೇ ರೀತಿಯಲ್ಲಿ *ಕಳೆದುಹೋಗಿದ್ದಾರೆ* ಮತ್ತು ಒಂದೇ ರೀತಿಯಲ್ಲಿಯೇ *ರಕ್ಷಿಸಲ್ಪಡುವರು* ಎಂಬದನ್ನು ಸಾಭಿತುಗೊಳಿಸಿದ್ದಾನೆ. ದೇವರು ನಮಗೆ ರಕ್ಷಣೆಯ ಎರಡು ದಾರಿಗಳನ್ನು ಅನುಗ್ರಹಿಸಿರುವದಿಲ್ಲ, ಆದರೆ ಒಂದೇ ದಾರಿಯನ್ನು ಒದಗಿಸಿರುತ್ತಾನೆ. ಯೇಸು ಹೀಗೆ ಹೇಳಿದನು, "ನಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ; ನನ್ನ ಮೂಲಕವಾಗಿ ಹೊರತು ಯಾರೂ ತಂದೆ ಬಳಿಗೆ ಬರುವದಿಲ್ಲ" (ಯೋಹಾನ 14:6). ರೋಮಾ 11:25, 26ರ ತಕ್ಷಣದ ಸನ್ನಿವೇಶದಲ್ಲಿ, ನಮಗೆ ದೇವರು ಆಶೀರ್ವದಿಸಲಿರುವ ಎರಡು "ಎಣ್ಣೇಮರಗಳು" (ಯೆಹೂದ್ಯರಿಗಾಗಿ ಒಂದು ಮತ್ತು ಅನ್ಯಜನರಿಗಾಗಿ ಇನ್ನೊಂದು) ಕಾಣುವದಿಲ್ಲ; ಒಂದೇ *ಒಂದು* ಇರುತ್ತದೆ.

ನಾವು ವಾಕ್ಯಭಾಗವು ಏನನ್ನು ಹೇಳುವದಿಲ್ಲ ಎಂಬುದನ್ನು ಚರ್ಚಿಸಿದ್ದೇವೆ. ಈಗ ಅದು ಏನನ್ನು ಹೇಳುತ್ತದೆಂಬುದನ್ನು ಚರ್ಚಿಸುವ ಸಮಯವಾಗಿರುತ್ತದೆ.

ನಮ್ಮ ಅರ್ಥನಿರೂಪಣೆಯನ್ನು ಪ್ರಭಾವಿಸುವ ಪ್ರಶ್ನೆಯೆಂದರೆ ಇದೇ: "ವಚನ 26ರಲ್ಲಿ 'ಇಸ್ರಾಯೇಲ್' ಎಂಬ ಪದವು ಯಾರನ್ನು ಸೂಚಿಸುತ್ತದೆ?" ಗತಕಾಲದ ದಿನಗಳಲ್ಲಿ, ಒಂದು ಅತ್ಯಂಥ ಜನಪ್ರಿಯ ಅರ್ಥನಿರೂಪಣೆ ಏನಾಗಿತ್ತೆಂದರೆ, 26ನೇ ವಚನದಲ್ಲಿ, "ಇಸ್ರಾಯೇಲ್" ಎಂಬುದು ಆತ್ಮೀಕ ಇಸ್ರಾಯೇಲನ್ನು—ಅಂದರೆ, ಸಭೆಯನ್ನು—ಸೂಚಿಸುತ್ತದೆ ಎಂಬುದೆ. ಇದು ಸಾಧ್ಯವಿರುತ್ತದೆ. ಬೇರೊಂದೆಡೆಯಲ್ಲಿ, ಪೌಲನು ಸಭೆಯನ್ನು "ಇಸ್ರಾಯೇಲ್" ಎಂದು ಸಂಬೋಧಿಸಿದ್ದಾನೆ (ಗಲಾತ್ಯ 6:16), ಮತ್ತು ಈ ಅಭಿಪ್ರಾಯವು ಬೈಬಲಿನಲ್ಲಿ

ಬೇರೆಡೆಯಲ್ಲಿರುವ ಉಪದೇಶಕ್ಕೆ ವಿರುದ್ಧವಾಗಿರುವದಿಲ್ಲ. ಹೇಗೂ, ಈ ನಿಲುವಿನಲ್ಲಿ ಒಂದು ಮೂಲಭೂತ ದುರ್ಬಲತೆಯಿರುತ್ತದೆ. ನಾವು ಅಧ್ಯಯನ ಮಾಡುತ್ತಿರುವ ವಿಭಾಗದಲ್ಲಿ ಪೌಲನು ಪುನಃ ಪುನಃ ಇಸ್ರಾಯೇಲಿನ ಬಗ್ಗೆ ಮಾತಾಡುತ್ತಾನೆ ಮತ್ತು ಪ್ರತಿ ಸಾರಿ ಆತನು ಶಾರೀರಿಕ ಇಸ್ರಾಯೇಲ್‌ನ್ನು ಮನಸ್ಸಿನಲ್ಲಿಟ್ಟುಕೊಂಡು ಮಾತಾಡುತ್ತಿದ್ದಾನೆ. ಅಷ್ಟುಮಾತ್ರವಲ್ಲದೆ, ಅಪೊಸ್ತಲನು 25ನೇ ವಚನದಲ್ಲಿ ಶಾರೀರಿಕ ಇಸ್ರಾಯೇಲ್‌ನ್ನು ಸೂಚಿಸುತ್ತಿರುವದು ಸ್ಪಷ್ಟವಾಗಿ ತೋರುತ್ತದೆ—ಮತ್ತು 26ನೇ ವಚನವು ಹಿಂದಿನ ವಚನದಲ್ಲಿ ಆರಂಭಗೊಂಡ ವಾಕ್ಯದ ಮುಂದುವರಿಕೆಯಾಗಿರುತ್ತದೆ. 26ನೇ ವಚನದಲ್ಲಿನ "ಇಸ್ರಾಯೇಲ್" ಎಂಬುದನ್ನು ಶಾರೀರಿಕ ಇಸ್ರಾಯೇಲ್ ಎಂದು ಅರ್ಥನಿರೂಪಣೆ ಮಾಡುವದು ಸಹಜವೆಂದು ತೋರುತ್ತದೆ.

ಇದು ಈಗಲೂ ಪೌಲನು ಮನಸ್ಸಿನಲ್ಲಿ ಇಡೀ ಶಾರೀರಿಕ ಇಸ್ರಾಯೇಲ್‌ನ್ನು ಹೊಂದಿದ್ದನೋ ಅಥವಾ "ಇಸ್ರಾಯೇಲಿನೊಳಗಿನ ಇಸ್ರಾಯೇಲ್.ನ್ನು" ಹೊಂದಿದ್ದನೋ ಎಂಬ ಪ್ರಶ್ನೆಯನ್ನು ಉಳಿಸುತ್ತದೆ (9:6 ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಸ್ಪಷ್ಟವಾಗಿರುವ ಪ್ರಕಾರ, 25ನೇ ವಚನದಲ್ಲಿ ಪೌಲನು ಶಾರೀರಿಕ ಇಸ್ರಾಯೇಲ್. ನ್ನು ಮನಸ್ಸಿನಲ್ಲಿಟ್ಟುಕೊಂಡು ಮಾತಾಡಿರುತ್ತಾನೆ. ಅಲ್ಲದೆ, "ರಕ್ಷಿಸಲ್ಪಟ್ಟವರೆಲ್ಲರೂ ರಕ್ಷಿಸಲ್ಪಡುವರು" ಎಂದು ಹೇಳುವದು ಅಧಿಕಾರ್ಥವನ್ನು ಕಲ್ಪಿಸಿದಂತಾಗುತ್ತದೆ.

*ಪರಿಗಣಿಸಲ್ಪಡಬೇಕಾದ ಸಂಭಾವ್ಯ ನಿಲುವು.* ರೋಮಾ 11:26ರಲ್ಲಿ "ಇಸ್ರಾಯೇಲ್" ಯಾರೆಂಬುದರ ವಿಷಯದಲ್ಲಿ ಮೂರು ನಿಲುವುಗಳಿರುತ್ತವೆ: (1) ಆತ್ಮಿಕ ಇಸ್ರಾಯೇಲ್ (ಸಭೆ), (2) ಒಟ್ಟಾರೆಯಾದ ಶಾರೀರಿಕ ಇಸ್ರಾಯೇಲ್, ಮತ್ತು (3) "ಇಸ್ರಾಯೇಲಿ ನೊಳಗಿನ ಇಸ್ರಾಯೇಲ್" ("ನಿಜ ಇಸ್ರಾಯೇಲ್," ಯೇಸುವನ್ನು ಮೆಸ್ಸೀಯನೆಂದು ಅಂಗೀಕರಿಸಿ ಕೊಂಡಿರುವ ಯೆಹೂದ್ಯರು). ನಾವು ಎರಡನೆಯ ನಿಲುವಿಗೆ ಪ್ರಾಧಾನ್ಯತೆ ಕೊಡುತ್ತೇವೆ. ಹೇಗೂ, ಎಲ್ಲಾ ಮೂರು ನಿಲುವುಗಳೂ ಸಹ ತರ್ಕಬದ್ಧವಾಗಿರುವದರಿಂದ ಮತ್ತು ಬೇರೆಡೆಯಲ್ಲಿರುವ ಪ್ರೇರಿತ ಉಪದೇಶವನ್ನು ಉಲ್ಲಂಘಿಸುವದಿಲ್ಲವಾದ್ದರಿಂದ, ಪೌಲನು ಮನಸ್ಸಿನಲ್ಲಿ ಯಾವದನ್ನು ಹೊಂದಿದ್ದನೆಂಬ ವಿಚಾರದಲ್ಲಿ ಹೀಗೆಯೇ ಎಂದು ಮೊಂಡುವಾದ ಮಾಡುವದಕ್ಕಾಗುವದಿಲ್ಲ. ಈ ನಿಲುಗಳನ್ನು ಒಂದೇ ಮೂಲಭೂತ ನಿರ್ಣಯಕ್ಕೆ—ಸ್ವಲ್ಪ ವ್ಯತ್ಯಾಸವಾದ ದಾರಿಗಳ ಮೂಲಕ—ಬರುವದಕ್ಕೆ ಉಪಯೋಗಿಸಲ್ಪ ಡಬಲ್ಲವು.

ಇದುವರೆಗೆ ಹೇಳಲ್ಪಟ್ಟಿರುವದನ್ನು ಮನಸ್ಸಿನಲ್ಲಿಟ್ಟುಕೊಂಡು, ಅಧ್ಯಾಯ 11ರಲ್ಲಿನ ಪೌಲನ ಒಟ್ಟಾರೆಯಾದ ಉದ್ದೇಶ, ತಕ್ಷಣದ ಸನ್ನಿವೇಶ, ಮತ್ತು ಬೈಬಲ್. ನ ಸಾಮಾನ್ಯ ಭಾವನೆಗಳೊಂದಿಗೆ ಸಮ್ಮತಿಸುವಂತಹ ಒಂದು ಅರ್ಥನಿರೂಪಣೆಯನ್ನು ರೋಮಾ 11:25, 26 ವಚನಗಳ ಕುರಿತು ಮುಂದಿಡುವ ಪ್ರಯತ್ನವನ್ನು ಮಾಡೋಣ. ಪೌಲನು ಹೀಗೆ ಆರಂಭಿಸಿದನು, "[ಅನ್ಯಜನಾಂಗದ] ಸಹೋದರರೇ, . . . ಇದುವರೆಗೆ ಗುಪ್ತವಾಗಿದ್ದ ಒಂದು ಸಂಗತಿ ನಿಮಗೆ ತಿಳಿದಿರಬೇಕೆಂದು ಅಪೇಕ್ಷಿಸುತ್ತೇನೆ" (11:25b). ಈಗಾಗಲೇ ತಿಳಿಸಿರುವ ಪ್ರಕಾರ, ಮರ್ಮ ಎಂದರೆ ದೇವರು ತಾನು ಅನ್ಯಜನರನ್ನು ಅಂಗೀಕರಿಸಿಕೊಳ್ಳುವದನ್ನು ಹೇಗೆ ಇಸ್ರಾಯೇಲರು ತನ್ನ ಬಳಿಗೆ ಹಿಂದಿರುಗುವ ಹಾಗೆ ಉಪಯೋಗಿಸುವನೆಂಬದರ ಬಗ್ಗೆ ಪೌಲನು ಇದುವರೆಗೆ ಪ್ರಕಟಗೊಳಿಸುತ್ತಿರುವಂಥದ್ದು ಎಂದರ್ಥವಾಗಿದೆ: "ನಿಮ್ಮನ್ನು ನೀವೇ [ಅನ್ಯಜನರು] ಬುದ್ಧಿವಂತರೆಂಬದಾಗಿ ಎಣಿಸಿಕೊಳ್ಳದಂತೆ [ಹೆಚ್ಚಿಸಿಕೊಳ್ಳದಂತೆ (11:18)

ಅಥವಾ ಗರ್ವಪಡದಂತೆ" (11:20)] (11:25a).

ಪೌಲನು ಬಳಿಕ "ಮರ್ಮ" ದ ಕುರಿತಾದ ತನ್ನ ಪ್ರಮುಖ ವಿಚಾರವನ್ನು ಮುಂದುವರೆಸುತ್ತಾನೆ: "ಅದೇನೆಂದರೆ ಇಸ್ರಾಯೇಲ್ಯರಲ್ಲಿ ಒಂದು ಪಾಲು ಜನರಿಗೆ ಉಂಟಾದ ಮೊಂಡುತನವು" (11:25c). "ಇಸ್ರಾಯೇಲ್ಯರು" ಎಂಬುದು ಶಾರೀರಿಕ ಇಸ್ರಾಯೇಲ್ಯರನ್ನು (ದೊಡ್ಡ ವೃತ್ತ) ಎಂದರ್ಥವಾಗಿದೆ. ನಾವು "ಒಂದು ಪಾಲು ಜನರಿಗೆ ಉಂಟಾದ ಮೊಂಡುತನ" ಎಂಬುದನ್ನು ಓದುವಾಗ, ಯಾವದೇ ಇಸ್ರಾಯೇಲನಿದ್ದರೂ "ಒಂದು ಪಾಲು ಮೊಂಡತನ" ಉಂಟಾದವನೆಂದು ಯೋಚಿಸಬಾರದು; ಬದಲಾಗಿ, ಇಸ್ರಾಯೇಲ್ ಜನಾಂಗದ *ಒಂದು ಭಾಗ*ದವರಿಗೆ ಮೊಂಡುತನ ಉಂಟಾಗಿರುತ್ತದೆಂದು ತಿಳಿಯತಕ್ಕದ್ದು. "ಇಸ್ರಾಯೇಲಿನ ಒಂದು ಭಾಗದ ಜನರಿಗೆ ಮೊಂಡುತನ ಉಂಟಾಗಿರುತ್ತದೆ" ಎಂಬದಾಗಿ RSV ತರ್ಜುಮೆಯು ಹೇಳುತ್ತದೆ. ಪೌಲನು 7ನೇ ವಚನದಲ್ಲಿ, ಹೀಗೆ ಹೇಳುತ್ತಾನೆ, "ಇಸ್ರಾಯೇಲ್ಯರು [ದೊಡ್ಡ ವೃತ್ತ] ಹುಡುಕಿದ್ದು [ದೇವರ ಸಂಗಡದ ಸರಿಯಾದ ಸಂಬಂಧ] ಅವರೆಲ್ಲರಿಗೆ ದೊರೆಯಲಿಲ್ಲ, ಅವರೊಳಗೆ ಆಯಲ್ಪಟ್ಟವರಿಗೆ [ಚಿಕ್ಕ ವೃತ್ತ] ದೊರೆಯಿತು. ಮಿಕ್ಕವರು [ಚಿಕ್ಕ ವೃತ್ತದವರನ್ನು ಹೊರತು ಪಡಿಸಿ ಉಳಿದೆಲ್ಲಾ ದೊಡ್ಡ ವೃತ್ತದವರು] ಮೊಂಡರಾದರು."

"ಒಂದು ಪಾಲು ಜನರಿಗೆ ಉಂಟಾದ ಮೊಂಡುತನ" ವು "ಅನ್ಯಜನಗಳ ಸಮಯದಾಯವು ದೇವರ ರಾಜ್ಯದಲ್ಲಿ ಸೇರುವ ತನಕ" ಇರುವದು (11:25d). "ಸೇರುವ ತನಕ" ಎಂಬುದು 12ನೇ ವಚನದಲ್ಲಿರುವ "ಪೂರ್ಣ ಪುನಃಸ್ಥಾಪನೆ" ಎಂಬದಕ್ಕಿರುವ ಗ್ರೀಕ್. ನ ಅದೇ (*plērōma*) ಪದದಿಂದ ಬಂದದ್ದಾಗಿದೆ.[37] ಆಶ್ಚರ್ಯಕರವಾಗಿ, ಅನೇಕ ಬರಹಗಾರರು, ವೇದಪಂಡಿತರು, ಮತ್ತು ಅನುವಾದಕರು 25ನೇ ವಚನದಲ್ಲಿನ *plērōma* ಎಂಬುದಕ್ಕೆ 12ನೇ ವಚನದಲ್ಲಿರುವದಕ್ಕಿಂತ ವ್ಯತ್ಯಾಸವಾದ ಅರ್ಥವನ್ನು ಕಲ್ಪಿಸುತ್ತಾರೆ. ಇವರಲ್ಲಿ ಬಹುತೇಕರು 25ನೇ ವಚನದಲ್ಲಿ *plērōma* ಎಂಬುದು "ಸಂಖ್ಯೆಯ ಪೂರ್ಣತೆ" ಯನ್ನು ಸೂಚಿಸುತ್ತದೆಂದು ವಾದಿಸುತ್ತಾರೆ.[38]

ಗ್ರೀಕ್ ಪದಗಳು ಬೇರೆ ಬೇರೆ ಸಂದರ್ಭದಲ್ಲಿ ಬೇರೆ ಬೇರೆಯಾದ ಅರ್ಥಗಳನ್ನು ನೀಡುವದು ಸಾಧ್ಯವಿರುತ್ತದೆ. ಹೇಗೂ, ಒಂದು ಪದವನ್ನು ವ್ಯತ್ಯಾಸವಾಗಿ ಅರ್ಥನಿರೂಪಿಸುವದಕ್ಕೆ ಬಲವಾದ ಕಾರಣವಿರುವ ಹೊರತು, ಆ ಪದವು ಒಂದೇ ಸನ್ನಿವೇಶದಲ್ಲಿ ಕಾಣಿಸಿಕೊಳ್ಳುವ ಪ್ರತಿ ಸಾರಿಯೂ ಏಕ ರೀತಿಯ ಅರ್ಥವನ್ನು ಒದಗಿಸುವದು ವಾಡಿಕೆಯಲ್ಲಿರುವ ಕಾರ್ಯವಾಗಿರುತ್ತದೆ. *Plērōma* ಎಂಬುದಕ್ಕೆ 12ನೇ ವಚನದಲ್ಲಿರುವದಕ್ಕಿಂತಲೂ ವ್ಯತ್ಯಾಸವಾದ ಅರ್ಥವನ್ನು 25ನೇ ವಚನದಲ್ಲಿ ಅದಕ್ಕೆ ಕೊಡುವದಕ್ಕಿರುವ ಯಾವದೇ ಒತ್ತಾಯಗೊಳಿಸುವ ಕಾರಣವೂ ನಮಗೆ ಕಾಣಿಸುವದಿಲ್ಲ. ನಾವು 12ನೇ ವಚನವನ್ನು ಅಧ್ಯಯನ ಮಾಡಿದಾಗ, *plērōma* ("ಪೂರ್ಣ ಪುನಃಸ್ಥಾಪನೆ") ಎಂಬುದು "ಬಿದ್ದುಹೋದದ್ದು" ಮತ್ತು "ಸೋತುಹೋದದ್ದು" ಎಂಬುದಕ್ಕೆ ವಿರುದ್ಧ ಹೋಲಿಸಲ್ಪಟ್ಟಿರುತ್ತದೆಂಬುದನ್ನು ಕಲಿತೆವು. ಅಲ್ಲದೆ 12ನೇ ವಚನವು 15ನೇ ವಚನದೊಂದಿಗೆ ಸಮಾನಾರ್ಥವನ್ನು ಹೊಂದಿದೆ ಎಂಬುದನ್ನು ಸಹ ಗಮನಿಸಿದೆವು, ಅದು ಬಿದ್ದುಹೋದದ್ದು ಮತ್ತು ಸೋತುಹೋದದ್ದು ("ದೇವರಿಂದ ತಿರಸ್ಕರಿಸಲ್ಪಟ್ಟಿದ್ದು") ಮತ್ತು ಪೂರ್ಣ ಪುನಃಸ್ಥಾಪನೆ (ದೇವರಿಂದ ಅಂಗೀಕರಿಸಿಕೊಳ್ಳಲ್ಪಡುವಿಕೆ) ಎಂಬ ಫಲಿತಗಳನ್ನು ನೀಡುತ್ತದೆ.

ನಾವು ಅಂತಿಮ ನಿರ್ಣಯಕ್ಕೆ ಬಂದದ್ದೇನೆಂದರೆ, 12ನೇ ವಚನದಲ್ಲಿ, "ಪೂರ್ಣ ಪುನಃಸ್ಥಾಪನೆ" ಎಂಬುದು ಯೆಹೂದ್ಯರು ದೇವರ ಸಂಕಲ್ಪವನ್ನು ನೆರವೇರಿಸುವದೆಂದರ್ಥವನ್ನು ಕೊಡುತ್ತದೆ, ಅದರಿಂದ ಅವರು ದೇವರಿಂದ ಸ್ವೀಕಾರಕ್ಕೊಳಗಾಗುವಂತಾಗುತ್ತದೆ. ಈ ಮೂಲಭೂತ ಅರ್ಥವು 25ನೇ ವಚನಕ್ಕಾಗಿ ಸೂಕ್ತವಾಗಿರುತ್ತದೆ: "ಇಸ್ರಾಯೇಲ್ಯರಲ್ಲಿ ಒಂದು ಪಾಲು ಜನರಿಗೆ ಉಂಟಾದ ಮೊಂಡುತನವು ಯಾವಾಗಲೂ ಇರದೆ ಅನ್ಯಜನಗಳ ಸಮುದಾಯವು ದೇವರ ರಾಜ್ಯದಲ್ಲಿ ಸೇರುವ ತನಕ ಮಾತ್ರ ಇರುವದು." 25ನೇ ವಚನವನ್ನು ಪುನಃ 11ನೇ ಅಧ್ಯಾಯದಲ್ಲಿ ಪೌಲನ ಪ್ರಾಥಮಿಕ ತರ್ಕದ ಬೆಳಕಿನಲ್ಲಿ ನೋಡಿರಿ:

(ದೇವರಿಂದ) ಯೆಹೂದ್ಯರ ತಿರಸ್ಕಾರ ("ಮೊಂಡರಾಗುವದು")
(ದೇವರಿಂದ) ಅನ್ಯಜನರ ಸ್ವೀಕಾರ ("ಸೇರುವ ತನಕ")

ಒಂದು ವೇಳೆ ಪೌಲನು ಪುನಃ ಯೆಹೂದ್ಯರ ಮತ್ತು ಅನ್ಯಜನರ ರಕ್ಷಣೆಯ ನಡುವೆ ಇರುವ ಪರಸ್ಪರ ಸಂಬಂಧವನ್ನು ಕುರಿತು ಒತ್ತಿ ಹೇಳುತ್ತಿರುವದಾದರೆ, ಆತನ ಮುಂದಿನ ಅಂಶವು ಏನಾಗಿರತಕ್ಕದ್ದು? ಆತನು ಒಂದು ವಿಧದಲ್ಲಿ, ಆತನು ಒತ್ತಿಹೇಳತಕ್ಕದ್ದೇನೆಂದರೆ, ಅನ್ಯಜನರು "ದೇವರ ರಾಜ್ಯದಲ್ಲಿ ಸೇರುವದು" ಯೆಹೂದ್ಯರಲ್ಲಿ ಅಸೂಯೆಯನ್ನು ಹುಟ್ಟಿಸಿ ಅವರು ಮೆಸ್ಸೀಯನ ಕುರಿತ ಪೂರ್ವಕಲ್ಪನೆಯನ್ನು ಬದಿಗೊತ್ತಿ ಯೇಸುವನ್ನು ಅಂಗೀಕರಿಸಿಕೊಂಡು ರಕ್ಷಣೆ ಹೊಂದುವಂತೆ ನಡಿಸುವ ಉದ್ದೇಶವನ್ನೊಳಗೊಂಡಿತ್ತು ಎಂಬುದೆ. ಪೌಲನು ಅದನ್ನು ಮಾಡಿದನೋ? ನಾವು ಮುಂದಿನ ವಾಕ್ಯಭಾಗದಲ್ಲಿ ಸಾಗೋಣ.

26ನೇ ವಚನವು ಹೀಗೆ ಆರಂಭಗೊಳ್ಳುತ್ತದೆ, "ಆ ಮೇಲೆ . . ." "ಆ ಮೇಲೆ" ಎಂದು ಅನುವಾದಿಸಲ್ಪಟ್ಟಿರುವ ಪದವು οὕτως (*houtōs*) ಎಂಬ ಪದದಿಂದ ಬಂದದ್ದಾಗಿದೆ. ಆಂಗ್ಲದಲ್ಲಿ ಪದವಾದ "so" ("ಆ ಮೇಲೆ") ರೀತಿಯಲ್ಲಿಯೇ, *houtōs* ಎಂಬುದು ಒಂದು ಕ್ರಿಯಾವಿಶೇಷಣ ರೀತಿಯಲ್ಲಿರುತ್ತದೆ, ಅದು "ಈ ವಿಧದಲ್ಲಿ"[39] ಅಥವಾ "ಈ ರೀತಿಯಾಗಿ"[40] ಎಂದರ್ಥವನ್ನು ನೀಡುತ್ತದೆ. "ಆ ಮೇಲೆ"—ಈ ವಿಧದಲ್ಲಿ (ದೇವರು ಅನ್ಯಜನರನ್ನು ಸ್ವೀಕರಿಸಿಕೊಳ್ಳುವ ಮೂಲಕ)—"ಇಸ್ರಾಯೇಲ್ ಜನವೆಲ್ಲಾ [ಅಸೂಯೆಗೊಳ್ಳಲ್ಪಟ್ಟು ಕ್ರಿಸ್ತನನ್ನು ಅಂಗೀಕರಿಸಿಕೊಳ್ಳುವದು ಮತ್ತು ಆ ಮೂಲಕ] ರಕ್ಷಣೆಹೊಂದುವದು."

(ದೇವರಿಂದ) ಯೆಹೂದ್ಯರ ತಿರಸ್ಕಾರ ("ಮೊಂಡರಾಗುವದು")
(ದೇವರಿಂದ) ಅನ್ಯಜನರ ಸ್ವೀಕಾರ ("ಸೇರುವ ತನಕ")
(ದೇವರಿಂದ) ಯೆಹೂದ್ಯರ ಸ್ವೀಕಾರ ("ಇಸ್ರಾಯೇಲ್ ಜನವೆಲ್ಲಾ ರಕ್ಷಣೆ ಹೊಂದುವದು")

ಯಾರಾದೊಬ್ಬರು ಹೀಗೆ ಆಕ್ಷೇಪಣೆಯೆತ್ತಬಹುದು, "ಆದರೆ ನೀನು 'ವೆಲ್ಲಾ' ಎಂಬ ಪದದ ಬಗ್ಗೆ ಸ್ಪಷ್ಟಗೊಳಿಸಿರುವದಿಲ್ಲ. 'ವೆಲ್ಲಾ' ಎಂಬ ಪದವು ಕ್ರಮೇಣದಲ್ಲಿ ಎಲ್ಲಾ (ಅಥವಾ ಕನಿಷ್ಠ ಅವರಲ್ಲಿ ಬಹುಪಾಲು) ಯೆಹೂದ್ಯರು ಯೇಸುವನ್ನು ಅಂಗೀಕರಿಸಿಕೊಳ್ಳುರೆಂಬುದನ್ನು ಸೂಚಿಸುವದಿಲ್ಲವೋ?" ಹಾಗೆ ಸೂಚಿಸಬೇಕೆಂಬ ಅವಶ್ಯವಿಲ್ಲ. ಒಂದು ವೇಳೆ ನಾನು,

"ದೇವರು ಪ್ರತಿಯೊಬ್ಬರಿಗೂ ನಂಬಿಕೆಯಿಟ್ಟು, ಪಶ್ಚಾತ್ತಾಪಪಟ್ಟು, ಅರಿಕೆಮಾಡಿ, ಮತ್ತು ದೀಕ್ಷಾಸ್ನಾನ ಮಾಡಿಕೊಳ್ಳಬೇಕೆಂದು ಆಜ್ಞಾಪಿಸಿದ್ದಾನೆ; ಈ ವಿಧವಾಗಿ ಎಲ್ಲಾ ಜನರು ರಕ್ಷಿಸಲ್ಪಡುವರು" ಎಂದು ಹೇಳಿದರೆ ಹೇಗಿರುತ್ತದೆ? ಇದರಿಂದ ನೀವು "ಎಲ್ಲಾ ಜನರು ರಕ್ಷಣೆ ಹೊಂದುವರು" ಎಂಬ ನಿರ್ಣಯಕ್ಕೆ ಬರುವಿರೋ? ಇಲ್ಲ, ನನ್ನ ಮಾತಿನ ಅರ್ಥವು ದೇವರು ಆಜ್ಞಾಪಿಸಿದ್ದನ್ನು ಮಾಡುವದರ ಮೂಲಕ ಮಾತ್ರವೇ ಒಬ್ಬನು ರಕ್ಷಿಸಲ್ಪಡಬಲ್ಲನೆಂಬುದೇ ಎಂಬದಾಗಿ ನೀವು ಅರ್ಥಮಾಡಿಕೊಳ್ಳುವಿರಿ.

ಇನ್ನೊಬ್ಬರು ವಿರೋಧ ವ್ಯಕ್ತಪಡಿಸಿ, "ಆದರೆ ನೀನು ರೋಮಾ 11:25, 26 ವಚನಗಳ ಬಗ್ಗೆ ನೀಡಿದ ಅರ್ಥನಿರೂಪನೆಯು ಕೇವಲ ಪೌಲನ ಮಾತುಗಳನ್ನೇ ಪುನರಾವರ್ತನೆ ಮಾಡಿದಂತಾಗಿಸುತ್ತದೆ" ಎಂದು ಹೇಳಬಹುದು. ಈ ಆಕ್ಷೇಪಣೆಯಲ್ಲಿ ಬಹಳ ಸ್ವಲ್ಪ ಅರ್ಹತೆಯನ್ನು ಹೊಂದಿದೆ ಯಾಕೆಂದರೆ ಪೌಲನು ಅನೇಕ ಪ್ರಮುಖ ವಿಷಯಗಳನ್ನು ಮತ್ತೇ ಮತ್ತೇ ಪುನರಾವರ್ತಿಸಿದನು. ಪೌಲನು 11ನೇ ಅಧ್ಯಾಯ ಪ್ರಮುಖ ವಿಚಾರವನ್ನು 25 ಮತ್ತು 26 ವಚನಗಳಲ್ಲಿ ಪುನರಾವರ್ತಿಸಿದ್ದರಲ್ಲಿ ಯಾವದೇ ಸಮಸ್ಯೆಯಿರುವದಿಲ್ಲ.

ಇಲ್ಲಿ ತೆಗೆದುಕೊಳ್ಳಲಾಗಿರುವ ಅಭಿಪ್ರಾಯವನ್ನು ಈ ಮಾತುಗಳಲ್ಲಿ ಸಾರಾಂಶಿಸಬಹುದು: ದೇವರು ಅನ್ಯಜನರನ್ನು ಸ್ವೀಕಾರಮಾಡಿಕೊಳ್ಳುವ ವಿಧದ ಮೂಲಕ, ಯೆಹೂದ್ಯರು ಕ್ರಿಸ್ತನನ್ನು ಅಂಗೀಕರಿಸಿಕೊಂಡು ರಕ್ಷಿಸಲ್ಪಡುವಂತೆ ಸ್ಫೂರ್ತಿ ಗೊಳ್ಳಬಹುದು. ಅಂದರೆ, ಅನ್ಯಜನರು ಸುವಾರ್ತೆಯನ್ನು ಅಂಗೀಕರಿಸಿಕೊಳ್ಳುವದಕ್ಕೆ ಪ್ರತಿಕ್ರಿಯಿಸುವ "ವಿಧದಲ್ಲಿ," ಇಸ್ರಾಯೇಲ್ಯರು ಸುವಾರ್ತೆಯನ್ನು ಮರುಪರಿಶೀಲಿಸಬಹುದು ಮತ್ತು ಕ್ರೈಸ್ತರಾಗುವದಕ್ಕೆ ನಿರ್ಧರಿಸಬಹುದು. ಈ ವಿವರಣೆಯು ವಾಕ್ಯಭಾಗದ ಬೇಡಿಕೆಯನ್ನು ಸಂಧಿಸುತ್ತದೋ ಇಲ್ಲವೋ ಎಂಬ ವಾಸ್ತವಾಂಶವನ್ನು ಪರಿಗಣಿಸಿರಿ. ನಂತರ ಅಧ್ಯಯನ ಮತ್ತು ಪ್ರಾರ್ಥನೆಯನ್ನು ಮುಂದುವರೆಸಿರಿ ಮತ್ತು ನಿಮ್ಮದೇ ಆದ ನಿರ್ಣಯಗಳನ್ನು ತೆಗೆದುಕೊಳ್ಳಿರಿ.

**ವಚನಗಳು 26b, 27.** ಅದ್ಭುತವಾದ "ಮರ್ಮ" (ಪ್ರಕಟನೆ) ಒಂದು ಭಾಗವು ಅನ್ಯಜನರ ಸ್ವೀಕಾರವನ್ನು ಉಪಯೋಗಿಸಿ ಯೆಹೂದ್ಯರನ್ನು ನಂಬಿಕೆಯಿಡುವಂತೆ ಪ್ರಚೋಧಿಸುವದಾಗಿತ್ತು. ಪೌಲನು ಆಗಾಗ್ಗೆ ಮಾಡಿದ ಹಾಗೆಯೇ, ಆತನು ತನ್ನ ವಾದಕ್ಕೆ ಶಾಸ್ತ್ರಗಳಿಂದ ಸಮರ್ಥನೆ ನೀಡುತ್ತಾನೆ: **ಇದಕ್ಕೆ ಆಧಾರವಾಗಿ ಶಾಸ್ತ್ರದಲ್ಲಿ—ಬಿಡಿಸುವವನು ಚೀಯೋನಿ ನೊಳಗಿಂದ ಹೊರಟು ಬಂದು ಯಾಕೋಬನಲ್ಲಿರುವ ಭಕ್ತಿಹೀನತೆಯನ್ನು ನಿವಾರಣೆಮಾಡುವನು. ನಾನು ಅವರ ಸಂಗಡ ಮಾಡಿಕೊಂಡ ಈ ಒಡಂಬಡಿಕೆಯು ನಾನು ಅವರ ಪಾಪಗಳನ್ನು ಪರಿಹರಿಸುವಾಗ ನೆರವೇರುವದು ಎಂದು ಬರೆದದೆ.** ಈ ಉಲ್ಲೇಖನವು ಹಳೆಯ ಒಡಂಬಡಿಕೆಯ ವಾಕ್ಯಭಾಗಗಳ ಮಿಶ್ರಣವಾಗಿರುತ್ತದೆ. ಪ್ರಾಥಮಿಕ ಸಂಬಂಧಸೂಚಕ ವಾಕ್ಯಭಾಗವು ಯೆಶಾಯ 59:20, 21a, ಅದು ಹೀಗೆ ಹೇಳುತ್ತದೆ, "ಆದರೆ ಚೀಯೋನಿಗೂ ದ್ರೋಹವನ್ನು ಬಿಟ್ಟುಬಿಟ್ಟ ಯಾಕೋಬ್ಯರ ಬಳಿಗೂ ವಿಮೋಚಕನಾಗಿ ಬರುವನು. ಯೆಹೋವನೇ ಇದನ್ನು ನುಡಿದಿದ್ದಾನೆ. ನಾನಂತೂ ಅವರೊಂದಿಗೆ ಈ ಒಡಂಬಡಿಕೆಯನ್ನು ಮಾಡಿಕೊಳ್ಳುವೆನು." ಆ ವಾಕ್ಯಭಾಗದಲ್ಲಿ ಯೆಶಾಯನು ಇಸ್ರಾಯೇಲ್ಯರ ಪುನಃಸ್ಥಾಪನೆಯ ಕುರಿತು ಮುಂತಿಳಿಸಿದನು. ಪೌಲನು ಈ ಮಾತುಗಳನ್ನು ದೇವರ ಬಳಿಗೆ ಬರುವಂತೆ ಯೆಹೂದ್ಯರಿಗೆ ದಾರಿಯನ್ನು ಒದಗಿಸುವ ಯೇಸುವಿಗೆ ಅನ್ವಯಿಸಿದನು. ಅಲ್ಲದೆ

ಯೆಶಾಯ 27:9ರಿಂದ ಸಹ ಒಂದು ಸಾಲು ಇರಬಹುದಾಗಿದೆ, ಅದು ಹೀಗೆ ಹೇಳುತ್ತದೆ, "ಯಾಕೋಬ್ಯರು . . . ಅಧರ್ಮಕ್ಕೆ ಪ್ರಾಯಶ್ಚಿತ್ತವಾಗುವದು." ಮುಕ್ತಾಯವು ನಮಗೆ ಯೆರೆಮೀಯನ ಪುಸ್ತಕದಲ್ಲಿರುವ "ಹೊಸದಾಗಿರುವ ಒಂದು ಒಡಂಬಡಿಕೆ" ಎಂಬ ವಾಗ್ದಾನವನ್ನು ಜ್ಞಾಪಿಸುತ್ತದೆ (ಯೆರೆಮೀಯ 31:31–34), ಅದು ಇದರೊಂದಿಗೆ ಮುಕ್ತಾಯಗೊಳ್ಳುತ್ತದೆ, "ನಾನು ಅಪರಾಧವನ್ನು ಕ್ಷಮಿಸಿ ಅವರ ಪಾಪವನ್ನು ನನ್ನ ನೆನಪಿಗೆ ಎಂದಿಗೂ ತರುವದಿಲ್ಲ."

ಹಳೆಯ ಒಡಂಬಡಿಕೆಯ ವಾಕ್ಯ ಮತ್ತು ಪೌಲನ ಉಲ್ಲೇಖನದಲ್ಲಿರುವ ಚಿಕ್ಕದಾದ ವ್ಯತ್ಯಾಸವೇನೆಂದರೆ ಯೆಶಾಯನು "ಚೀಯೋನಿಗೂ . . . ವಿಮೋಚಕನಾಗಿ ಬರುವನು" ಎಂದು ಹೇಳಿದರೆ, ಪೌಲನು "ಬಿಡಿಸುವವನು ಚೀಯೋನಿನೊಳಗಿಂದ ಹೊರಟು ಬಂದು" ಎಂದು ಹೇಳುತ್ತಾನೆ. ಪೌಲನು ಏಕೆ ಪದಗಳನ್ನು (ಪ್ರೇರಣೆಯೊಂದಿಗೆ) ಬದಲಾಯಿಸಿದನೆಂಬುದು ನಮಗೆ ಖಚಿತವಾಗಿ ತಿಳಿಯಲಾಗದು. ಬಹುಶಃ ಆತನು ಅನ್ಯಜನರಿಗೆ ಪುನಃ ಅವರ ರಕ್ಷಕನು *ಯೆಹೂದಿ* ಎಂಬುದನ್ನು ನೆನಪಿಸುತ್ತಿದ್ದಾನೆಂದು ತೋರುತ್ತದೆ. ಸಂಭಾವ್ಯತೆಯೆಂದರೆ, ಪೌಲನು "ಯೆರೂಸಲೇಮಿ*ನಿಂದ* ಯೆಹೋವನ ವಾಕ್ಯವೂ [ಸುವಾರ್ತೆ]" ಹೊರಡುವದು ಎಂಬ ಯೆಶಾಯನ ಪ್ರವಾದನೆಯಿಂದ ಪ್ರಭಾವಿತಗೊಂಡಿರಬೇಕು (ಯೆಶಾಯ 2:3; ಒತ್ತಿ ಹೇಳಿದ್ದು ನನ್ನದು; ನೋಡಿರಿ ಲೂಕ 24:47).

ರೋಮಾ 11:25–27 ವಚನಗಳು ಯುಗಾಂತ್ಯದ ಕುರಿತು ಮಾತಾಡುತ್ತಿವೆಯೆಂದು ಭಾವಿಸುವವರು ಯೋಚಿಸುವದೇನೆಂದರೆ ಪೌಲನು ಉಪಯೋಗಿಸುವ ಹಳೆಯ ಒಡಂಬಡಿಕೆಯ ಉಲ್ಲೇಖನವು ಯೇಸುವಿನ *ಎರಡನೆಯ* ಬರೋಣಕ್ಕೆ ಸಂಬಂಧಿಸಿದ್ದಾಗಿದೆ ಎಂಬದೆ. ಆ ಅರ್ಥನಿರೂಪಣೆಯನ್ನು ತಿರಸ್ಕರಿಸುವದಕ್ಕೆ ಹಲವಾರು ಕಾರಣಗಳಿರುತ್ತವೆ. (1) John R. W. Stott ಗಮನಕ್ಕೆ ತಂದ ಪ್ರಕಾರ, "ಯೆಶಾಯನ ಮೂಲವಾಕ್ಯ ದಲ್ಲಿರುವ, ಈ ವಾಕ್ಯಭಾಗವು, ಕ್ರಿಸ್ತನ ಮೊದಲನೆಯ ಬರೋಣವನ್ನು ಸೂಚಿಸಿ ಹೇಳಿದ್ದಾಗಿದೆ."[41] (2) ಕ್ರಿಸ್ತನ ಮೊದಲನೆಯ ಬರೋಣದ ಉದ್ದೇಶಗಳಲ್ಲೊಂದೆಂದರೆ "ಯಾಕೋಬನಲ್ಲಿರುವ [ಇಸ್ರಾಯೇಲ್ಯರು] ಭಕ್ತಿಹೀನತೆಯನ್ನು ನಿವಾರಣೆಮಾಡುವದು" (ನೋಡಿರಿ ಮತ್ತಾಯ 15:24), "ಅವರ ಪಾಪಗಳನ್ನು ಪರಿಹರಿಸುವದು"—ಅಂದರೆ, ಕಳೆದುಹೋದವರನ್ನು ರಕ್ಷಿಸುವದು (ಲೂಕ 19:10) ಆಗಿತ್ತು. ಯೇಸು ಎರಡನೆಯ ಸಾರಿ ಬರುವಾಗ, ಅದು ಪಾಪವನ್ನು ಪರಿಹರಿಸುವದಕ್ಕಾಗಿ ಅಲ್ಲ, ಆದರೆ ನ್ಯಾಯತೀರಿಸುವದಕ್ಕೆ ಆಗಿರುತ್ತದೆ (ಮತ್ತಾಯ 25:31–33). (3) ರೋಮಾ 11:26b, 27ನ್ನು ಯೆರೆಮೀಯನ "ಹೊಸ ಒಡಂಬಡಿಕೆಯ" ವಾಗ್ದಾನದಿಂದ ಬೇರ್ಪಡಿಸುವದು ಕಷ್ಟಕರವಾಗಿರುತ್ತದೆ, ಆದರೆ ಆ ಹೊಸ ಒಡಂಬಡಿಕೆಯು (ಯೇಸುವಿನ ಹೊಸ ಒಡಂಬಡಿಕೆ) ಈಗಾಗಲೇ ಸ್ಥಾಪಿಸಲ್ಪಟ್ಟಿರುತ್ತದೆ (ಇಬ್ರಿಯ 8:8–13). ಆದುದರಿಂದ, ನಾವು ನಿರ್ಣಯಕ್ಕೆ ಬರುವದೇನೆಂದರೆ, ರೋಮಾ 11:26b, 27 ವಚನಗಳು ಯೇಸುವಿನ ಮೊದಲನೆಯ ಬರೋಣಕ್ಕೆ—ಆಗ ಆತನು ನರಾವತಾರ ಎತ್ತಿ ಬಂದನು (ಯೋಹಾನ 1:14)—ಸಂಬಂಧ ಪಟ್ಟದ್ದಾಗಿವೆ, ಹೊರತು ಆತನ ಎರಡನೆಯ ಬರೋಣಕ್ಕೆ ಸಂಬಂಧ ಪಟ್ಟಿಲ್ಲ.

26 ಮತ್ತು 27 ವಚನಗಳಲ್ಲಿನ ಉಲ್ಲೇಖನದ ಗುರಿಯು ಏನಾಗಿತ್ತೆಂದರೆ

ಇಸ್ರಾಯೇಲ್ಯರನ್ನು ರಕ್ಷಿಸುವದಕ್ಕೆ (ಅವರನ್ನು ದೇವರ ಯೋಜನೆ ಹಾಗೂ ಸಂಕಲ್ಪಗಳೆಡೆಗೆ ತಿರಿಗಿ ಕರೆತರುವದಕ್ಕೆ) ವಿಮೋಚಕನು (ಕ್ರಿಸ್ತನು) ಬರುವನೆಂದು ಪ್ರವಾದಿಗಳು ಮುಂತಿಳಿಸಿದ್ದರೆಂಬುದನ್ನು ತೋರಿಸಿ ಕೊಡುವದೇ ಆಗಿತ್ತು. ಅನ್ಯಜನರನ್ನು ದೇವರು ಸ್ವೀಕಾರ ಮಾಡಿಕೊಳ್ಳುವದನ್ನು ನೋಡಿ ಯೆಹೂದ್ಯರು ಅಸೂಯೆಗೊಳ್ಳುವಾಗ ಇದು ಸಂಭವಿಸುವದು. ಯೆಹೂದ್ಯರನ್ನು ರಕ್ಷಿಸುವದಕ್ಕಾಗಿ ದೇವರು ಒಂದು ಯೋಜನೆಯನ್ನು ಹೊಂದಿದ್ದನು (ಮತ್ತು ಹೊಂದಿದ್ದಾನೆ), ಅದು ಕ್ರಿಸ್ತನ ಸುತ್ತ ಕೇಂದ್ರಿಕೃತವಾದ ಯೋಜನೆಯೇ.

**ವಚನಗಳು 28, 29.** ರಕ್ಷಣೆಯ ವಿಷಯದಲ್ಲಿ, ಯೆಹೂದ್ಯರು ರಕ್ಷಣೆ ಹೊಂದಬೇಕೆಂದು ದೇವರು ಈಗಲೂ *ಇಚ್ಛಿಸುತ್ತಾನೆಂ*ಬುದನ್ನು ನಾವು ತಿಳಿಯಬಲ್ಲೆವು. 28, 29 ವಚನಗಳಲ್ಲಿ, ಪೌಲನು ಹೀಗೆ ಹೇಳುತ್ತಾನೆ,

> **ಅವರು ಸುವಾರ್ತೆಯನ್ನು ಬೇಡವೆಂದದ್ದರಿಂದ ದೇವರು ನಿಮಗೆ ಹಿತವನ್ನು ಉಂಟು ಮಾಡಿ ಅವರನ್ನು ಶತ್ರುಗಳೆಂದೆಣಿಸಿದ್ದಾನೆ. ಆದರೂ ಅವರು ತಾನು ಆರಿಸಿಕೊಂಡ ಅಬ್ರಹಾಮ ಇಸಾಕ ಯಾಕೋಬರೆಂಬ ಪಿತೃಗಳ ವಂಶಸ್ಥರಾಗಿರುವದರಿಂದ ಅವರನ್ನು ಪ್ರಿಯರೆಂದು ಎಣಿಸಿದ್ದಾನೆ. ದೇವರು ವರಗಳನ್ನು ಅನುಗ್ರಹಿಸಿದ್ದಕ್ಕೂ ಜನರನ್ನು ಕರೆದದ್ದಕ್ಕೂ ಪಶ್ಚಾತ್ತಾಪಪಡುವವನಲ್ಲ.**

ಒಂದು ಕೋನದಿಂದ ನೋಡಿದರೆ, ಯೆಹೂದ್ಯರು "ಶತ್ರುಗಳು" ಆಗಿದ್ದರೆ; ಆದರೆ, ಇನ್ನೊಂದು ಕೋನದಿಂದ, ಅವರು "ಪ್ರಿಯರು" ಆಗಿದ್ದರು.

ಶಾರೀರಿಕ ಯೆಹೂದ್ಯರು ಈಗಲೂ "ದೇವರಾದುಕೊಂಡ ಪ್ರಜೆ" ಎಂದು ನಂಬುವವರು ಈ ಎರಡು ವಚನಗಳು ತಮ್ಮ ನಿಲುವನ್ನು ದೃಢಪಡಿಸುತ್ತವೆಂದು ಮನವರಿಕೆಗೊಳ್ಳುತ್ತಾರೆ. ಹೇಗೂ, ಬೇರೆಡೆಯಲ್ಲಿರುವ ವಾಕ್ಯಗಳ ಮೂಲಕ ಶಾರೀರಿಕ ಇಸ್ರಾಯೇಲ್ಯರು ಇನ್ನು ದೇವರ ಆದುಕೊಂಡ ಜನಾಂಗ ಆಗಿರುವದಿಲ್ಲ ಎಂಬುದನ್ನು ಸಾಭಿತುಗೊಳಿಸುತ್ತೇವೆ (ನೋಡಿರಿ *ಅನ್ವಯಿಸುವಿಕೆ: ದೇವರು ಮತ್ತು ಇಸ್ರಾಯೇಲ್ಯರು*, ಪುಟಗಳು 264-68). "ಇಸ್ರಾಯೇಲ್ಯರಿಗೆ ಒಂದು ಜನಾಂಗವಾಗಿ ಇರುವ ಯಾವದೇ ಸವಲತ್ತುಗಳು ರದ್ದುಗೊಳಿಸಲ್ಪಟ್ಟಿವೆ."[42] ವಿಷಯವು ಹಾಗಿರುವಾಗ, 28 ಮತ್ತು 29 ವಚನಗಳಲ್ಲಿ ಪೌಲನು ಏನನ್ನು ಹೇಳುತ್ತಿದ್ದಾನೆ? ದೇವರು ಏಕೆ ಯೆಹೂದ್ಯರಿಗೆ ಪಶ್ಚಾತ್ತಾಪ ಪಟ್ಟು ಆತನ ಬಳಿಗೆ ಹಿಂದಿರುಗುವಂತೆ ಸಂದರ್ಭವನ್ನು ವಿಸ್ತರಿಸುವದನ್ನು ಮುಂದುವರೆಸಿದನೆಂಬ ಬಗ್ಗೆ ಆತನು ವಿವರಿಸುತ್ತಿರುವಂತೆ ತೋರುತ್ತದೆ.

28ನೇ ವಚನವು ಹೀಗೆ ಆರಂಭಗೊಳ್ಳುತ್ತದೆ, "ಸುವಾರ್ತೆಯನ್ನು ಬೇಡವೆಂದದ್ದರಿಂದ ದೇವರು . . . ಅವರನ್ನು [ಯೆಹೂದ್ಯರು] ಶತ್ರುಗಳೆಂದೆಣಿಸಿದ್ದಾನೆ." ಯೆಹೂದಿ ನಾಯಕರಿಂದ ನಡಿಸಲ್ಪಟ್ಟ ಒಂದು ಯೆಹೂದಿ ಜನರ ಗುಂಪು ಯೇಸುವನ್ನು ಶಿಲುಬೆಗೆ ಹಾಕಿಸಿದ್ದರು. ಸಭೆಯು ಸ್ಥಾಪಿಸಲ್ಪಟ್ಟ ಬಳಿಕ, ಬಹುತೇಕ ಯೆಹೂದ್ಯರು ಯೇಸುವಿನ ಕಥೆಯನ್ನು ಸಾರುವದನ್ನು ತೀಕ್ಷ್ಣವಾಗಿ ವಿರೋಧಿಸಿದರು (ನೋಡಿರಿ ಅಪೊಸ್ತಲರ ಕೃತ್ಯಗಳು 17:5, 13). ಅವರಲ್ಲಿ ಕೆಲವರಿಗೆ ಅವರ ದಾರಿಯಲ್ಲಿ ಬಿಟ್ಟುಬಿಟ್ಟಿದ್ದರೆ, ಪ್ರತಿಯೊಬ್ಬ ಸುವಾರ್ತಾಪ್ರಸಂಗಿಯು ಮೌನಗೊಳಿಸಲ್ಪಟ್ಟಿರುತ್ತಿದ್ದನು, ಮತ್ತು ಸುವಾರ್ತೆಯನ್ನು ಕೇಳುವ ಅವಕಾಶವು ಯಾರೊಬ್ಬರಿಗೂ ಸಿಕ್ಕಿರುತ್ತಿರಲಿಲ್ಲ. "ಸುವಾರ್ತೆಯನ್ನು ಬೇಡವೆಂದದ್ದರಿಂದ"

ಯೆಹೂದ್ಯರು ಖಂಡಿತವಾಗಿಯೂ "ಶತ್ರುಗಳು" ಆಗಿದ್ದರು.

ಪೌಲನು ಮುಂದುವರೆದು ಹೇಳುವದೇನೆಂದರೆ, "ನಿಮಗೆ [ಅನ್ಯಜನರಿಗೆ] ಹಿತವನ್ನು ಉಂಟು ಮಾಡಿ." ಇದು 11ನೇ ಅಧ್ಯಾಯದಲ್ಲಿ ಆಗಾಗ್ಗೆ ಹೇಳಲ್ಪಟ್ಟಿರುವ ಒಂದು ವಾಸ್ತವಾಂಶವನ್ನು ಮತ್ತೊಮ್ಮೆ ದೃಢಪಡಿಸುತ್ತದೆ: ಯೆಹೂದ್ಯರು ಸುವಾರ್ತೆಯನ್ನು ತಿರಸ್ಕರಿಸಿದ್ದು ಅನ್ಯಜನರಿಗೆ ಸುವಾರ್ತೆಯನ್ನು ಕೇಳಿ ರಕ್ಷಣೆ ಹೊಂದುವದಕ್ಕೆ ಸಂದರ್ಭವನ್ನು ಒದಗಿಸಿತು.

ಯೆಹೂದ್ಯರು ಸುವಾರ್ತೆಗೆ ಶತ್ರುಗಳಾಗಿದ್ದರು ಮತ್ತು ಆ ಕಾರಣದಿಂದ, ಸುವಾರ್ತೆಯನ್ನು ಕೊಟ್ಟಾತನಿಗೆ ಶತ್ರುಗಳಾದರು ಎಂಬ ವಾಸ್ತವಾಂಶದಿಂದ ನಾವು ಯಾವ ನಿರ್ಣಯಕ್ಕೆ ಬರಬಹುದು? 28ನೇ ವಚನದ ಮೊದಲ ಭಾಗವು ಈ ರೀತಿಯಲ್ಲಿ ವಿಸ್ತರಿಸಲ್ಪಡಬಹುದಾಗಿದೆ: "ಸುವಾರ್ತೆಯನ್ನು ಬೇಡವೆಂದದ್ದರಿಂದ ದೇವರು . . . ಅವರನ್ನು ಶತ್ರುಗಳೆಂದೆಣಿಸಿದ್ದಾನೆ [ಮತ್ತು ಕೇವಲ ದಂಡನೆಗೆ ಯೋಗ್ಯರಾಗಿದ್ದರು]."

ಯೇಸುವನ್ನು ಕೊಲ್ಲುವದರಲ್ಲಿ ಮತ್ತು ಸಭೆಯನ್ನು, ಸುವಾರ್ತೆಯನ್ನು, ಮತ್ತು ಕ್ರೈಸ್ತರನ್ನು ನಾಶಮಾಡುವದಕ್ಕೆ ಪ್ರಯತ್ನಿಸಿದ್ದರಲ್ಲಿ ಯೆಹೂದ್ಯರು ಮಾಡಿದ ಕಾರ್ಯವನ್ನು ಪರಿಗಣಿಸುವದಾದಲ್ಲಿ, ದೇವರು ಏಕೆ ಅವರನ್ನು ಭೂಮಿಯ ಮೇಲಿನಿಂದ ಸುಮ್ಮನೆ ಅಳಿಸಿಹಾಕಿ ಬಿಡಲಿಲ್ಲ? ಅದು ನಮ್ಮನ್ನು 28ನೇ ವಚನದ ಕಡೇ ಭಾಗಕ್ಕೆ ಕರೆತರುತ್ತದೆ: "ಆದರೂ ಅವರು ತಾನು ಆರಿಸಿಕೊಂಡ ಅಬ್ರಹಾಮ ಇಸಾಕ ಯಾಕೋಬರೆಂಬ ಪಿತೃಗಳ ವಂಶಸ್ಥರಾಗಿರುವದರಿಂದ ಅವರನ್ನು ಪ್ರಿಯರೆಂದು ಎಣಿಸಿದ್ದಾನೆ."

"ತಾನು ಆರಿಸಿಕೊಂಡ" ಎಂಬುದು ತನ್ನ ಯೋಜನೆಗಳನ್ನು ಅವರ ಮೂಲಕ ನೆರವೇರಿಸುವದಕ್ಕಾಗಿ ಇಸ್ರಾಯೇಲ್ಯರನ್ನು ದೇವರು ಆರಿಸಿಕೊಳ್ಳುವದನ್ನು ಸೂಚಿಸುತ್ತದೆ. ಇಸ್ರಾಯೇಲಿನ ಜನರು ಪ್ರೀತಿಪಾತ್ರರು ಅಥವಾ ಕರ್ತನಿಗೆ ಯಾವಾಗಲೂ ಪ್ರೀತಿಯನ್ನು ತೋರಿಸಿದ್ದರಿಂದ "ಪ್ರಿಯರೆಂದು" ಎಣಿಸಲ್ಪಟ್ಟರೋ? ಇಲ್ಲ. ಬದಲಾಗಿ, ಇಸ್ರಾಯೇಲ್ಯರು "ಪಿತೃಗಳ ವಂಶಸ್ಥರಾಗಿರುವದರಿಂದ . . . ಪ್ರಿಯರೆಂದು" ಎಣಿಸಲ್ಪಟ್ಟಿದ್ದರು. "ಪಿತೃಗಳು" "ಮೂಲಪಿತೃಗಳಾಗಿದ್ದರು" (NIV)—ವಿಶೇಷವಾಗಿ ಅಬ್ರಹಾಮನು (ನೋಡಿರಿ ರೋಮಾ 4ನೇ ಅಧ್ಯಾಯ), ಆತನು "ದೇವರ ಸ್ನೇಹಿತ" ಆಗಿದ್ದನು (ಯಾಕೋಬ 2:23; ನೋಡಿರಿ 2 ಪೂರ್ವಕಾಲವೃತ್ತಾಂತ 20:7; ಯೆಶಾಯ 41:8).

ದೇವರು ಅಬ್ರಹಾಮನಿಗೆ ಕೆಲವೊಂದು ವಾಗ್ದಾನಗಳನ್ನು ಮಾಡಿದ್ದನು, ಮತ್ತು ಆತನು ತನ್ನ ಮಾತುಗಳಲ್ಲಿ ಹಿಂದಕ್ಕೆ ಹೋಗಿರಲಿಲ್ಲ. 29ನೇ ವಚನವು ವಿವರಿಸುವದೇನೆಂದರೆ "ದೇವರು ವರಗಳನ್ನು ಅನುಗ್ರಹಿಸಿದ್ದಕ್ಕೂ ಜನರನ್ನು ಕರೆದದ್ದಕ್ಕೂ ಪಶ್ಚಾತ್ತಾಪ ಪಡುವವನಲ್ಲ" (ನೋಡಿರಿ ಅರಣ್ಯಕಾಂಡ 23:19). "ಪಶ್ಚಾತ್ತಾಪಪಡುವವನಲ್ಲ" ಎಂಬುದು ἀμεταμέλητος (*ametamelētos*) ಎಂಬ ಗ್ರೀಕ್ ಪದದಿಂದ ಅನುವಾದಿಸಲ್ಪಟ್ಟಿದೆ, ಅದು (α, *a*) ಎಂಬುದರಿಂದ ನಕಾರಾತ್ಮಕಗೊಳಿಸಲ್ಪಡುವ "ಪಶ್ಚಾತ್ತಾಪ" (μεταμέλει, *metamelei*) ಎಂಬ ಒಂದು ಪದವನ್ನೊಳಗೊಂಡಿರುತ್ತದೆ. KJVಯು "ಪಶ್ಚಾತ್ತಾಪ ಇಲ್ಲದೆ" ಎಂದು ಹೊಂದಿರುತ್ತದೆ. "ಪಶ್ಚಾತ್ತಾಪ" ಎಂಬುದರ ಮೂಲಭೂತ ಅರ್ಥವು "ಮನಸ್ಸನ್ನು ಬದಲಾಯಿಸಿಕೊಳ್ಳುವದು" ಎಂದಾಗಿರುತ್ತದೆ. ಅಬ್ರಹಾಮನ ಸಂತತಿಯವರು ಇರಬೇಕಾದ ರೀತಿಯಲ್ಲಿರಲಿಲ್ಲ ಎಂಬ ಒಂದೇ ಕಾರಣಕ್ಕಾಗಿ ದೇವರು ಅಬ್ರಹಾಮನಿಗೆ ಮಾಡಿದ್ದ

ವಾಗ್ದಾನಗಳ ವಿಷಯದಲ್ಲಿ ತನ್ನ ಮನಸ್ಸನ್ನು ಬದಲಾಯಿಸಿಕೊಳ್ಳಲಿಲ್ಲ. ಈ ಮುಂಚೆ ಗಮನಿಸಿರುವ ಪ್ರಕಾರ, ದೇವರು ಯೆಹೂದ್ಯರಿಗೆ ಮಾಡಿದ್ದ ಪ್ರತಿಯೊಂದು ವಾಗ್ದಾನವನ್ನೂ ನೆರವೇರಿಸಿದನು.

ಈ ಮುಂಚೆ ಸಲಹೆ ಮಾಡಲ್ಪಟ್ಟಿರುವ ಪ್ರಕಾರ, 28ನೇ ವಚನದ ಮೊದಲ ಭಾಗವನ್ನು ಈ ವಿಧದಲ್ಲಿ ವಿಸ್ತರಿಸಬಹುದು: "ಸುವಾರ್ತೆಯನ್ನು ಬೇಡವೆಂದದ್ದರಿಂದ ದೇವರು . . . ಅವರನ್ನು ಶತ್ರುಗಳೆಂದೆಣಿಸಿದ್ದಾನೆ [ಮತ್ತು ದಂಡನೆಗೆ ಮಾತ್ರವೇ ಯೋಗ್ಯರಾಗಿದ್ದರು]." 28ನೇ ವಚನದ ನಂತರದ ಭಾಗವು ಈ ವಿಧದಲ್ಲಿ ವಿಸ್ತರಿಸಲ್ಪಡಬಹುದು: "ಆದರೂ ಅವರು ತಾನು ಆರಿಸಿಕೊಂಡ ಅಬ್ರಹಾಮ ಇಸಾಕ ಯಾಕೋಬರೆಂಬ ಪಿತೃಗಳ ವಂಶಸ್ಥರಾಗಿರುವದರಿಂದ ಅವರನ್ನು [ಯೆಹೂದ್ಯರು] ಪ್ರಿಯರೆಂದು ಎಣಿಸಿದ್ದಾನೆ [ಆದ್ದರಿಂದ ದೇವರು ಅವರಿಗೆ ಸುವಾರ್ತೆಯನ್ನು ಕೇಳಿ ರಕ್ಷಣೆ ಹೊಂದುವದಕ್ಕೆ ಇನ್ನೊಂದು ಸಂದರ್ಭವನ್ನು ಕೊಟ್ಟನು]." ಅವರಷ್ಟೆಲ್ಲಾ ತುಚ್ಛಕೃತ್ಯಗಳನ್ನು ಮಾಡಿದವರಾಗಿದ್ದಾಗ್ಯೂ, ದೇವರು ಯೆಹೂದ್ಯರಿಗೆ ರಕ್ಷಣೆಯಾಗಬೇಕೆಂದು ಇಚ್ಛಿಸಿದನು.

**ವಚನಗಳು 30, 31.** ಪೌಲನು ಇಷ್ಟೊತ್ತಿಗೆಲ್ಲಾ ನಮಗೆ ಪರಿಚಿತವಾಗಿರುವಂಥ ಕ್ರಮಾನುಗತಿಯನ್ನು ಪುನರಾವರ್ತಿಸುತ್ತಾನೆ (ಕಟ್ಟಕಡೆಯ ಬಾರಿಗೆ). ಯೆಹೂದ್ಯರು (ದೇವರಿಂದ) ತಿರಸ್ಕರಿಸಲ್ಪಟ್ಟಿದ್ದು ಅನ್ಯಜನರು (ದೇವರಿಂದ) ಸ್ವೀಕಾರಕ್ಕೊಳಗಾಗುವಂತೆ ಒಂದು ಸಂದರ್ಭವನ್ನು ಒದಗಿಸಿತು. ಇದು ಅನ್ಯಜನರಿಂದ ಅನುಭವಿಸಲ್ಪಡುತ್ತಿರುವಂಥ ಆತ್ಮೀಕ ಆಶೀರ್ವಾದಗಳನ್ನು ಆತ್ಯಾಸಕ್ತಿಯಿಂದ ಹಂಬಲಿಸುವಂತೆ ಪ್ರಚೋಧಿಸುವ ಉದ್ದೇಶಕ್ಕಾಗಿ ಆಗಿತ್ತು. ಆ ಮೂಲಕ, ಅವರು ಸುವಾರ್ತೆಗೆ ವಿಧೇಯರಾಗುವರು, ಮತ್ತು ದೇವರಿಂದ ಸ್ವೀಕಾರಕ್ಕೊಳಗಾಗುವರು. ಈ ಘಟನಾವಳಿಯ ಕ್ರಮಾನುಗತಿಯನ್ನು ಪೌಲನು 30 ಮತ್ತು 31 ವಚನಗಳಲ್ಲಿ ಈ ಮಾತುಗಳಿಂದ ತಿಳಿಸುತ್ತಾನೆ:

> **ಯಾವ ಪ್ರಕಾರ ನೀವು** *[ಅನ್ಯಜನರು]* **ಪೂರ್ವದಲ್ಲಿ ಅವಿಧೇಯರಾಗಿದ್ದರೂ ಈಗ ಅವರ ಅವಿಧೇಯತೆಯ**[43] **ದೆಸೆಯಿಂದ ಕರುಣೆಹೊಂದಿದ್ದೀರೋ ಅದೇ ಪ್ರಕಾರವಾಗಿ ಅವರು** [ಯೆಹೂದ್ಯರು] **ಈಗ ಅವಿಧೇಯರಾಗಿದ್ದರೂ ನಿಮಗೆ** [ಅನ್ಯಜನರು] **ದೊರಕಿದ ಕರುಣೆಯನ್ನು ಹೊಂದುವರು.**

ಪೌಲನು ಪ್ರಮುಖ ವಿಚಾರಧಾರೆಯು ಈ ಎರಡು ವಚನಗಳಲ್ಲಿ ಅರ್ಥಮಾಡಿಕೊಳ್ಳು ವದಕ್ಕೆ ಸುಲಭವಾಗಿರುತ್ತದೆ:

ಯೆಹೂದ್ಯರ ಅವಿಧೇಯತೆ (ಯೆಹೂದ್ಯರು ದೇವರಿಂದ ತಿರಸ್ಕಾರಗೊಳ್ಳು ವದರಲ್ಲಿ ಫಲಿತಗೊಂಡಿತು)
ಅನ್ಯಜನರಿಗೆ ತೋರಿದ ಕರುಣೆ (ಅನ್ಯಜನರು ದೇವರಿಂದ ಸ್ವೀಕಾರಕ್ಕೊ ಳಗಾಗಿದ್ದು)
ಯೆಹೂದ್ಯರಿಗೆ ತೋರಿದ ಕರುಣೆ (ಯೆಹೂದ್ಯರು ದೇವರಿಂದ ಸ್ವೀಕಾರಕ್ಕೊ ಳಗಾಗಿದ್ದು)

"ಕರುಣೆ" ಎಂಬುದು 9 ರಿಂದ 11 ಅಧ್ಯಾಯಗಳಲ್ಲಿ ಮುಖ್ಯ ಪದವಾಗಿರುತ್ತದೆ (ನೋಡಿರಿ 9:15, 16, 18, 23). ಈ ಪದವು 11:30-32 ವಚನಗಳಲ್ಲಿ ನಾಲ್ಕು ಸಾರಿ ಕಾಣಿಸಿಕೊಳ್ಳುತ್ತದೆ. "ಕರುಣೆ" (ἔλεος, *eleos*) ಎಂಬುದು "ಕೃಪೆ" (χάρις, *charis*) ಎಂಬುದರೊಂದಿಗೆ ನಿಕಟ ಸಂಬಂಧ ಹೊಂದಿರುತ್ತದೆ, ಮತ್ತು ಇವೆರಡರ ನಡುವೆ ಭಿನ್ನತೆ ಮಾಡುವದು

ಕಷ್ಟಕರವಾಗಿರುತ್ತದೆ. ಒಂದು ಅರ್ಥನಿರೂಪಣೆಯು ಹೇಳುವದೇನೆಂದರೆ "ಅಪರಾಧಿಗಳನ್ನು ಕ್ಷಮಿಸುವಂತೆ ದೇವರನ್ನು ನಡಿಸುವ ಆತನ ಪ್ರೀತಿಯ ಒಂದು ಮುಖವಾದ 'ಕೃಪೆ'ಯ ರೀತಿಯಲ್ಲಿಯೇ "ಕರುಣೇ" ಎಂಬುದು "ದುಃಸ್ಥಿತಿಯಲ್ಲಿರುವವರಿಗೆ ಸಹಾಯ ಮಾಡುವಂತೆ ದೇವರನ್ನು ನಡಿಸುವ ಆತನ ಪ್ರೀತಿಯ ಒಂದು ಮುಖವಾಗಿರುತ್ತದೆ."[44]

**ವಚನ 32.** ಪೌಲನು ತನ್ನ ಚರ್ಚೆಯ ಈ ಭಾಗವನ್ನು ಹೀಗೆ ಹೇಳುವ ಮೂಲಕ ಮುಕ್ತಾಯಗೊಳಿಸುತ್ತಾನೆ, **ಯಾಕೆಂದರೆ ದೇವರು ಎಲ್ಲರಿಗೂ ಕರುಣೆಯನ್ನು ತೋರಿಸಬೇಕೆಂಬ ಉದ್ದೇಶವುಳ್ಳವನಾಗಿದ್ದು ಎಲ್ಲರನ್ನೂ ಅವಿಧೇಯತೆಯೆಂಬ ದುಃಸ್ಥಿತಿಯಲ್ಲಿ ಕಟ್ಟಿಹಾಕಿದ್ದಾನೆ.** "ಕಟ್ಟಿಹಾಕಿದ್ದಾನೆ" ಎಂಬುದು ಗ್ರೀಕ್‌ನ συγκλείω (*sunkleiō*) ಎಂಬ ಪದದ ಅನುವಾದವಾಗಿದೆ, ಅದು σύν (*sun*, "ಯೊಂದಿಗೆ, ಒಟ್ಟಾಗಿ") ಎಂಬ ಪದದ ನಂತರದಲ್ಲಿ κλείω (*kleiō*, "ಬಂಧಿಸು") ಎಂಬದನ್ನೊಳಗೊಂಡ ಪದದಿಂದ ರೂಪಗೊಳಡಿರುತ್ತದೆ. McCord ತರ್ಜುಮೆಯು ವಚನದ ಮೊದಲ ಭಾಗವನ್ನು ಹೀಗೆ ಅನುವಾದಿಸುತ್ತದೆ, "ದೇವರು ಪ್ರತಿಯೊಬ್ಬರನ್ನೂ ಅವಿಧೇಯತೆಯಲ್ಲಿ ಬಂಧಿಸಿಟ್ಟಿದ್ದಾನೆ." ಇದು ದೇವರು ನಮಗೆ ನಿರಂಕುಶವಾಗಿ ಮಾಡಿದ ಕೃತ್ಯವಲ್ಲ; ಅದು ಸ್ವತಃ ನಮ್ಮ ಪಾಪದ ಫಲಿತವಾಗಿರುತ್ತದೆ. ನಮ್ಮ ಪಾಪದ ಕಾರಣದಿಂದಾಗಿ ನಾವೆಲ್ಲರೂ ಪಾಪದ ಬಂಧನಕ್ಕೊಳಗಾದೆವು. "ಪರಿಸ್ಥಿತಿಯು ಕರಾಳವಾಗಿರುತ್ತದೆ: ಪಾಪವು ಕ್ಷೋಭೆಯುಂಟು ಮಾಡುತ್ತದೆ, ಧರ್ಮಶಾಸ್ತ್ರವು ಖಂಡಿಸುತ್ತದೆ, ಮನಸಾಕ್ಷಿಯು ಹೆದರಿಸುತ್ತದೆ, ಅಂತಿಮ ನ್ಯಾಯತೀರ್ಪಿನ ಬೆದರಿಕೆಯಿರುತ್ತದೆ . . . [ಆದರೆ ಆಗ,] ಏಕಾಏಕಿಯಾಗಿ ಕತ್ತಲೆಯು ಹೊರಡಿಸಲ್ಪಡುತ್ತದೆ. ಸ್ವತಃ ದೇವರೇ ಸೆರೆಮನೆಯ ದ್ವಾರವನ್ನು ತೆರೆಯುತ್ತಾನೆ ಮತ್ತು ಬೆಳಕನ್ನು ಒಳಗೆ [ಬಿಡುತ್ತಾನೆ] ಪ್ರಕಾಶಿಸುವಂತೆ ಮಾಡುತ್ತಾನೆ."[45] ನಾವೆಲ್ಲರೂ ಅವಿಧೇಯರಾಗಿದ್ದೇವಾ ದ್ದರಿಂದ, ನಾವು ರಕ್ಷಿಸಲ್ಪಡುವದಕ್ಕಿರುವ ಏಕೈಕ ಆಧಾರವೆಂದರೆ ದೇವರ ಕರುಣೆ ಅಥವಾ ಕೃಪೆಯೇ.

ಕೆಲವರು ಸಾರ್ವತ್ರಿಕ ರಕ್ಷಣೆಯನ್ನು ಕಲಿಸುವದಕ್ಕೆ 32ನೇ ವಚನವನ್ನು ಉಪಯೋಗಿಸಿರುತ್ತಾರೆ. ಅವರು "ಪ್ರತಿಯೊಬ್ಬರೂ ಅವಿಧೇಯರಾಗಿದ್ದಾರೆಂಬುದು ನಿಜವೇ, ಆದರೆ ದೇವರು ಅಂತಿಮವಾಗಿ ಎಲ್ಲರಿಗೂ ಕರುಣೆ ತೋರಿಸುವನೆಂಬದಾಗಿ ಈ ವಾಕ್ಯಭಾಗವು ಕಲಿಸುತ್ತದೆ" ಎಂದು ಹೇಳುತ್ತಾರೆ. ಈ ಸುಳ್ಳು ಬೋಧನೆಯ ವಿಷಯದಲ್ಲಿ, ಹೀಗೆ Stott ಬರೆಯುತ್ತಾನೆ,

> ಈ ವಚನದ ಮೇಲೆ ಕೆಲವರು ತಮ್ಮ ಸಾರ್ವತ್ರಿಕ ರಕ್ಷಣೆಯೆಂಬ ಕನಸುಗಳನ್ನು ನಿರ್ಮಿಸಿಕೊಂಡಿರುತ್ತಾರೆ. ಮತ್ತು, ಅದನ್ನು ರೋಮಾಪುರದವರಿಗೆ ಪತ್ರಿಕೆಯಲ್ಲಿನ ಅದರ ಸನ್ನಿವೇಶದಿಂದ ಬೇರ್ಪಡಿಸಿರುತ್ತಾರೆ, ಹೀಗೆ ಅದು ಅಂತ್ಯದಲ್ಲಿ ಸರ್ವರಿಗೂ ರಕ್ಷಣೆಯಾಗುವದೆಂಬ ಅರ್ಥವನ್ನು ಕೊಡಬಹುದಾಗುವಂತೆ ಮಾಡಲ್ಪಟ್ಟಿರುತ್ತದೆ. ಆದರೆ ರೋಮಾಪುರದವರಿಗೆ ಈ ಅರ್ಥನಿರೂಪಣೆಯನ್ನು ಅನುಮತಿಸುವದಿಲ್ಲ, ಯಾಕೆಂದರೆ ಅದರಲ್ಲಿ ಪೌಲನು ಮುಂದೆ 'ದೇವರ ಕೋಪವೂ . . . ಪ್ರಕಟವಾಗುವ ದಿವಸ" ಬರುತ್ತದೆಂದು ಘೋಷಿಸುತ್ತಾನೆ (2:5), ಆ ದಿನದಲ್ಲಿ ಕೆಲವರಿಗೆ 'ಕೋಪ ರೌದ್ರಗಳು' ಬರುವವು, ಇನ್ನು ಕೆಲವರಿಗೆ 'ಕಷ್ಟವೂ ಸಂಕಟವೂ' ಬರುವವು (2:8f).[46]

32ನೇ ವಚನದಲ್ಲಿ ಪೌಲನ ಸಂದೇಶವು ಏನೆಂದರೆ, ನಾವೆಲ್ಲರೂ ಅವಿಧೇಯರಾಗಿದ್ದು

ಮತ್ತು ದಂಡಿಸಲ್ಪಡುವದಕ್ಕೆ ಮಾತ್ರವೇ ಯೋಗ್ಯರಾಗಿದ್ದೇವಾದರೂ, ದೇವರು ಈಗಲೂ ನಮಗೆ ಕರುಣೆಯನ್ನು ತೋರಿಸಬೇಕೆಂದು ಇಚ್ಛಿಸುತ್ತಾನೆ. ಆತನು *ಎಲ್ಲರಿಗೂ*—ಯೆಹೂದ್ಯರಾಗಲಿ ಅಥವಾ ಅನ್ಯಜನರಾಗಲಿ ಚಿಕ್ಕವರಾಗಲಿ ಅಥವಾ ದೊಡ್ಡವರಾಗಲಿ, ಪುರುಷರಾಗಲಿ ಅಥವಾ ಸ್ತ್ರೀಯರಾಗಲಿ, ಬಡವರಾಗಲಿ ಅಥವಾ ಶ್ರೀಮಂತರಾಗಲಿ, ವಿದ್ಯಾವಂತರಾಗಲಿ ಅಥವಾ ಅವಿದ್ಯಾವಂತರಾಗಲಿ, "ಒಳ್ಳೆಯವರಾಗಲಿ" ಅಥವಾ "ಕೆಟ್ಟವರಾಗಲಿ" ಯಾರಿದ್ದರೂ ಸರಿಯೇ (ಲೋಕವು ಇಂಥ ಸಂಗತಿಗಳನ್ನು ಪರಿಗಣಿಸುತ್ತದಷ್ಟೆ)—ಕರುಣೆಯನ್ನು ತೋರಿಸಬೇಕೆಂದು ಬಯಸುತ್ತಾನೆ. ದೇವರು *ನಮಗೆ* ಕರುಣೆಯನ್ನು ತೋರಿಸಲಿಚ್ಛಿಸುತ್ತಾನೆ. ಅದಕ್ಕಾಗಿ ದೇವರಿಗೆ ಕೃತಜ್ಞತೆಗಳು!

## ಸ್ತೋತ್ರಾರ್ಪಣೆ: ದೇವರ ಕರುಣೆ (11:33-36)

**33ಆಹಾ, ದೇವರ ಐಶ್ವರ್ಯವೂ ಜ್ಞಾನವೂ ವಿವೇಕವೂ ಎಷ್ಟೋ ಅಗಾಧ! ಆತನ ತೀರ್ಮಾನಗಳು ಪರಿಶೋಧನೆಗೆ ಎಷ್ಟೋ ಅಗಮ್ಯ! ಆತನ ಮಾರ್ಗಗಳು ಕಂಡುಹಿಡಿಯುವದಕ್ಕೆ ಎಷ್ಟೋ ಅಸಾಧ್ಯ! 34ಕರ್ತನ ಮನಸ್ಸನ್ನು ತಿಳುಕೊಂಡವನಾರು? 35ಆತನಿಗೆ ಆಲೋಚನಾ ಕರ್ತನು ಯಾರು? ಮೊದಲು ಕೊಟ್ಟು ಪ್ರತಿಫಲವನ್ನು ತೆಗೆದುಕೊಳ್ಳುವವನು ಯಾರು? 36ಸಮಸ್ತವು ಆತನಿಂದ ಉತ್ಪತ್ತಿಯಾಗಿ ಆತನಿಂದ ನಡೆಯುತ್ತಾ ಆತನಿಗಾಗಿ ಇರುತ್ತದೆ; ಆತನಿಗೇ ಸದಾಕಾಲವೂ ಸ್ತೋತ್ರ. ಆಮೆನ್.**

ಪೌಲನು ಇಸ್ರಾಯೇಲ್ಯರನ್ನು ವಿಮೋಚಿಸಬೇಕೆಂಬದಾಗಿ ದೇವರಿಗಿರುವ ಯೋಜನೆ ಮತ್ತು ಎಲ್ಲರಿಗೂ ಕರುಣೆ ತೋರಿಸಬೇಕೆಂಬ ಆತನ ಬಯಕೆಯ ಬಗ್ಗೆ ಯೋಚಿಸಿದಾಗ, ಆತನಲ್ಲಿ ಒಮ್ಮೆಲೇ ಸ್ತೋತ್ರ ಉಕ್ಕಿಬರುತ್ತದೆ. 9ರಿಂದ 11 ಅಧ್ಯಾಯಗಳು "ಯೆಹೂದಿ ಸಮಸ್ಯೆ" ಮೇಲೆ ಗಮನ ಹರಿಸುತ್ತವೆ; ಆದರೆ ಒಂದು ಆಳವಾದ ಅರ್ಥದಲ್ಲಿ, ಈ ವಿಭಾಗವು ದೇವರ ಕುರಿತಾಗಿರುತ್ತದೆ, ಹೊರತು ಇಸ್ರಾಯೇಲ್ಯರ ಕುರಿತಲ್ಲ.[47] ಇದು ದೇವರು ವಿಶ್ವಾಸರ್ಹನೋ ಅಲ್ಲವೋ, ದೇವರು ತನ್ನ ವಾಗ್ದಾನಗಳನ್ನು ಕಾಪಾಡಿಕೊಂಡನೋ ಇಲ್ಲವೋ ಎಂಬುದರ ಕುರಿತಾಗಿರುತ್ತದೆ (ನೋಡಿರಿ 9:6). ದೇವರ ನಂಬಿಗಸ್ತಿಕೆಯ ಬಗ್ಗೆ ದೃಢವೆಂದು ಸಾಭಿತುಪಡಿಸಿದ ಬಳಿಕ, ದೇವರು ಎಷ್ಟು ಅದ್ಭುತವಾದವನೆಂಬದನ್ನು ವ್ಯಕ್ತಪಡಿಸುವಿಕೆಯೊಂದಿಗೆ ಈ ವಿಭಾಗವನ್ನು ಪೌಲನು ಮುಕ್ತಾಯಗೊಳಿಸುತ್ತಾನೆ. ರೋಮಾ 11:33-36 ವಚನಗಳು, 11ನೇ ಅಧ್ಯಾಯಕ್ಕೆ, 9ರಿಂದ 11 ಅಧ್ಯಾಯಗಳಿಗೆ, ಮತ್ತು ಇದುವರೆಗೂ ಪೌಲನು ಹೇಳಿದ್ದೆಲ್ಲದಕ್ಕೂ ಒಂದು ಸೂಕ್ತವಾಗಿ ಸರಿಹೊಂದುವ ಪರಾಕಾಷ್ಠೆಯಾಗಿರುತ್ತದೆ.

33 ರಿಂದ 36 ವಚನಗಳನ್ನು ಶಬ್ದದಿಂದ ಓದತಕ್ಕವುಗಳು—ಹಲವಾರು ಸಾರಿ. ಈ ವಾಕ್ಯಭಾಗವು ವಿಶ್ಲೇಷಣೆ ಮಾಡುವದಕ್ಕಿಂತಲೂ ಆಸ್ವಾದಿಸುವದಕ್ಕೆ ಅರ್ಹವಾದದ್ದಾಗಿದೆ. ಹೇಗಿದ್ದರೂ, ಪೌಲನು ಉಪಯೋಗಿಸುವ ಪರಿಭಾಷೆಯನ್ನು ಸೂಕ್ಷ್ಮವಾಗಿ ಗಮನಿಸುವದರಲ್ಲಿ ಪ್ರಯೋಜನವಿರುತ್ತದೆ. ಈ ವಾಕ್ಯಭಾಗದಲ್ಲಿ ಪೌಲನು ದೇವರ ಕುರಿತಾಗಿ ಹಲವಾರು ಹೇಳಿಕೆಗಳನ್ನು ನೀಡುತ್ತಾನೆ.

**ವಚನ 33.** 11ನೇ ಅಧ್ಯಾಯದಲ್ಲಿ, ಪೌಲನು ದೇವರ ಮನಸ್ಸು ಮತ್ತು ವಿಧಾನಗಳ ಬಗ್ಗೆ

ತನ್ನ ವಾಚಕರಿಗೆ ಒಂದು ವಿರಳವಾದ ನೋಟವನ್ನು ಒದಗಿಸುತ್ತಾನೆ: ದೇವರು ಹೇಗೆ ಅನ್ಯಜನರಿಗೆ ರಕ್ಷಣೆ ಹೊಂದಲು ಸಂದರ್ಭವನ್ನು ಕೊಡುವದಕ್ಕಾಗಿ ಯೆಹೂದ್ಯರ ಅವಿಧೇಯತೆಯನ್ನು ಉಪಯೋಗಿಸಿದನು, ಮತ್ತು ನಂತರ ಆತನು ಅನ್ಯಜನರ ವಿಧೇಯತೆಯನ್ನು ಹೇಗೆ ಯೆಹೂದ್ಯರಲ್ಲಿ ವಿಧೇಯತೆಯನ್ನು ಪ್ರಚೋದಿಸುವದಕ್ಕೆ ಉಪಯೋಗಿಸಿದನು ಎಂಬುದೆ. ಅಪೊಸ್ತಲನು ದೇವರ ಅತ್ಯಾಶ್ಚರ್ಯಕರವಾದ ಜ್ಞಾನದ ಬಗ್ಗೆ ಸ್ತುತಿಸುವ ಮೂಲಕ ತನ್ನ ಸ್ತೋತ್ರಾರ್ಪಣೆಯನ್ನು ಆರಂಭಿಸುತ್ತಾನೆ: **ಆಹಾ, ದೇವರ ಐಶ್ವರ್ಯವೂ ಜ್ಞಾನವೂ ವಿವೇಕವೂ ಎಷ್ಟೋ ಆಗಾಧ!**[48] ಕೆಲವರಿಗೆ ಜ್ಞಾನವಿರುತ್ತದೆ ಆದರೆ ವಿವೇಕದ ಕೊರತೆಯಿರುತ್ತದೆ; ಇನ್ನು ಕೆಲವರು ವಿವೇಕಿಯಾಗಿರುತ್ತಾರೆ ಆದರೆ ಜ್ಞಾನವು ಕಮ್ಮಿಯುಳ್ಳವರಾಗಿರುತ್ತಾರೆ. ದೇವರಿಗೆ ಎರಡೂ ಇರುತ್ತವೆ! 33ನೇ ವಚನದ ಮೊದಲ ಭಾಗದಲ್ಲಿ ಮುಖ್ಯವಾದ ಪದವೆಂದರೆ "ಆಗಾಧ" (βάθος, *bathos*). ದೇವರ ಜ್ಞಾನ ಮತ್ತು ವಿವೇಕ ಎಷ್ಟೊಂದು "ಆಗಾಧ" ಆಗಿರುತ್ತವೆಂದರೆ ನಾವು ಅವುಗಳನ್ನು ಗ್ರಹಿಸಿಕೊಳ್ಳ ಲಾರಂಭಿಸುವದಕ್ಕೂ ಸಾಧ್ಯವಿಲ್ಲ.

ಪೌಲನು ಮುಂದುವರೆದು ಹೀಗೇ ಹೇಳುತ್ತಾನೆ, **ಆತನ ತೀರ್ಮಾನಗಳು ಪರಿಶೋಧನೆಗೆ ಎಷ್ಟೋ ಆಗಮ್ಯ! ಆತನ ಮಾರ್ಗಗಳು ಕಂಡುಹಿಡಿಯುವದಕ್ಕೆ ಎಷ್ಟೋ ಅಸಾಧ್ಯ!** JB ತರ್ಜುಮೆಯು ಹೀಗೆ ಹೇಳುತ್ತದೆ, "ಆತನ ಉದ್ದೇಶಗಳನ್ನು ಭೇದಿಸುವದು ಅಥವಾ ಆತನ ವಿಧಾನಗಳನ್ನು ಅರ್ಥಮಾಡಿಕೊಳ್ಳುವದು ಎಷ್ಟೋ ಕಠಿಣವಾದದ್ದು!" ಈ ಪರಿಭಾಷೆಯು ಯೆಶಾಯ 55:8, 9ರ ಮಾತುಗಳನ್ನು ನೆನಪಿಸುತ್ತದೆ: "ನನ್ನ ಆಲೋಚನೆಗಳು ನಿಮ್ಮ ಆಲೋಚನೆಗಳಲ್ಲ, ನಿಮ್ಮ ಮಾರ್ಗಗಳು ನನ್ನ ಮಾರ್ಗಗಳಲ್ಲ. ಭೂಮಿಯ ಮೇಲೆ ಆಕಾಶವು ಎಷ್ಟು ಉನ್ನತವೋ ನಿಮ್ಮ ಮಾರ್ಗಗಳಿಗಿಂತ ನನ್ನ ಮಾರ್ಗಗಳೂ ನಿಮ್ಮ ಆಲೋಚನೆಗಳಿಗಿಂತ ನನ್ನ ಆಲೋಚನೆಗಳೂ ಅಷ್ಟು ಉನ್ನತವಾಗಿವೆ."

**ವಚನ 34.** ಪೌಲನು ತನ್ನ ಹೇಳಿಕೆಯನ್ನು ವಿಸ್ತರಿಸುವದಕ್ಕಾಗಿ ಹಳೆಯ ಒಡಂಬಡಿಕೆಯಿಂದ ಉಲ್ಲೇಖಿಸುತ್ತಾ ಯೆಶಾಯ 40:13ನ್ನು ಪ್ರಸ್ತಾಪಿಸುತ್ತಾನೆ (LXX): **ಕರ್ತನ ಮನಸ್ಸನ್ನು ತಿಳುಕೊಂಡವನಾರು? ಆತನಿಗೆ ಆಲೋಚನಾ ಕರ್ತನು ಯಾರು?** "ಆಲೋಚನಾ ಕರ್ತನು" ಎಂಬುದು σύμβουλος (*sumboulos*) ಪದದಿಂದ ಬಂದಿರುತ್ತದೆ, ಅದು βουλή (*boulē*, "ಆಲೋಚನೆ ಹೇಳು") ಮತ್ತು σύν (*sun*, "ಒಟ್ಟಾಗಿ, ಯೊಂದಿಗೆ") ಎಂಬ ಪದಗಳ ಸಂಯೋಜನೆಯಿಂದ ಆಗಿರುತ್ತದೆ. McCord ತರ್ಜುಮೆಯಲ್ಲಿ "ಸಲಹೆಗಾರ" ಎಂದಿರುತ್ತದೆ. ದೇವರು ಎಂದಾದರೂ ಯಾರಿಂದ ಆಲೋಚನೆಯನ್ನು ಕೇಳಿದ್ದಾನೆ? 34ನೇ ವಚನದಲ್ಲಿರುವ ಎರಡೂ ಪ್ರಶ್ನೆಗಳಿಗೆ ಉತ್ತರವು "ಯಾರೂ ಇಲ್ಲ!"

ಆ ಮೂಲಕ, ಪೌಲನು ಹೇಳಿದ್ದೇನೆಂದರೆ ದೇವರ ಕುರಿತಾಗಿ ನಾವು ತಿಳಿದುಕೊಳ್ಳಬಲ್ಲ ಮೊದಲ ಸಂಗತಿಯೆಂದರೆ ಆತನ ಬಗ್ಗೆ ನಾವು ಎಲ್ಲವನ್ನೂ ತಿಳಿಯಲು ಸಾಧ್ಯವಿಲ್ಲ ಎಂಬುದೇ. ಒಂದು ಪಾತ್ರೆಯು ಸಮುದ್ರವನ್ನು ಹೇಗೆ ಹಿಡಿದಿಟ್ಟುಕೊಳ್ಳಲಾರದೋ, ಹಾಗೆಯೇ ನಮ್ಮ ಮಿತವಾದ ಮನಸ್ಸುಗಳು ದೇವರ ಅಪರಿಮಿತವಾದ ಜ್ಞಾನ ಮತ್ತು ವಿವೇಕಗಳನ್ನು ಗ್ರಹಿಸಿಕೊಳ್ಳಲಾರದು. ಈ ಸತ್ಯವು ದೇವರು ನಿರ್ಮಿಸಿರುವ ಜಗತ್ತನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವವರನ್ನು ದೀನಗೊಳಿಸತಕ್ಕದ್ದು. ಅಲ್ಲದೆ ಈ ಭಾವನೆಯು

ಆತನು ಅನುಗ್ರಹಿಸಿರುವ ವಾಕ್ಯವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿರುವ ನಮ್ಮನ್ನು ಸಹ ದೀನಗೊಳಿಸತಕ್ಕದ್ದು. ನಾವು ಹೆಚ್ಚೆಚ್ಚು ತಿಳಿದುಕೊಂಡ ಹಾಗೆ ನಮಗೆ ಎಷ್ಟೊಂದು ತಿಳಿದಿಲ್ಲ ಎಂಬ ಜಾಗ್ರತೆ ನಮ್ಮಲ್ಲುಂಟಾಗುತ್ತದೆ. ಒಬ್ಬರು ಹೀಗೆ ಹೇಳಿದ್ದಾರೆ, "ಜ್ಞಾನದ ದ್ವೀಪವು ಬೆಳೆದ ಹಾಗೆಲ್ಲಾ, ಅಜ್ಞಾನದ ದಡವು ಸಹ ವಿಸ್ತಾರವಾಗುತ್ತಾ ಹೋಗುತ್ತದೆ."

Morris ಗಮನಕ್ಕೆ ತಂದಿದ್ದೇನೆಂದರೆ ಪೌಲನ ಸ್ತೋತ್ರಾರ್ಪಣೆಯು "ನಾವು ದೇವರ ಕುರಿತು ಏನು ಬಲ್ಲೆವು ಎಂಬುದರ ಬದಲಾಗಿ . . . ಆತನ ಕುರಿತು ಏನನ್ನು ಬಲ್ಲವ*ರಲ್ಲ* ಎಂಬದರಿಂದ ಪ್ರಚೋದಿಸಲ್ಪಟ್ಟಿತು."[49] ಪೌಲನ ಬಳಿಯಲ್ಲಿ ಎಲ್ಲಾ ಉತ್ತರಗಳಿರಲಿಲ್ಲ. ಆತನ "ವಿವರಣೆಗಳು" ಎಷ್ಟು ಉತ್ತರಗಳನ್ನು ನೀಡಿರುತ್ತದೋ ಅಷ್ಟೇ ಪ್ರಶ್ನೆಗಳನ್ನು ಸಹ ಎಬ್ಬಿಸಿರುತ್ತವೆ. ಅಂತ್ಯದಲ್ಲಿ, ಜೀವಿತದ ಪ್ರಶ್ನೆಗೆ ಸಿಕ್ಕುವ ಏಕೈಕ ಸಂತೃಪ್ತಿಕರ ಉತ್ತರವೆಂದರೆ ಸರ್ವಜ್ಞಾನಿ, ಸರ್ವ-ಬಲ್ಲ, ಕರುಣೆಯುಳ್ಳ ದೇವರಲ್ಲಿ ಭರವಸೆಯನ್ನು ಇಡುವದೇ.

**ವಚನ 35.** ನಾವು ದೇವರ ಬಗ್ಗೆ ತಿಳಿಯಬಲ್ಲ ಎರಡನೆಯ ವಾಸ್ತವಾಂಶವೆಂದರೆ ನಾವು ಆತನನ್ನು ಎಂದಿಗೂ ನಮಗೆ ಋಣಸ್ಥನನ್ನಾಗಿ ಮಾಡಿಕೊಳ್ಳಲಾರೆವು. ಈ ವಚನದಲ್ಲಿ ಪೌಲನು ಯೋಬ 41:11ರ ತಿರುಳನ್ನು ಒದಗಿಸುತ್ತಾನೆ: **ಮೊದಲು ಆತನಿಗೆ ಕೊಟ್ಟು ಪ್ರತಿಫಲವನ್ನು ತೆಗೆದುಕೊಳ್ಳುವವನು ಯಾರು?** ಪುನಃ, ಇಲ್ಲಿ ಅರ್ಥವಾಗುವ ಉತ್ತರವೆಂದರೆ "ಯಾರೂ ಇಲ್ಲ." ನಾವು ದೇವರಿಗೆ ಕೊಡುವದಕ್ಕೆ ಸಾಧ್ಯವಿಲ್ಲ ಯಾಕೆಂದರೆ ನಮಗಿರುವದೆಲ್ಲವೂ ಆತನಿಂದಲೇ ಬಂದದ್ದು ಮತ್ತು ಈಗಲೂ ಆತನಿಗೆ ಸೇರಿದ್ದಾಗಿದೆ; ನಾವು ಕೇವಲ ಅದರ ಪಾರುಪತ್ಯಗಾರರಷ್ಟೇ. ಅರಸನಾದ ದಾವೀದನು ದೇವಾಲಯವನ್ನು ಕಟ್ಟುವದಕ್ಕೆ ಕಾಣಿಕೆಯನ್ನು ಕೊಟ್ಟ ವೇಳೆಯಲ್ಲಿ, ಆತನು ಹೀಗೆ ಪ್ರಾರ್ಥಿಸಿದನು, "ನಾವು ಈ ಪ್ರಕಾರ ಸ್ವೇಚ್ಛೆಯಿಂದ ಕಾಣಿಕೆಗಳನ್ನು ಸಮರ್ಪಿಸಲು ಶಕ್ತಿಹೊಂದಿದ್ದಕ್ಕೆ ನಾನಾಗಲಿ ನನ್ನ ಪ್ರಜೆಗಳಾಗಲಿ ಎಷ್ಟರವರು? ಸಮಸ್ತವೂ ನಿನ್ನಿಂದಲೇ; ನೀನು ಕೊಟ್ಟದ್ದನ್ನೇ ನಿನಗೆ ಕೊಟ್ಟೆವು" (1 ಪೂರ್ವಕಾಲವೃತ್ತಾಂತ 29:14).

ಭೌತಿಕ ಸಂಗತಿಗಳಲ್ಲಿ ನಾವು ದೇವರನ್ನು ನಮಗೆ ಋಣಸ್ಥನನ್ನಾಗಿ ಮಾಡಿಕೊಳ್ಳಲಾರೆವು ಎಂಬುದು ಸತ್ಯವಾದರೂ, ಆತ್ಮೀಕ ಸಂಗತಿಗಳಲ್ಲಂತೂ ಅದು ಎರಡರಷ್ಟು ಸತ್ಯವಾಗಿರುತ್ತದೆ. ದೇವರ ಆಜ್ಞೆಗಳಿಗೆ ವಿಧೇಯರಾಗುವದು ನಮ್ಮ ರಕ್ಷಣೆಗಾಗಿ ಅತ್ಯಂತ ಪ್ರಾಮುಖ್ಯವಾದದ್ದು—ಸಾರಭೂತವೂ ಆದದ್ದು. ಹೀಗಿದ್ದರೂ, ನಮ್ಮ ವಿಧೇಯತೆಯು ಯಾವದರಲ್ಲಿಯಾಗಲಿ ದೇವರನ್ನು ನಮಗೆ ಸಾಲಗಾರನನ್ನಾಗಿ ಮಾಡುವದಿಲ್ಲ ಎಂಬುದನ್ನು ನಾವು ಅರ್ಥಮಾಡಿಕೊಳ್ಳತಕ್ಕದ್ದು. ನಾವು ಕೃಪೆಯಿಂದ ರಕ್ಷಣೆ ಹೊಂದುವ ಹೊರತು, ನಾವು ರಕ್ಷಣೆಯನ್ನೇ ಹೊಂದಿದವರಲ್ಲ.

**ವಚನ 36.** ಅಂತಮವಾಗಿ, ನಮ್ಮ ದೇವರು ಮಾತುಗಳಲ್ಲಿ ವರ್ಣಿಸಲಾರದಷ್ಟು ಅದ್ಭುತಕರವಾದವನೆಂಬುದನ್ನು ನಾವು ತಿಳಿಯಬಲ್ಲೆವು. ಪೌಲನು ಹೀಗೆ ಹೇಳಿದನು, **ಸಮಸ್ತವು ಆತನಿಂದ ಉತ್ಪತ್ತಿಯಾಗಿ ಆತನಿಂದ ನಡೆಯುತ್ತಾ ಆತನಿಗಾಗಿ ಇರುತ್ತದೆ.** ಭೌತಿಕ ಸೃಷ್ಟಿಯ ವಿಷಯದಲ್ಲಿ ಇದು ಸತ್ಯವಾಗಿರುತ್ತದೆ. Goodspeed ತರ್ಜುಮೆಯಲ್ಲಿ "ಯಾಕೆಂದರೆ ಆತನಿಂದಲೇ ಸಮಸ್ತವೂ ಬರುತ್ತದೆ; ಆತನ ಮೂಲಕವೇ ಸಮಸ್ತವೂ ಇರುತ್ತದೆ; ಮತ್ತು ಆತನಲ್ಲಿಯೇ ಸಮಸ್ತವೂ ಅಂತ್ಯವಾಗುತ್ತದೆ." Morris ಹೀಗೆ

ಬರೆಯುತ್ತಾನೆ, "ದೇವರು ಸಮಸ್ತ ಸೃಷ್ಟಿಯ ಜನಕನು, ಪೋಷಕನು, ಮತ್ತು ಗುರಿ ಆಗಿದ್ದಾನೆ."[50] ಹೇಗೂ, ಪರಿಭಾಷೆಯು ಕೇವಲ ಭೌತಿಕ ಜಗತ್ತಿಗೆ ಮಾತ್ರವೇ ಸಿಮೀತವಾಗಿರಲಿಕ್ಕೆ ಸಾದ್ಯವಿಲ್ಲ; ಸನ್ನಿವೇಶವು ಆತ್ಮೀಕ ಸಂಗತಿಗಳ ಬಗ್ಗೆ ಮಾತಾಡುವದಾಗಿದೆ. ನಮ್ಮ ವಿಮೋಚನೆಯು ಸಹ "ಆತನಿಂದ ಉತ್ಪತ್ತಿಯಾಗಿ ಆತನಿಂದ ನಡೆಯುತ್ತಾ ಆತನಿಗಾಗಿ ಇರುತ್ತದೆ." ಆತನೇ ನಮ್ಮ ರಕ್ಷಣೆಯ ಮೂಲವು, ಬಲವು, ಮತ್ತು ಲಕ್ಷ್ಯವು ಆಗಿದ್ದಾನೆ.

ಇದೆಲ್ಲವನ್ನು ಮನಸ್ಸಿನಲ್ಲಿಟ್ಟುಕೊಂಡು, ಪೌಲನು ಹೀಗೆ ಮುಗಿಸುತ್ತಾನೆ, **ಆತನಿಗೇ ಸದಾಕಾಲವೂ ಸ್ತೋತ್ರ.** ನಾವು ದೇವರಿಗೆ ಮಾತ್ರವೇ ಸೇರಿರುವ ಮಹಿಮೆಯನ್ನು ಬೇರೆ ಯಾವ ವ್ಯಕ್ತಿಗೂ ಕೊಡದಿರೋಣ. "ನನ್ನ ಬಲವೂ ಕೀರ್ತನೆಯೂ ಯಾಹುವೇ, ಆತನಿಂದ ನನಗೆ ರಕ್ಷಣೆಯುಂಟಾಯಿತು. ನಮ್ಮ ದೇವರು ಆತನೇ, ಆತನನ್ನು ವರ್ಣಿಸುವೆವು; ನಮ್ಮ ಪಿತೃಗಳ ದೇವರು ಆತನೇ, ಆತನ ಮಹಿಮೆಯನ್ನು ಪ್ರಖ್ಯಾತಿಪಡಿಸುವೆವು" (ವಿಮೋಚನಕಾಂಡ 15:2). **ಆಮೆನ್!**

ಹೀಗೆ ರೋಮಾಪುರದವರಿಗೆ ಪತ್ರಿಕೆಯ ಕಠಿಣವಾದ ವಿಭಾಗವು (9ರಿಂದ 11 ಅಧ್ಯಾಯಗಳು) ಅಂತ್ಯಗೊಳ್ಳುತ್ತದೆ. ಪೌಲನು ಚರ್ಚಿಸಲಾಗಿರುವ ಎಲ್ಲಾ ತಬ್ಬಿಬ್ಬುಗೊಳಿಸುವ ಪ್ರಶ್ನೆಗಳಿಗೂ ಸರಳವಾದ ಉತ್ತರಗಳನ್ನು ಕೊಡಲಿಲ್ಲ, ಆದರೆ ಪ್ರಶ್ನೆಗಳು ಅಪ್ರಾಮುಖ್ಯವಾದವುಗಳೆಂಬ ಸುಳಿವನ್ನೂ ಆತನು ನೀಡಲಿಲ್ಲ. ಬದಲಾಗಿ, ಆತನು ನಮಗೆ ಸ್ವಲ್ಪ ಪರಿಜ್ಞಾನವನ್ನು ನೀಡಿದ ಬಳಿಕ ಹೀಗೆ ಹೇಳಿದನು, "*ದೇವರ* ಬಳಿಯಲ್ಲಿಯೇ ಉತ್ತರಗಳಿವೆ. *ಆತನಲ್ಲಿ* ಭರವಸೆಯಿಡಿರಿ." ಈ ವಿಭಾಗವು ಒಂದು ದೃಢವಿಶ್ವಾಸದ ಟಿಪ್ಪಣಿಯೊಂದಿಗೆ ಅಂತ್ಯಗೊಳ್ಳುತ್ತದೆ.

## ಅನ್ವಯಿಸುವಿಕೆ

### ಪೌಲನು ಹಳೆಯ ಒಡಂಬಡಿಕೆಯನ್ನು ಉಪಯೋಗಿಸುವದು (9-11 ಅಧ್ಯಾಯಗಳು)

ಪೌಲನು ತನ್ನ ರೋಮಾಪುರದವರಿಗೆ ಪತ್ರಿಕೆಯಲ್ಲಿ ಆಗಾಗ್ಗೆ ಹಳೆಯ ಒಡಂಬಡಿಕೆಯಿಂದ ಉಲ್ಲೇಖಿಸುತ್ತಾನೆ, ಆದರೆ ಅದು "ಯೆಹೂದಿ ಸಮಸ್ಯೆ" ಯ ಕುರಿತ ವಿಭಾಗದಲ್ಲಿ ಸ್ಪಷ್ಟವಾಗಿ ತೋರಿಸುವಷ್ಟು ಬೇರೆಲ್ಲೂ ಕಾಣಿಸುವದಿಲ್ಲ (9 ರಿಂದ 11 ಅಧ್ಯಾಯಗಳು). ಪೌಲನು ಹಳೆಯ ಒಡಂಬಡಿಕೆಯ ವಾಕ್ಯಭಾಗವೊಂದನ್ನೇ ಉಲ್ಲೇಖಿಸುತ್ತಿದ್ದಾನೋ ಅಥವಾ ಕೇವಲ ಹಳೆಯ ಒಡಂಬಡಿಕೆಯ ವಾಕ್ಯಕ್ಕೆ ಹೋಲಿಕೆಯಾಗುವ ಮಾತುಗಳನ್ನು ಉಪಯೋಗಿಸುತ್ತಿದ್ದಾನೋ ಎಂಬುದನ್ನು ಯಾವಾಗಲೂ ಸುಲಭವಾಗಿ ಹೇಳುವಕ್ಕಾಗುವದಿಲ್ಲ. ಆದುದರಿಂದ, ರೋಮಾಪುರದವರಿಗೆ ಪತ್ರಿಕೆಯ ಈ ವಿಭಾಗದಲ್ಲಿ ಎಷ್ಟು ಉಲ್ಲೇಖನಗಳು ಸಿಕ್ಕುತ್ತವೆಂಬುದು ನಮಗೆ ನಿಖರವಾಗಿ ತಿಳಿಯದು. ಅಂದಾಜು ಲೆಕ್ಕವು ಇಪ್ಪತ್ತರಿಂದ[51] ಮೂವತ್ತರ[52] ಆಸುಪಾಸು ಎಂದು ಹೇಳಬಹುದು—ಆದರೆ ಈ ಮೂರು ಅಧ್ಯಾಯಗಳಲ್ಲಿ ಪೌಲನು ಹಳೆಯ ಒಡಂಬಡಿಕೆಯನ್ನು ಸಮೃದ್ಧವಾಗಿ ಉಪಯೋಗಿಸಿದ್ದಾನೆಂಬುದನ್ನು ಎಲ್ಲಾ ವ್ಯಾಖ್ಯಾನಕಾರರು

ಒಪ್ಪಿಕೊಳ್ಳುತ್ತಾರೆ.

ಪ್ರಶ್ನೆಯಲ್ಲಿರುವ ಹಳೆಯ ಒಡಂಬಡಿಕೆಯ ವಾಕ್ಯಭಾಗಗಳನ್ನು ಸೂಕ್ಷ್ಮವಾಗಿ ಪರಿಶೀಲಿಸುವಾಗ ಪ್ರಕಟಗೊಳ್ಳುವದೇನೆಂದರೆ ಪೌಲನು ಕೆಲವು ಸಾರಿ ಒಂದು ವಾಕ್ಯಭಾಗವನ್ನು ಯಥಾಃರೀತಿಯಲ್ಲಿಯೇ ಉಲ್ಲೇಖಿಸದೆ ಹೆಚ್ಚು ಅಥವಾ ಕಡಿಮೆ ಮಾತುಗಳನ್ನು ಸೇರಿಸಿ ಉಲ್ಲೇಖಿಸಿರುತ್ತಾನೆ ಎಂಬುದೆ (ಸಾಮಾನ್ಯವಾಗಿ LXX ನಿಂದ). ಕೆಲವು ಸಾರಿ ಆತನು ಹಳೆಯ ಒಡಂಬಡಿಕೆಯ ವಾಕ್ಯಭಾಗದ ಭಾವಾನುವಾದ ಮಾಡುತ್ತಾನೆ. ಒಂದು ಸಂದರ್ಭದಲ್ಲಿ, ಆತನು ಸಂಬಂಧಕ ವಚನಗಳನ್ನು ಸಂಯೋಜನಗೊಳಿಸುತ್ತಾನೆ. ಅಷ್ಟುಮಾತ್ರವಲ್ಲದೆ, ಆತನು ಅನೇಕ ಸಾರಿ ಹಳೆಯ ಒಡಂಬಡಿಕೆಯ ವಚನಗಳಿಗೆ ಮೂಲತಃ ಇರುವದಕ್ಕಿಂತಲೂ ವ್ಯತ್ಯಾಸವಾದ ಅರ್ಥವನ್ನು ಕಲ್ಪಿಸಿರುತ್ತಾನೆ.

ಈ ವಿಭಾಗದಲ್ಲಿ ಪೌಲನು ಹಳೆಯ ಒಡಂಬಡಿಕೆಯನ್ನು ಉಪಯೋಗಿಸುವ ವಿಷಯದಲ್ಲಿ ಮೂರು ಸಂಗತಿಗಳನ್ನು ಗಮನಕ್ಕೆ ತಂದುಕೊಳ್ಳುವದು ಸೂಕ್ತವಾಗಿರುತ್ತದೆ:

1. ಪೌಲನ ಪ್ರಾಥಮಿಕ ಉದ್ದೇಶವು ದೇವರು ಆವರಿಗೆ ಮಾಡಿದ ವಾಗ್ದಾನಗಳಲ್ಲಿ ಹಿಂದಕ್ಕೆ ಹೋಗಿರಲಿಲ್ಲ ಎಂಬುದರ ಬಗ್ಗೆ ಯೆಹೂದ್ಯರಿಗೆ ಮನವರಿಕೆ ಮಾಡಿಕೊಡುವದಾಗಿತ್ತು. ಆದುದರಿಂದ ಆತನು ಅವರು ಮನ್ನನೆಮಾಡುತ್ತಿದ್ದ ಆಧಾರಗ್ರಂಥ—ಹಳೆಯ ಒಡಂಬಡಿಕೆ—ವನ್ನ ಉಲ್ಲೇಖನ ಮಾಡುತ್ತಾನೆ ಮತ್ತು ಅವರಿಗೆ ಪರಿಚಿತವಿದ್ದ ತರ್ಕವನ್ನು ಉಪಯೋಗಿಸಿದನು. Richard A. Batey ಹೀಗೆ ಬರೆಯುತ್ತಾನೆ, ಏನೆಂದರೆ "ಪೌಲನು ಹಳೆಯ ಒಡಂಬಡಿಕೆಯನ್ನು ಉಪಯೋಗಿಸುವದು ಆತನ ಕಾಲದಲ್ಲಿ ರಬ್ಬಿಗಳ ಭಾಷ್ಯ ವಿಧಾನಕ್ಕೆ ಸಾಮಂಜಸ್ಯತೆಯಿಂದಿತ್ತು. ಆತನ ತರ್ಕ ಹಾಗೂ ಶಾಸ್ತ್ರದ ಉಪಯೋಗವು ಆತನ ಪ್ರಥಮ ಶತಮಾನದ ಯೆಹೂದಿ ವಾಚಕರಿಗೆ ಉನ್ನತ ಗುಣಮಟ್ಟದ ಮನವರಿಕೆಯನ್ನುಂಡು ಮಾಡಿರಬಹುದಾಗಿದೆ."[53]

2. ಪೌಲನು ಶಾಸ್ತ್ರಗಳನ್ನು ಉಪಯೋಗಿಸುವ ರೀತಿಯು ಇಂದು ನಾವು ಅವುಗಳನ್ನು ಉಪಯೋಗಿಸುವ ರೀತಿಗಿಂತಲೂ ಅಷ್ಟೇನು ವ್ಯತ್ಯಾಸವಾಗಿರಲಿಲ್ಲ. ನಾವು ವಾಕ್ಯಭಾಗದ ತುಣುಕುಗಳನ್ನು ಮತ್ತು ಚಿಕ್ಕ ಭಾಗಗಳನ್ನು ಉಪಯೋಗಿಸುತ್ತೇವೆ. ನಾವು ಇಂದಿನ ಸಮಸ್ಯೆಗಳನ್ನು ಸೇರ್ಪಡೆಗೊಳಿಸುವದಕ್ಕೆ ವಾಕ್ಯಭಾಗಗಳ ಅನ್ವಯಿಕೆಯನ್ನು ವಿಸ್ತರಿಸುತ್ತೇವೆ ("ಒಂದು ಮನೆಯಲ್ಲಿ ಭೇದಹುಟ್ಟಿದರೆ ಆ ಮನೆಯು ನಿಲ್ಲಲಾರದು"; ನೋಡಿರಿ ಮಾರ್ಕ 3:25). ಅಲ್ಲದೆ ನಾವು ವಾಕ್ಯಗಳಿಂದ ಮಾತುಗಳನ್ನು ಎರವಲಾಗಿ ಪಡೆದು ಅವುಗಳನ್ನು ಸಾಂಕೇತಿಕ ಭಾಷೆಯಾಗಿ ಬಳಸುತ್ತೇವೆ, ಉದಾಹರಣೆಗೆ "ನನ್ನ ಕಣ್ಣಿನ ಗುಡ್ಡೆ" (ನೋಡಿರಿ ಕೀರ್ತನೆ 17:8) ಮತ್ತು "ಉಡುಪಿನ ಅಂಚು" (ನೋಡಿರಿ ಮತ್ತಾಯ 9:20; KJV).

3. ಪೌಲನು ದೇವರಿಂದ ಪ್ರೇರಿಸಲ್ಪಟ್ಟಿದ್ದನು. ಪವಿತ್ರಾತ್ಮನ ಮೂಲಕವಾಗಿ, ಹಳೆಯ ಒಡಂಬಡಿಕೆಯ ಒಂದು ವಾಕ್ಯಭಾಗದಿಂದ ಯಾವ ನ್ಯಾಯಸಮ್ಮತವಾದ ಅನ್ವಯಿಕೆಯನ್ನು ಮಾಡಬಹುದು ಎಂಬುದನ್ನು ಆತನು ಬಲ್ಲವನಾಗಿದ್ದನು. ನಾವು ಪ್ರೇರಿಸಲ್ಪಟ್ಟವರಲ್ಲವಾದ್ದರಿಂದ, ನಾವು ಹಳೆಯ ಒಡಂಬಡಿಕೆಯ ವಾಕ್ಯಭಾಗಗಳನ್ನು ಅನ್ವಯಿಕೆ ಮಾಡುವಾಗ ಎಚ್ಚರವಹಿಸುವದು ಅಗತ್ಯವಾಗಿರುತ್ತದೆ.

## ಎಂದಿಗೂ ಕೈಬಿಡದಿರು! (11ನೇ ಅಧ್ಯಾಯ)

ಒಂದು ಜನಾಂಗವಾಗಿ, ಯೆಹೂದ್ಯರು ಯೇಸುವನ್ನು ತಿರಸ್ಕರಿಸಿದ್ದರು ಮತ್ತು ಆ ಮೂಲಕವಾಗಿ ದೇವರನ್ನು ತಿರಸ್ಕರಿಸಿದ್ದರು. ತತ್ಫರಿಣಾಮವಾಗಿ, ದೇವರು ಅವರನ್ನು ತಿರಸ್ಕರಿಸಿದ್ದನು. ಹಾಗಾದರೆ ಇದರರ್ಥವು ದೇವರನ್ನು ಅವರನ್ನು ತ್ಯಜಿಸಿ ಬಿಟ್ಟಿದ್ದನು ಎಂದಾಗಿರುತ್ತದೋ? ಎಂದಿಗೂ ಇಲ್ಲ. ದೇವರು ಪೌಲನನ್ನು ಮತ್ತು ಇತರ ಯೆಹೂದ್ಯರನ್ನು ಅಂಗೀಕರಿಸಿಕೊಂಡದ್ದು (11:1-10) ಆತನು ಪಶ್ಚಾತ್ತಾಪ ಪಟ್ಟು ಯೇಸುವಿನಲ್ಲಿ ನಂಬಿಕೆಯಿಡುವ ಎಲ್ಲಾ ಯೆಹೂದ್ಯರನ್ನು ಅಂಗೀಕರಿಸಿಕೊಳ್ಳುವದಕ್ಕೆ ಮನಸ್ಸುಳ್ಳವನಾಗಿದ್ದಾನೆಂಬುದನ್ನು ತೋರ್ಪಡಿಸಿತು. ಅಷ್ಟು ಮಾತ್ರವಲ್ಲದೆ, ಆತನು ಈಗಲೂ ಯೆಹೂದ್ಯರಿಗಾಗಿ ಚಿಂತೆಯುಳ್ಳವನಾಗಿದ್ದಾನೆಂಬುದಕ್ಕೆ ಪುರಾವೆಯಾಗಿ, ತಾನು ಅನ್ಯಜನರನ್ನು ಅಂಗೀಕರಿಸಿದ್ದನ್ನೇ ಯೆಹೂದ್ಯರನ್ನು ತನ್ನ ಬಳಿಗೆ ಹಿಂದಿರುಗುವಂತೆ ಪ್ರಚೋದನೆಯಾಗಿ ಉಪಯೋಗಿಸುತ್ತಿದ್ದಾನೆ.

ದೇವರು ಪಾಪಿಗಳನ್ನು ಎಂದಿಗೂ ಕೈಬಿಟ್ಟು ಬಿಡುವ*ದಿಲ್ಲ* ಎಂಬುದನ್ನು ನಾವು ಗ್ರಹಿಸಿಕೊಳ್ಳುವದು ಪ್ರಾಮುಖ್ಯವಾಗಿರುತ್ತದೆ. ದೇವರು ಕೆಲವು ಸಾರಿ ಪಾಪಿಗಳನ್ನು ಅವರ ಅವಿಧೇಯತೆಯಲ್ಲಿ ಮುಂದುವರೆಯುವಂತೆಯೂ ಅವರ ಕ್ರಿಯೆಗಳ ಪರಿಣಾಮಗಳನ್ನು ಅನುಭವಿಸುವಂತೆಯೂ ಅನುಮತಿಸಿ ಅವರನ್ನು ಅವರ ಪಾಪಕ್ಕೆ ಒಪ್ಪಿಸಿಕೊಡುತ್ತಾನೆ ಎಂಬುದಾಗಿ ರೋಮಾ 1ನೇ ಅಧ್ಯಾಯವು ಕಲಿಸುತ್ತದೆ. ಹೇಗೂ, ಇದರಲ್ಲಿ ದೇವರ ಉದ್ದೇಶವು ತಡವಾಗಿ ಹೋಗುವ ಮುಂಚೆ ಪಾಪಿಗಳು ತಮ್ಮ ದಾರಿಗಳ ತಪ್ಪನ್ನು ಕಾಣುವಂತೆ ಮಾಡುವದೇ ಆಗಿರುತ್ತದೆ. ದೇವರು ಪಾಪಿಗಳನ್ನು "ಒಪ್ಪಿಸಿ" ಕೊಡಬಹುದು, ಆದರೆ ಅವರನ್ನು ಆತನು "ಬಿಟ್ಟುಬಿಡುವದಿಲ್ಲ." ಅವರ ಶರೀರದಲ್ಲಿ ಜೀವವು ಇರುವ ತನಕ, ಅವರು ಹಿಂದಿರುಗಿ ಬರುವದನ್ನು ಆತನು ಹಂಬಲಿಸುತ್ತಾನೆ, ಅವರನ್ನು ಪುನಃ ಸ್ವೀಕರಿಸಿಕೊಳ್ಳಲು ಯಾವಾಗಲೂ ಆಸಕ್ತಿಯಿಂದಿರುತ್ತಾನೆ (ನೋಡಿರಿ ಲೂಕ 15:20-24).[54]

ಎಂಥ ಉದ್ಧರಿಸುವಂತಹ ಸತ್ಯ ಇದು! ನಿಮಗೆ ಕ್ರಿಸ್ತನಿಗೆ ಹೊರಗಾಗಿರುವ ಪ್ರಿಯರಿದ್ದರೆ, ಇದು ನಿಮ್ಮನ್ನು ಪ್ರೋತ್ಸಾಹಗೊಳಿಸತಕ್ಕದ್ದು. ಅವರನ್ನು ಕರ್ತನಿಗಾಗಿ ಗೆದ್ದುಕೊಳ್ಳುವ ನಿಮ್ಮ ಪರಿಶ್ರಮವನ್ನ ಇನ್ನಷ್ಟು ದುಪ್ಪಟ್ಟುಗೊಳಿಸಿಕೊಳ್ಳುವಂತೆ ಮಾಡತಕ್ಕದ್ದು. ದೇವರು ಅವರನ್ನು ಬಿಟ್ಟುಬಿಟ್ಟಿಲ್ಲವಾದರೆ, ನಾವು ಸಹ ಬಿಟ್ಟುಬಿಡಬಾರದು. ನೀವು ದೇವರ ಸಂಗಡ ಸರಿಯಾಗಿಲ್ಲವಾದರೆ, ಕರ್ತನು ನಿಮ್ಮನ್ನು ಬಿಟ್ಟುಬಿಟ್ಟಿರುವದಿಲ್ಲ ಎಂಬುದನ್ನು ಗ್ರಹಿಸಿಕೊಳ್ಳುವದು ಎಷ್ಟು ಅದ್ಭುತವಾದದ್ದು!

## ಊಟವೇ ಒಂದು ಉರ್ಲು? (11:9, 10)

ರೋಮಾ 11:9, 10ರಲ್ಲಿ, ಪೌಲನು ಕೀರ್ತನೆ 69:22, 23ರಿಂದ ದಾವೀದನ ಮಾತುಗಳನ್ನು ಉಲ್ಲೇಖಿಸುತ್ತಾನೆ:

> ಅವರ ಊಟವೇ ಅವರಿಗೆ ಉರ್ಲೂ ಬೋನೂ
> ಎಡೆತಡೆಯೂ ಶಿಕ್ಷೆಯೂ ಆಗಲಿ;
> ಅವರ ಕಣ್ಣು ಮೊಬ್ಬಾಗಿ ಕಾಣದೆ ಹೋಗಲಿ;
> ಅವರ ಬೆನ್ನು ಯಾವಾಗಲೂ ಬೊಗ್ಗಿಕೊಂಡಿರು ವಂತೆ ಮಾಡು.

ಈ ಉಲ್ಲೇಖದ ಒಂದು ಭಾಗವು ವಿಶೇಷವಾಗಿ ಬೈಬಲ್ ವಿದ್ಯಾರ್ಥಿಗಳ ಮನಸ್ಸನ್ನು ಆಕರ್ಷಿಸಿರುತ್ತದೆ: "ಅವರ ಊಟವೇ ಅವರಿಗೆ ಉರ್ಲೂ . . . ಆಗಲಿ." ಕೇಳಲ್ಪಡುವ ಪ್ರಶ್ನೆಯೆಂದರೆ "ಒಂದು ಊಟವು ಹೇಗೆ ಉರ್ಲೂ ಬೋನೂ ಆಗಿರಬಲ್ಲದು?" ಕೆಲವೊಂದು ಊಹಾಕಲ್ಪನೆಗಳು ವಿವಿಧ ಭಾವಾನುವಾದಗಳಲ್ಲಿ ಪ್ರತಿಫಲನಗೊಂಡಿರುತ್ತವೆ.

"ಅವರ ಊಟಗಳನ್ನು ಬೋನಿನೊಳಗೆ ಬೀಳಿಸಲು ಗಾಳವಾಗಿ ಮಾಡುವದು . . ." (CEV).

"ಅವರು ತಮ್ಮ ಔತಣಕೂಟಗಳಲ್ಲಿ ಹಿಡಿಯಲ್ಪಟ್ಟು ಬೋನಿನಲ್ಲಿ ಬೀಳಲಿ . . ." (TEV).[55]

"ಅವರು ಉತ್ತಮ ಊಟ ಮತ್ತು ಇತರ ಆಶೀರ್ವಾದಗಳು ಅವರನ್ನು ಅವರ ಮತ್ತು ದೇವರ ನಡುವೆ ಎಲ್ಲವೂ ಸರಿಯಿದೆಯೆಂದು ಭಾವಿಸಿಕೊಳ್ಳುವ ಬಲೆಯಲ್ಲಿ ಬೀಳಿಸಲಿ . . ." (LB).

"ಅವರು ಸ್ವಯಂ–ಸೇವೆಯ ಭೋಜನಗಳನ್ನು ತಿಂದು ವ್ಯಾಧಿಗ್ರಸ್ಥರಾಗಲಿ . . ." (MSG).

ಬೈಬಲಿನುದ್ದಕ್ಕು "ಊಟ" (ಮೇಜು) ಎಂಬುದು ಆಶೀರ್ವಾದ ಹಾಗೂ ಅನ್ಯೋನ್ಯತೆಯ ಸಂಕೇತವಾಗಿರುತ್ತದೆ (ನೋಡಿರಿ ಕೀರ್ತನೆ 23:5). ಬಹುಶಃ ದಾವೀದನು ತನ್ನ ವೈರಿಗಳು ಏನೆಲ್ಲದರ ಮೇಲೆ ಅವಲಂಭಿತರಾಗಿದ್ದಾರೋ ಮತ್ತು ಆದರಣೆ ಹೊಂದಿದರೋ ಅದೆಲ್ಲಾ ಅವರಿಗೆ ಅವನತಿಯಾಗಲಿ ಎಂದಷ್ಟೆ ಕೇಳಿಕೊಳ್ಳುತ್ತಿರಬಹುದಾಗಿದೆ. ಒಂದು ವೇಳೆ ಪೌಲನು ತನ್ನ ಕಾಲದ ಯೆಹೂದ್ಯರಿಗೆ ಆ ಅನ್ವಯಿಕೆಯನ್ನು ಮಾಡುವ ಉದ್ದೇಶ ಹೊಂದಿದ್ದಲ್ಲಿ, ಅವರು ಅವಲಂಭಿತರಾಗಿರುತ್ತಿದ್ದ ಒಂದು ಆತ್ಮೀಕ "ಊಟ" ದ (ಮೇಜು) ಉದಾಹರಣೆಯೆಂದರೆ ಮೋಶೆಯ ಧರ್ಮಶಾಸ್ತ್ರ ಆಗಿರಲಿತ್ತು. ಧರ್ಮಶಾಸ್ತ್ರಕ್ಕೆ ಅಂಟಿಕೊಳ್ಳಬೇಕೆಂಬ ಅವರ ಬಯಕೆಯು ಅವರ ಪಾಲಿಗೆ ಒಂದು ಉರ್ಲು ಮತ್ತು ಒಂದು ಬೋನು ಆಗಿತ್ತು. "ಊಟ" ಎಂಬುದನ್ನು ಮೊದಲ ಶತಮಾನದ ಯೆಹೂದ್ಯರಿಗೆ ಅನ್ವಯಿಸುವಂತಹ ಇನ್ನೊಂದು ವಿಧದ ಬಗ್ಗೆ Larry Deason ಸಲಹೆ ಮಾಡುತ್ತಾನೆ:

> ದೇವರು ಇಸ್ರಾಯೇಲ್ಯರಿಗಾಗಿ ಒಂದು ಅದ್ದೂರಿಯಾದ ಮೇಜನ್ನು (ಊಟವನ್ನು) ಸಿದ್ಧಗೊಳಿಸಿದನು, *ಮೆಸ್ಸೀಯನನ್ನು* ಉಣಬಡಿಸಿದ್ದನು (ಆದರೆ ಅವರು ಆತನನ್ನು ನಿರಾಕರಿಸಿದರು), ಅದರಲ್ಲಿ *ನೀತಿಯ* ಉಚಿತ ವರವಿತ್ತು (ಆದರೆ ಅವರು ಅದನ್ನು ತಿರಸ್ಕರಿಸಿದರು), ಮತ್ತು ಕ್ಷಮಾಪಣೆ ಹಾಗೂ ಸಮಾಧಾನದ ಸುವಾರ್ತೆಯು ಇತ್ತು (ಆದರೆ ಅವರು ಅದಕ್ಕೆ ಕಿವಿಗೊಡುವವರಾಗಿರಲಿಲ್ಲ). ಅವರ ಅಪನಂಬಿಕೆಯು ಮೆಸ್ಸೀಯನ ಔತಣವನ್ನು ಅವರ ಮೇಲೆ ದೈವಿಕ ನ್ಯಾಯತೀರ್ಪಿನ ಬಲೆಯಾಗಿ ಮಾರ್ಪಡಿಸಿತು.[56]

## ಶಾಪಾತ್ಮಕ ಕೀರ್ತನೆಗಳು? (11:9, 10)

ಕೆಲವರು ಕೀರ್ತನೆ 69 ರಂತಹ ಕೀರ್ತನೆಗಳ ಬಗ್ಗೆ ಚಕಿತಗೊಳ್ಳುತ್ತಾರೆ, ಅದರಲ್ಲಿ

ದಾವೀದನು ತನ್ನ ವೈರಿಗಳನ್ನು ಶಿಕ್ಷಿಸುವಂತೆ ದೇವರನ್ನು ಕೇಳಿಕೊಳ್ಳುತ್ತಾನೆ. ಈ ರೀತಿಯ ಕೀರ್ತನೆಗಳನ್ನು "ಶಾಪಾತ್ಮಕ ಕೀರ್ತನೆಗಳು" ಎಂದು ಕರೆಯಲ್ಪಡುತ್ತವೆ. ಕನಿಷ್ಠ ಎರಡು ವ್ಯಾಖ್ಯೆಗಳು ಇಲ್ಲಿ ಸೂಕ್ತವಾಗಿರುತ್ತವೆ. ಮೊದಲನೆಯದಾಗಿ, ದಾವೀದನು ಮುಯ್ಯಿಗೆ ಮುಯ್ಯಿ ತೀರಿಸುವದನ್ನು ಕರ್ತನ ಕೈಯಲ್ಲಿ ಬಿಡುತ್ತಿದ್ದಾನೆ (ನೋಡಿರಿ ರೋಮಾ 12:19). ಎರಡನೆಯದಾಗಿ, ಈ ಕೀರ್ತನೆಗಳು "ಕಣ್ಣಿಗೆ ಪ್ರತಿಯಾಗಿ ಕಣ್ಣು" ಎಂದು ಕಲಿಸಿದ ಒಡಂಬಡಿಕೆಯ (ಹಳೆಯ ಒಡಂಬಡಿಕೆ) ಭಾಗವಾಗಿದ್ದವು, ಹೊರತು ಒಂದು ಕೆನ್ನೆಗೆ ಹೊಡೆದರೆ ಮತ್ತೊಂದು ಕೆನ್ನೆಯನ್ನು ತೋರಿಸು ಎಂದು ಹೇಳುವ ಒಡಂಬಡಿಕೆಯ (ಹೊಸ ಒಡಂಬಡಿಕೆ) ಭಾಗವಾಗಿರಲಿಲ್ಲ (ನೋಡಿರಿ ವಿಮೋಚನಕಾಂಡ 21:24; ಮತ್ತಾಯ 5:38, 39; ರೋಮಾ 12:18–21).

## ಗರ್ವದ ಸಮಸ್ಯೆ (11:18)

ಪೌಲನು ರೋಮಾಪುರದವರಿಗೆ ಬರೆದ ತನ್ನ ಪತ್ರಿಕೆಯಲ್ಲಿ ಈ ನಿರ್ದಿಷ್ಟವಾದ ಗರ್ವದ ವಿಷಯದಲ್ಲಿ ಏಕೆ ಮಾತಾಡಿದನೆಂಬುದು ನಮಗೆ ತಿಳಿಯದು (11:18). ಒಂದು ಸಾಧ್ಯತೆಯೇನೆಂದರೆ ಪೌಲನಿಗೆ ರೋಮಾಪುರದ ಸಭೆಯಲ್ಲಿ ಯೆಹೂದ್ಯರು ಹಾಗೂ ಅನ್ಯಜನರ ನಡುವೆ ಇದ್ದ ತಿಕ್ಕಾಟದ ಬಗ್ಗೆ ಅರಿತವನಾಗಿದ್ದು ಆ ಪರಿಸ್ಥಿತಿಯನ್ನು ಸರಿಪಡಿಸುವದಕ್ಕೆ ಬರೆಯುತ್ತಿದ್ದಾನೆ ಎಂಬದೆ.[57] ಒಟ್ಟಾರೆಯಾಗಿ, ರೋಮಾಪುರದಲ್ಲಿನ ಸಭೆ ಆತ್ಮೀಕ ಸ್ಥಿತಿಯು ಉತ್ತಮವಾಗಿತ್ತು (ನೋಡಿರಿ 1:8), ಆದರೆ ಯಾವ ಸಭೆಯೂ ಪರಿಪೂರ್ಣವಾಗಿರುವದಿಲ್ಲ; ಸುಧಾರಣೆಗಳನ್ನು ಮಾಡತಕ್ಕ ಕ್ಷೇತ್ರಗಳು ಯಾವಾಗಲೂ ಇದ್ದೇ ಇರುತ್ತವೆ. ಇನ್ನೊಂದು ಸಾಧ್ಯತೆಯೆಂದರೆ, ರೋಮಾಯ ಸಾಮ್ರಾಜ್ಯದುದ್ದಕ್ಕೂ ಭೇಟಿ ಕೊಡುವ ವೇಳೆ, ಪೌಲನು ಈ ಸಮಸ್ಯೆಯನ್ನು ಬೇರೆ ಸಭೆಗಳಲ್ಲಿ ಗಮನಿಸಿದ್ದೀರಬೇಕು ಮತ್ತು ಅದು ರೋಮಾಪುರದಲ್ಲಿನ ಸಭೆಯಲ್ಲಿ ಸಂಭವಿಸದಂತೆ ತಡೆಯಲು ಈ ಉಪದೇಶವನ್ನು ಸೇರ್ಪಡೆಗೊಳಿಸಿರಬೇಕು. ಬಹುಶಃ ನಾವು ನಮ್ಮನ್ನು ಬೇರೆಯವರಿಗಿಂತ ಉನ್ನತರೆಂದು ಭಾವಿಸಿಕೊಳ್ಳದ ಹಾಗೆ ನಮಗೊಂದು ಬಲವಾದ ಎಚ್ಚರಿಕೆಯ ಅಗತ್ಯವಿದೆಯೆಂದು ಪವಿತ್ರಾತ್ಮನು ಬಲ್ಲವನಾಗಿದ್ದನು ಮತ್ತು ಇಂದು ನಮಗೋಸ್ಕರ ಸಂರಕ್ಷಿಸಿಡಲ್ಪಟ್ಟಿರುವ ಈ ಮಾತುಗಳನ್ನು ಬರೆಯುವಂತೆ ಪೌಲನನ್ನು ಪ್ರೇರಿಸಿರಬೇಕು.

ಗರ್ವವು "ಇತರ ಎಲ್ಲಾ ಪಾಪಗಳು ಬೆಳೆಯುವಂತಹ ನೆಲ" ಎಂದು ಕರೆಯಲ್ಪಟ್ಟಿದೆ.[58] ಗರ್ವವು ಕೆಟ್ಟದ್ದು ಆದರೆ ಅತಿ ವಿರಳವಾಗಿ ಅರಿಕೆ ಮಾಡಲ್ಪಡುವಂಥದ್ದೆಂದು C. S. Lewis ಅಭಿಪ್ರಾಯ ಪಡುತ್ತಾನೆ:

> ಲೋಕದಲ್ಲಿರುವ ಯಾವ ಮನುಷ್ಯನು ಮುಕ್ತವಾಗಿರದಂಥ ಒಂದು ದುರ್ಗುಣವಿರುತ್ತದೆ; ಅದನ್ನು ಲೋಕದಲ್ಲಿರುವ ಪ್ರತಿ ವ್ಯಕ್ತಿಯು ಸಹ ಮತ್ತೊಬ್ಬರಲ್ಲಿ ಕಾಣುವಾಗ ಜಿಗುಪ್ಸೆ ಪಡುತ್ತಾನೆ; ಮತ್ತು ಅದರ ಬಗ್ಗೆ ಕ್ರೈಸ್ತರನ್ನು ಹೊರತುಪಡಿಸಿ, ಮಿಕ್ಕ ಯಾರೊಬ್ಬರೂ ತಾವು ಅಪರಾಧಿಗಳೆಂದು ಊಹಿಸಿಕೊಳ್ಳುವದು ಅಪರೂಪ. ತಾವು ಸಿಡುಕುಸ್ವಭಾವದವರೆಂದು ಒಪ್ಪಿಕೊಳ್ಳುವ, ಅಥವಾ ಹುಡುಗಿಯರು ಇಲ್ಲವೆ ಕುಡಿಕತನದ ವಿಷಯದಲ್ಲಾಗಲಿ ತಮ್ಮನ್ನು ಹಿಡಿದಿಟ್ಟುಕೊಳ್ಳಲಾಗದು, ಅಥವಾ ತಾವು ಹೇಡಿಗಳೆಂದು ಒಪ್ಪಿಕೊಳ್ಳುವ ಬಗ್ಗೆ ನಾನು ಕೇಳಿದ್ದೇನೆ. ಕ್ರೈಸ್ತನಲ್ಲದವನೊಬ್ಬನು ತನ್ನನ್ನು ಈ ದುರ್ಗುಣವುಳ್ಳವನೆಂದು

ಆರೋಪಿಸಿಕೊಳ್ಳುವ ಬಗ್ಗೆ ನಾನಂತೂ ಎಂದಾದರೂ ಕೇಳಿರುವದಿಲ್ಲ ಎನ್ನಿಸುತ್ತದೆ. . . . ಒಬ್ಬ ಮನುಷ್ಯನನ್ನು ಅಪಖ್ಯಾತಿಗೊಳಿಸುವ ಯಾವ ತಪ್ಪು ಮತ್ತೊಂದಿಲ್ಲ, ಮತ್ತು ನಮ್ಮಲ್ಲಿ ಹೆಚ್ಚು ಪ್ರಜ್ಞಾಹೀನವಾದ ತಪ್ಪು ಮತ್ತೊಂದಿರುವದಿಲ್ಲ. ಮತ್ತು ನಾವು ಅದನ್ನು ಹೆಚ್ಚೆಚ್ಚಾಗಿ ನಮ್ಮಲ್ಲಿ ಹೊಂದಿದ್ದರೆ, ಅಷ್ಟೆ ಹೆಚ್ಚಾಗಿ ನಾವು ಇತರರಲ್ಲಿ ಅದನ್ನು ಅಸಹ್ಯಿಸುತ್ತೇವೆ.[59]

ಬಹುಶಃ ಇದನ್ನು ಗಮನಿಸತಕ್ಕದ್ದೇನೆಂದರೆ ಪಾಪಭರಿತ ಗರ್ವ ಎಂಬುದಿದೆ ಮತ್ತು ನ್ಯಾಯಯುತವಾದ ಗರ್ವ ಎಂಬುದಿದೆ. 11:13ರಲ್ಲಿ, "ಗಣ್ಯತೆಗೆ ತರುತ್ತೇನೆ" (δοξάζω, *doxazō*) ಎಂಬ ಪದವು "ನಾನು ಅದರ ಬಗ್ಗೆ ಹೆಮ್ಮೆ ಪಡುತ್ತೇನೆ" ("ಅದರಲ್ಲಿ ಗರ್ವ ಪಡುತ್ತೇನೆ"; Weymouth) ಎಂಬದಾಗಿ ಅನುವಾದಿಸಲ್ಪಡಬಹುದು. ಸ್ವಲ್ಪ ಮಟ್ಟಿಗೆ, ನಾವು ಭೇಡಿಯಾಗುವ ಜನರ ಮೇಲೆ ಅನುಕೂಲವಾದ ಅನಿಸಿಕೆಯನ್ನು ಬೀರುವಂತಾಗಲು ನಾವು ನಮ್ಮ ಚಹರೆಯ ಬಗ್ಗೆ "ಗರ್ವ ಪಟ್ಟುಕೊಳ್ಳುವ" ಅಗತ್ಯವಿರುತ್ತದೆ. ನಾವು ನಮ್ಮ "ಕೆಲಸದಲ್ಲಿ ಗರ್ವ ಪಟ್ಟುಕೊಳ್ಳುವ" ಮತ್ತು ಸಾಧ್ಯವಾದಷ್ಟು ಉತ್ತಮ ಕೆಲಸ ಮಾಡುವ ಅಗತ್ಯವಿರುತ್ತದೆ. ಇತರರು ಸಾಧಿಸಿರುವದರ ಕುರಿತಾಗಿ ಗರ್ವದಿಂದಿರುವದರಲ್ಲಿ ಖಂಡಿತವಾಗಿಯೂ ಯಾವ ತಪ್ಪಿರುವದಿಲ್ಲ (ನೋಡಿರಿ 2 ಕೊರಿಂಥ 1:14). ತಾವು ಬೇರೆಯವರಿಗಿಂತಲೂ ಉತ್ತಮರೆಂಬದಾಗಿ ಜನರು ದುರಂಹಕಾರದಿಂದ ತೋರಿಸಿದಂಥ ಗರ್ವವನ್ನೇ ಪೌಲನು ಖಂಡಿಸಿದನು.

ಜ್ಞಾನೋಕ್ತಿ 16:18ರ KJV ಯು ಮಾತುಗಳ ಬಗ್ಗೆ ಅನೇಕರಿಗೆ ಪರಿಚಯವಿರುತ್ತದೆ: "ನಾಶನಕ್ಕೆ ಮುಂದಾಗಿ ಗರ್ವ ಹೋಗುತ್ತದೆ; ಬೀಳುವಿಕೆ ಮುಂಚೆ ಜಂಬದ ಮನಸ್ಸು."[60] ನಾವು ಅದನ್ನು ಕ್ಲುಪ್ತಗೊಳಿಸಿ "ಗರ್ವದಿಂದ ಭಂಗ" ಎಂದಾಗಿಸಿದ್ದೇವೆ. ನಾನು ಆ ಮಾತುಗಳನ್ನು ಕೇಳಿಸಿಕೊಳ್ಳುವಾಗ, ನನಗೆ ಗರ್ವವುಳ್ಳ ಕಪ್ಪೆಯ ಕಥೆಯು ನೆನಪಾಗುತ್ತದೆ. ಕಪ್ಪೆಯು ಎರಡು ಬಾತುಕೋಳಿಗಳ ಜೊತೆ ಸ್ನೇಹವನ್ನು ಮಾಡಿಕೊಂಡಿತು. ಒಂದು ದಿನ, ಅವುಗಳು ವಾಸಿಸುತ್ತಿದ್ದ ಕೆರೆಯು ಬತ್ತಿ ಹೋಯಿತು. ಬಾತುಕೋಳಿಗಳು ಬೇರೊಂದು ಕೆರೆಗೆ ಹಾರಿ ಹೋಗುವದಕ್ಕೆ ಸಾಧ್ಯವಿತ್ತು, ಆದರೆ ಅವರ ಮಿತ್ರನಾದ ಕಪ್ಪೆಯ ವಿಷಯವೇನು? ಬಾತುಕೋಳಿಗಳು ತಮ್ಮ ಕೊಕ್ಕೆಗಳಲ್ಲಿ ಕೋಲನ್ನು ಹಿಡಿದುಕೊಂಡು ಹಾರುವದಾಗಿಯೂ ಕಪ್ಪೆಯು ಕೋಲನ್ನು ಮಧ್ಯದಲ್ಲಿ ಬಾಯಿಂದ ಹಿಡಿದುಕೊಳ್ಳಬೇಕೆಂಬದಾಗಿಯೂ ತೀರ್ಮಾನಿಸಲಾಯಿತು. ಅವುಗಳು ಹಾರಾತ್ತಾ ಸಾಗಿದ್ದಾಗ, ಒಬ್ಬ ರೈತನು ಮೇಲಕ್ಕೆ ನೋಡಿ ಇವುಗಳು ಹೋಗುವದನ್ನು ಕಂಡನು. ಆತನು "ಎಂಥ ಚತುರವಾದ ಉಪಾಯ! ಅದನ್ನು ಯಾರು ಕಲಿಸಿದರೆಂದು ನನಗೆ ಆಶ್ಚರ್ಯವಾಗುತ್ತದೆ?" ಎಂದು ಕೂಗಿದನು. ಅದಕ್ಕೆ ಕಪ್ಪೆಯು "ನಾನೇ ಉಪಾಯ ಕೊಟ್ಟಿದ್ದು" ಎಂದಿತ್ತು, ಮತ್ತು ಬಿದ್ದು ಮರಣ ಹೊಂದಿತ್ತು. "ಗರ್ವದಿಂದ ಭಂಗ."

ಒಂದಿಲ್ಲಾ ಒಂದು ಸಂದರ್ಭದಲ್ಲಿ, ಬಹುಶಃ ನಮ್ಮಲ್ಲಿ ಎಲ್ಲರೂ ಸಹ ಗರ್ವದ ಸಮಸ್ಯೆಯೊಂದಿಗೆ ಹೋರಾಟ ನಡಿಸಿದ್ದಿರುತ್ತೇವೆ. ರೋಮಾ 11:18ನೇ ವಚನವು ಮೊದಲ ಶತಮಾನದ ಅನ್ಯಜನಾಂಗದ ಕ್ರೈಸ್ತರು ಗರ್ವ ಪಟ್ಟುಕೊಳ್ಳಲು ಯಾವದೇ ಕಾರಣ ಹೊಂದಿರಲಿಲ್ಲ ಎಂಬುದನ್ನು ಸಾಭಿತುಪಡಿಸುತ್ತದೆ—ತ್ತು ನಮಗೆ ಸಹ ಯಾವದೇ ಕಾರಣವಿರುವದಿಲ್ಲ. ನಾವೆಲ್ಲರೂ ಮರಣಕ್ಕೆ ಮಾತ್ರವೇ ಯೋಗ್ಯರಾಗಿರುವಂಥ ಪಾಪಿಗಳಾಗಿದ್ದೇವೆ (3:23; 6:23). ನಾವು ದೇವರ ಕೃಪೆಯಿಂದ ರಕ್ಷಿಸಲ್ಪಟ್ಟಿದ್ದೇವೆ, ಹೊರತು

ವೈಯಕ್ತಿಕ ಅರ್ಹತೆಯಿಂದಲ್ಲ. Isaac Watts ಹೀಗೆ ಬರೆಯುತ್ತಾನೆ,

> ಯಾವುದರ ಮೇಲೆ ಮಹಿಮೆಯ ಪ್ರಭುವು ಸತ್ತನೋ
> ಆ ಆಶ್ಚರ್ಯವಾದ ಕ್ರೂಜೆಯನ್ನು ನಾನು ಅವಲೋಕಿಸುವಾಗ,
> ನನ್ನ ಅತ್ಯೈಶ್ವರ್ಯದ ಲಾಭವನ್ನು ನಷ್ಟವೆಂದೆಣಿಸುತ್ತೇನೆ
> ಮತ್ತು ನನ್ನ ಗರ್ವವನ್ನೆಲ್ಲಾ ಕಡೆಗಣಿಸುತ್ತೇನೆ.[61]

ಪೇತ್ರನು ಹೀಗೆ ಬರೆಯುತ್ತಾನೆ, "ದೇವರು ಅಹಂಕಾರಿಗಳನ್ನು ಎದುರಿಸುತ್ತಾನೆ, ದೀನರಿಗಾದರೋ ಕೃಪೆಯನ್ನು ಅನುಗ್ರಹಿಸುತ್ತಾನೆ. ಹೀಗಿರುವದರಿಂದ ದೇವರ ತ್ರಾಣವುಳ್ಳ ಹಸ್ತದ ಕೆಳಗೆ ನಿಮ್ಮನ್ನು ತಗ್ಗಿಸಿಕೊಳ್ಳಿರಿ; ಆತನು ತಕ್ಕ ಕಾಲದಲ್ಲಿ ನಿಮ್ಮನ್ನು ಮೇಲಕ್ಕೆ ತರುವನು" (1 ಪೇತ್ರ 5:5, 6).

### ದೇವರು ಮತ್ತು ಇಸ್ರಾಯೇಲ್ಯರು (11:25, 26)

ರೋಮಾ 11:25, 26 ವಚನಗಳು ಪತ್ರಿಕೆಯಲ್ಲಿಯೇ ಅರ್ಥಮಾಡಿಕೊಳ್ಳಲು ಅತ್ಯಂಥ ಕಷ್ಟಕರವಾದ ವಾಕ್ಯಭಾಗವಾಗಿದೆ. ಈ ವಾಕ್ಯಭಾಗದ ಅರ್ಥನಿರೂಪಣೆಯಲ್ಲಿನ ಒಂದು ಸಮಸ್ಯೆಯೇನೆಂದರೆ ಅನೇಕರು ಈಗಲೂ ಶಾರೀರಿಕ ಇಸ್ರಾಯೇಲ್ಯ ಜನಾಂಗವು ದೇವರ "ಸ್ವಕೀಯ" (ಆದುಕೊಂಡ) ಪ್ರಜೆ ಎಂದು ಭಾವಿಸುತ್ತಾರೆ. ದೇವರು ಯೆಹೂದ್ಯರಿಗೆ ಮಾಡಿದ ವಾಗ್ದಾನಗಳಲ್ಲಿ ಕೆಲವೊಂದನ್ನು ಇನ್ನೂ ನೆರವೇರಿಸಿರುವದಿಲ್ಲ ಮತ್ತು ಆತನು ಈಗಲೂ ಅವರಿಗೆ ಕೆಲವೊಂದು ಆಶೀರ್ವಾದಗಳನ್ನು ಬಾಕಿ ಉಳಿಸಿಕೊಂಡಿದ್ದಾನೆಂದು ಕೆಲವರು ನಂಬುತ್ತಾರೆ. ಆದುದರಿಂದ, ಇತಿಹಾಸದಲ್ಲಿ ಇಸ್ರಾಯೇಲ್ಯರೊಂದಿಗೆ ಇರುವ ದೇವರ ಸಂಬಂಧದ ಬಗ್ಗೆ ಅರ್ಥಮಾಡಿಕೊಳ್ಳುವದು ಪ್ರಾಮುಖ್ಯವಾಗಿರುತ್ತದೆ.

"*ಸಾಮಾನ್ಯ ಆಯ್ದುಕೊಳ್ಳುವಿಕೆ" Vs "ವಿಶೇಷ ಆಯ್ದುಕೊಳ್ಳುವಿಕೆ.*" ದೇವರ ಸ್ವಕೀಯ ಪ್ರಜೆಯ ಕುರಿತು ನಾವು ಅರ್ಥಮಾಡಿಕೊಳ್ಳಬೇಕಾಗಿರುವ ಮೊದಲ ಸತ್ಯವೇನೆಂದರೆ ದೇವರು ಇಸ್ರಾಯೇಲ್ಯರನ್ನು "ಆಯ್ದುಕೊಳ್ಳುವಿಕೆ" (ಆಯ್ಕೆ) ಮಾಡಿಕೊಂಡದ್ದರ ಅಂತಿಮ ಉದ್ದೇಶವು ಲೋಕದೊಳಗೆ ಮೆಸ್ಸೀಯನನ್ನು ("ಕ್ರಿಸ್ತನು") ಕರೆತರುವ ತನ್ನ ಯೋಜನೆಯನ್ನು ಜಾರಿಗೆ ತರುವದಕ್ಕಾಗಿ ಈ ಜನಾಂಗವನ್ನು ಉಪಯೋಗಿಸುವದೇ ಆಗಿತ್ತು ಎಂಬುದೆ. ಆತನ ಆಯ್ದುಕೊಳ್ಳಲ್ಪಟ್ಟ/ಆಯ್ಕೆಮಾಡಲ್ಪಟ್ಟ ಜನಾಂಗವಾಗಿ, ಇಸ್ರಾಯೇಲ್ಯರಿಗೆ ಕೆಲವೊಂದು ಆಶೀರ್ವಾದಗಳ ವಾಗ್ದಾನ ಮಾಡಲ್ಪಟ್ಟಿತು, ಆದರೆ ದೇವರು ಇಸ್ರಾಯೇಲ್.ನ (ಯಾಕೋಬನ) ಪ್ರತಿಯೊಬ್ಬ ಶಾರೀರಿಕ ಸಂತತಿಯವನನ್ನು ವಿಮೋಚಿಸುತ್ತೇನೆಂದು *ಎಂದಿಗೂ* ವಾಗ್ದಾನ ಮಾಡಲಿಲ್ಲ. ಇದರೊಂದಿಗೆ ಒಪ್ಪಿಗೆಯಾಗುವಂತೆ, Morris ಹೀಗೆ ಬರೆಯುತ್ತಾನೆ,

> ದೇವರು ಇಸ್ರಾಯೇಲ್ಯರನ್ನು ತನ್ನ ಪ್ರಜೆಯಾಗಿರುವಂತೆ, ಅವರಲ್ಲಿ ತನ್ನ ಸಂಕಲ್ಪವನ್ನು ಒಂದು ವಿಶೇಷ ರೀತಿಯಲ್ಲಿ ಕಾರ್ಯರೂಪಕ್ಕೆ ತರುವಂಥ ಜನರನ್ನಾಗಿ ಆರಿಸಿಕೊಂಡನು. ಅವರು ಪ್ರಕಟನೆಯನ್ನು ಪಡೆದುಕೊಳ್ಳುವವರಾಗಿ ಮತ್ತು ಅನೇಕ ಆಶೀರ್ವಾದಗಳನ್ನು ಪಡೆಯುವವರಾಗಿ ಇರಲಿದ್ದರು (cf. 9:4–5). . . . ಆದರೆ ಇದೆಲ್ಲವೂ ಎಂದಿಗೂ ಇಡೀ ಜನಾಂಗವು ರಕ್ಷಿಸಲ್ಪಡುವದೆಂಬ ಅರ್ಥವನ್ನು ಕೊಟ್ಟಿರುವದಿಲ್ಲ.[62]

ನಾವು ಈ ಮುಂಚಿನ ಅಧ್ಯಯನದಲ್ಲಿ ಕಲಿತಿದ್ದೇವೆ, ಏನೆಂದರೆ ಒಬ್ಬ ಯೆಹೂದ್ಯನಾಗಿದ್ದರೆ (ಧರ್ಮಶಾಸ್ತ್ರವನ್ನು ಹೊಂದಿ ಮತ್ತು ಸುನ್ನತಿ ಮಾಡಿಸಿಕೊಂಡಿದ್ದರೆ) ಆತನಿಗೆ ನಿತ್ಯಜೀವವು ಖಾತರಿಯಾಗಿರುತ್ತದೆಂದು ರಬ್ಬಿಗಳು ನಂಬಿದ್ದರು ಎಂಬುದೆ, ಆದರೆ ದೇವರ ವಾಕ್ಯವು ಇದನ್ನು ಕಲಿಸಲಿಲ್ಲ. ಇಸ್ರಾಯೇಲಿನ ಇತಿಹಾಸದುದ್ದಕ್ಕೂ, ದೇವರಿಗೆ ನಂಬಿಗಸ್ತರಾಗಿದ್ದ ಇಸ್ರಾಯೇಲ್ಯರಿಗಿಂತಲೂ ಆತನಿಗೆ ಅಪನಂಬಿಗಸ್ತರಾಗಿದ್ದ ಇಸ್ರಾಯೇಲ್ಯರೇ ಅಧಿಕವಾಗಿ ಯಾವಾಗಲೂ ಇದ್ದರು.

ಇಸ್ರಾಯೇಲ್ಯರ ಕುರಿತಾಗಿ, McGuiggan "ಸಾಮಾನ್ಯ ಆಯ್ದುಕೊಳ್ಳುವಿಕೆ" ಮತ್ತು "ವಿಶೇಷ ಆಯ್ದುಕೊಳ್ಳುವಿಕೆ" ನಡುವೆ ಒಂದು ಭಿನ್ನತೆಯನ್ನು ತೋರಿಸುತ್ತಾನೆ.[63] "ಸಾಮಾನ್ಯ ಆಯ್ದುಕೊಳ್ಳುವಿಕೆ" ಯು ಲೋಕಕ್ಕೆಲ್ಲಾ ಆಶೀರ್ವಾದವುಂಟು ಮಾಡುವದಕ್ಕಾಗಿ ಒಂದು ಮುಖಾಂತರ ಜನರಾಗಿರುವಂತೆ ದೇವರು ಇಸ್ರಾಯೇಲ್ಯರನ್ನು ಆಯ್ದುಕೊಳ್ಳು ವದಕ್ಕೆ ಸಂಬಂಧಪಟ್ಟಿರುತ್ತದೆ. "ವಿಶೇಷ ಆಯ್ದುಕೊಳ್ಳುವಿಕೆ" ಯು "ಇಸ್ರಾಯೇಲ್ಯರೊಳಗಿನ ಇಸ್ರಾಯೇಲ್ಯರನ್ನು" (ನೋಡಿರಿ 9:6)—ತಾನು ರಕ್ಷಿಸುವ ನಂಬಿಗಸ್ತರನ್ನು—ಆಯ್ದುಕೊಳ್ಳುವಿಕೆ/ಆಯ್ಕೆಮಾಡಿಕೊಳ್ಳುವಿಕೆಗೆ ಸಂಬಂಧಿಸಿರುತ್ತದೆ.

*ದೇವರು ಇಸ್ರಾಯೇಲ್ಯರಿಗೆ ಮಾಡಿದ ವಾಗ್ದಾನವು ನೆರವೇರಿರುತ್ತದೆ.* ದೇವರು ಹಾರಾನಿನಲ್ಲಿ ಅಬ್ರಹಾಮನಿಗೆ ಕಾಣಿಸಿಕೊಂಡು ತಾನು ತೋರಿಸುವ ದೇಶಕ್ಕೆ, ಅಂದರೆ ಕಾನಾನಿಗೆ ಹೋಗುವಂತೆ ಆತನಿಗೆ ಹೇಳಿದನು (ಆದಿಕಾಂಡ 12:1), ಆ ಸಮಯದಲ್ಲಿ, ದೇವರು ಅಬ್ರಹಾಮನಿಗೆ ವಿಶೇಷ ವಾಗ್ದಾನಗಳನ್ನು ಕೊಟ್ಟನು:

> ನಾನು ನಿನ್ನನ್ನು ದೊಡ್ಡ ಜನಾಂಗವಾಗುವಂತೆ ಮಾಡಿ ಆಶೀರ್ವದಿಸಿ ನಿನ್ನ ಹೆಸರನ್ನು ಪ್ರಖ್ಯಾತಿಗೆ ತರುವೆನು. ನೀನು ಆಶೀರ್ವಾದನಿಧಿಯಾಗುವಿ, ನಿನ್ನನ್ನು ಹರಸುವವರನ್ನು ಹರಸುವೆನು; ನಿನ್ನನ್ನು ಶಪಿಸುವವರನ್ನು ಶಪಿಸುವೆನು. ನಿನ್ನ ಮೂಲಕ ಭೂಲೋಕದ ಎಲ್ಲಾ ಕುಲದವರಿಗೂ ಆಶೀರ್ವಾದವುಂಟಾಗುವದು (ಆದಿಕಾಂಡ 12:2, 3).

ಹಲವಾರು ವರ್ಷಗಳ ಬಳಿಕ, ದೇವರು ಅಬ್ರಹಾಮನಿಗೆ ಹೀಗೆ ಹೇಳಿದನು,

> ನಾನು ನಿನ್ನನ್ನು ಆಶೀರ್ವದಿಸೇ ಆಶೀರ್ವದಿಸುವೆನು; ನಿನ್ನ ಸಂತತಿಯನ್ನು ಹೆಚ್ಚಿಸೇ ಹೆಚ್ಚಿಸುವೆನು; ಅದನ್ನು ಆಕಾಶದ ನಕ್ಷತ್ರಗಳಂತೆಯೂ ಸಮುದ್ರ ತೀರದಲ್ಲಿರುವ ಉಸುಬಿನಂತೆಯೂ ಅಸಂಖ್ಯವಾಗಿ ಮಾಡುವೆನು; ಅವರು ಶತ್ರುಗಳ ಪಟ್ಟಣಗಳನ್ನು ಸ್ವಾಧೀನಮಾಡಿಕೊಳ್ಳುವರು. ನೀನು ನನ್ನ ಮಾತನ್ನು ಕೇಳಿದ್ದರಿಂದ ಭೂಮಿಯ ಎಲ್ಲಾ ಜನಾಂಗಗಳಿಗೂ ನಿನ್ನ ಸಂತತಿಯ ಮೂಲಕ ಆಶೀರ್ವಾದವುಂಟಾಗುವದು (ಆದಿಕಾಂಡ 22:16b-18).

ಈ ವಾಗ್ದಾನಗಳೆಲ್ಲವೂ ನೆರವೇರಿದವು. ಅಬ್ರಹಾಮನ ಸಂತತಿಯವರು ಆಕಾಶದ ನಕ್ಷತ್ರಗಳಷ್ಟಾಗಿಯೂ ಸಮುದ್ರ ತೀರದ ಉಸುಬಿನಷ್ಟಾಗಿಯೂ ಅಸಂಖ್ಯಾತರಾಗಿರುತ್ತಾರೆ. "ಒಂದು ದೊಡ್ಡ ಜನಾಂಗ"ವು (ಶಾರೀರಿಕ ಇಸ್ರಾಯೇಲ್) ಅಬ್ರಹಾಮನನ್ನು "ಪಿತೃ" ಎಂದು ಕರೆಯುತ್ತದೆ. ಲೋಕದಲ್ಲೆಲ್ಲಾ ಅಬ್ರಹಾಮನ ಹೆಸರು ಘನ ಪಡಿಸಲ್ಪಟ್ಟಿರುತ್ತದೆ.

ಖಂಡಿತವಾಗಿಯೂ, ವಾಗ್ದಾನದ ಅತ್ಯಂಥ ಪ್ರಾಮುಖ್ಯವಾದ ಭಾಗವು ಏನಾಗಿತ್ತೆಂದರೆ ಅಬ್ರಹಾಮನ ಸಂತಾನದ ಮೂಲಕ ಭೂಲೋಕದ ಸಕಲ ಜನಾಂಗಗಳಿಗೆ

ಆಶೀರ್ವಾದವುಂಟಾಗುವದು ಎಂಬದೆ. ಪೌಲನು ಆದಿಕಾಂಡ 22:18 ವಾಗ್ದಾನವನ್ನು ಗಲಾತ್ಯ 3:16ರಲ್ಲಿ ಉಲ್ಲೇಖಿಸುತ್ತಾನೆ: "ದೇವರು ಅಬ್ರಹಾಮನಿಗೂ ಅವನ ಸಂತತಿಗೂ ವಾಗ್ದಾನಗಳನ್ನು ಮಾಡಿದನು. ಆತನು [ದೇವರು] ನಿನ್ನ ಸಂತತಿಗಳಿಗೆ ಎಂದು ಹೇಳಿ ಅನೇಕರನ್ನು ಸೂಚಿಸದೆ ನಿನ್ನ ಸಂತತಿಗೆ ಎಂದು ಹೇಳಿ ಒಬ್ಬನನ್ನೇ ಸೂಚಿಸುತ್ತಾನೆ. ಆ ಒಬ್ಬನು ಕ್ರಿಸ್ತನೇ." (ಯೇಸು) ಕ್ರಿಸ್ತನು ಬಂದದ್ದು ಸತ್ಯವೇ. ಅಬ್ರಹಾಮನಿಗೆ ಮಾಡಲ್ಪಟ್ಟ ವಾಗ್ದಾನಗಳು ನೆರವೇರಿಸಲ್ಪಟ್ಟವು.

ಯೆಹೂದ್ಯರು ಈಗಲೂ ದೇವರಾದುಕೊಂಡ ಕುಲ ಎಂದು ನಂಬುವವರು ಆಕ್ಷೇಪಣೆಯೆತ್ತಿ, "ಆದರೆ ಅಬ್ರಹಾಮನ ಸಂತತಿಯವರು ಕಾನಾನ್ ದೇಶವನ್ನು ಬಾಧ್ಯವಾಗಿ ಹೊಂದುವರು ಎಂದು ಸಹ ದೇವರು ವಾಗ್ದಾನ ಮಾಡಿದನು—ಮತ್ತು ಆ ವಾಗ್ದಾನವು ಈಗಲೂ ನೆರವೇರುವ ಪ್ರಕ್ರಿಯೆಯಲ್ಲಿರುತ್ತದೆ" ಎಂದು ಹೇಳುತ್ತಾರೆ. ದೇವರು ಅಬ್ರಹಾಮನಿಗೆ, "ನೀನು ಪ್ರವಾಸವಾಗಿರುವ ಕಾನಾನ್‌ದೇಶವನ್ನೆಲ್ಲಾ ನಿನಗೂ ನಿನ್ನ ಸಂತತಿಗೂ ಶಾಶ್ವತ ಸ್ವಾಸ್ತ್ಯವನ್ನಾಗಿ" ಕೊಡುವೆನು ಎಂದು ಹೇಳಿದ್ದು ನಿಜವೇ (ಆದಿಕಾಂಡ 17:8).[64] ಈ ವಾಗ್ದಾನವು ಇಸಾಕ ಹಾಗೂ ಯಾಕೋಬರಿಗೆ ಪುನರುಚ್ಛರಿಸಲ್ಪಟ್ಟಿತು (ಆದಿಕಾಂಡ 26:3, 4; 28:13, 14; ನೋಡಿರಿ ಧರ್ಮೋಪದೇಶಕಾಂಡ 34:1-4). ಆ ವಾಗ್ದಾನದ ವಿಸ್ತಾರವು ಎಷ್ಟೆಂಬುದನ್ನು ವಿವರವಾಗಿ ಯೆಹೋಶುವ 1:4ರಲ್ಲಿ ಹೇಳಲಾಗಿರುತ್ತದೆ: "ಅರಣ್ಯವೂ ಈ ಲೆಬನೋನ್ ಪರ್ವತವೂ ಮೊದಲುಗೊಂಡು ಯೂಫ್ರೇಟೀಸ್[65] ಮಹಾನದಿಯ ವರೆಗಿರುವ ಹಿತ್ತಿಯರ ದೇಶವೆಲ್ಲಾ ನಿಮ್ಮದಾಗುವದು; ನಿಮ್ಮ ಸೀಮೆಯು ಪಶ್ಚಿಮ ದಿಕ್ಕಿನ ಮಹಾಸಾಗರದ ವರೆಗೆ ವಿಸ್ತರಿಸಿಕೊಳ್ಳುವದು."

ದೇವರು ಈ ವಾಗ್ದಾನವನ್ನು ನೆರವೇರಿಸಿದನೋ? ಯೆಹೋಶುವ 21:43-45ರಲ್ಲಿ, ಈ ಸಾರಾಂಶದ ಹೇಳಿಕೆಗಳನ್ನು ಕಾಣುತ್ತೇವೆ:

> ಯೆಹೋವನು ಇಸ್ರಾಯೇಲ್ಯರ ಪೂರ್ವಿಕರಿಗೆ ಪ್ರಮಾಣಪೂರ್ವಕವಾಗಿ ವಾಗ್ದಾನ ಮಾಡಿದ ದೇಶವನ್ನು ಇಸ್ರಾಯೇಲ್ಯರಿಗೆ ಕೊಟ್ಟನು. . . . ಆತನು ಇಸ್ರಾಯೇಲ್ಯರಿಗೆ ಮಾಡಿದ ಅತಿ ಶ್ರೇಷ್ಠವಾಗ್ದಾನಗಳಲ್ಲಿ ಒಂದೂ ತಪ್ಪಿಹೋಗಲಿಲ್ಲ. ಎಲ್ಲಾ ನೆರವೇರಿದವು.

ಯೆಹೋಶುವನು ಇಸ್ರಾಯೇಲ್ಯರಿಗೆ ನೀಡಿದ ವಿದಾಯ ಭಾಷಣದಲ್ಲಿ, ಹೀಗೆ ಹೇಳಿದನು, "ನಿಮ್ಮ ದೇವರಾದ ಯೆಹೋವನು ನಿಮ್ಮ ವಿಷಯದಲ್ಲಿ ನುಡಿದ ಆಶೀರ್ವಚನಗಳಲ್ಲಿ ಒಂದೂ ವ್ಯರ್ಥವಾಗಲಿಲ್ಲ; ಎಲ್ಲವೂ ತಪ್ಪದೆ ನೆರವೇರಿದವೆಂಬುದು ನಿಮಗೆ ಮಂದಟ್ಟಾಯಿತಲ್ಲಾ" (ಯೆಹೋಶುವ 23:14).[66] ವರ್ಷಗಳ ಬಳಿಕ, ಯೆಹೂದ್ಯರು ಸೆರೆವಾಸದಿಂದ ಕಾನಾನ್ ದೇಶಕ್ಕೆ ಹಿಂದಿರುಗಿ ಬಂದಾಗ, ಅವರು ದೇವರನ್ನು ಸ್ತುತಿಸುತ್ತಾ ಹೀಗೆ ಹೇಳಿದರು,

> ಯೆಹೋವನೇ, ಅಬ್ರಾಮನನ್ನು ಆರಿಸಿಕೊಂಡು ಕಸ್ದೀಯರ ಊರ್ ಎಂಬ ಪಟ್ಟಣದಿಂದ ಬರಮಾಡಿ ಅವನಿಗೆ ಅಬ್ರಹಾಮನೆಂಬ ಹೆಸರನ್ನು ಕೊಟ್ಟ ದೇವರು ನೀನೇ. ಅವನು ಯಥಾರ್ಥಚಿತ್ತನೆಂದು ಕಂಡು ಅವನಿಗೆ . . .ವಾಗ್ದಾನಮಾಡಿ ಅದನ್ನು ನೆರವೇರಿಸಿದ್ದೀ; ನೀನು ಧರ್ಮಸ್ವರೂಪನೇ (ನೆಹಮೀಯ 9:7, 8).

ದೇವರು ಯೆಹೂದ್ಯರಿಗೆ ಮಾಡಿದ ವಾಗ್ದಾನವನ್ನು ನೆರವೇರಿಸಿದನೋ? ಹೌದು,

ಆತನು ನೇರವೇರಿಸಿದನು. ಆತನು ತನ್ನ ವಾಗ್ದಾನದ ವಿಷಯದಲ್ಲಿ ನಂಬಿಗಸ್ತನಾಗಿರುವದಕ್ಕಾಗಿ ಅದನ್ನು ಶತಮಾನದಿಂದ ಶತಮಾನಕ್ಕೆ ನೆರವೇರಿಸುತ್ತಲೇ ಇರಬೇಕಾಗಿದೆಯೋ? ನೀವು ಒಬ್ಬನಿಗೆ ನೂರು ರೂಪಾಯಿ ಕೊಡುತ್ತೇನೆಂದು ಹೇಳಿ ಅದನ್ನು ಆತನಿಗೆ ಕೊಟ್ಟು ಬಿಡುವಿರಿ—ಮತ್ತು ಆತನು ಅದನ್ನು ಕಳೆದುಕೊಂಡನೆಂದರೆ ಹೇಗೆ? ನೀವು ಆಗಲೂ ಆ ವ್ಯಕ್ತಿಗೆ ನೂರು ರೂಪಾಯಿಗಳ ಸಾಲದಲ್ಲಿರುವಿರೋ? ಇಲ್ಲ—ಮತ್ತು ದೇವರು ಇಂದು ಯೆಹೂದ್ಯರಿಗೆ ಯಾವದೇ ಭೂಮಿಯನ್ನು ಕೊಡುವ ಸಾಲದಲ್ಲಿಲ್ಲ. "ಆತನು ಇಸ್ರಾಯೇಲ್ಯರಿಗೆ ಮಾಡಿದ ಅತಿ ಶ್ರೇಷ್ಠವಾಗ್ದಾನಗಳಲ್ಲಿ *ಒಂದೂ* ತಪ್ಪಿಹೋಗಲಿಲ್ಲ. *ಎಲ್ಲಾ* ನೆರವೇರಿದವು."

*ಇಸ್ರಾಯೇಲ್ಯರು ಎಲ್ಲಿ ತಪ್ಪಿದರು.* ರೋಮಾ 11:17-24ರಲ್ಲಿ, ಪೌಲನು ಒಂದು ಎಣ್ಣೇಮರದ ಸಾದೃಶ್ಯವನ್ನು ಉಪಯೋಗಿಸಿದನು ಮತ್ತು ಅನೇಕ ಯೆಹೂದ್ಯರು "ನಂಬದೆಹೋದದರಿಂದ" (11:20) ಮರದಿಂದ "ಮುರಿದುಹಾಕಲ್ಪಟ್ಟರು" ಎಂಬುದನ್ನು ಗಮನಕ್ಕೆ ತಂದನು. ಇಸ್ರಾಯೇಲ್ಯರು ಎಲ್ಲಿ ತಪ್ಪೇಸೆಗಿದರೆಂಬದನ್ನು ದೃಷ್ಟಾಂತಪಡಿಸುವ ದಕ್ಕಾಗಿ ನಾವು ಒಂದು ಆಧುನಿಕ ಸಾದೃಶ್ಯವನ್ನು ಪರಿಗಣಿಸೋಣ: ಒಂದು ರೈಲು ಮಾರ್ಗದ ಸಾದೃಶ್ಯ. ಅನೇಕ ಸಾದೃಶ್ಯಗಳ ರೀತಿಯಲ್ಲಿಯೇ, ಇದು ಅತಿಯಾಗಿ ಸರಳೀಕರಿಸಲ್ಪಟ್ಟಿದೆ ಮತ್ತು ಅವಶ್ಯಕ್ಕಿಂತ ಅತಿಯಾದ ಅರ್ಥವನ್ನು ಕಲ್ಪಿಸಕೂಡದು, ಆದರೆ ಬಹುಶಃ ಅದು ಏನು ಸಂಭವಿಸಿತೆಂಬುದನ್ನು ವಿವರಿಸುವದಕ್ಕೆ ಸಹಾಯವಾಗಬಹುದು.

ಅಬ್ರಹಾಮನಿಂದ ಮೊದಲುಗೊಂಡು ನಿತ್ಯತ್ವದ ವರೆಗೂ ವಿಸ್ತರಿಸಿರುವ ಒಂದು ರೈಲುಮಾರ್ಗವನ್ನು ಕಲ್ಪಿಸಿಕೊಳ್ಳಿರಿ. ಇಸ್ರಾಯೇಲ್ಯರು ಅನುಸರಿಸಬೇಕೆಂದು ದೇವರು ಇಚ್ಛೆಸಿದ್ದ ರೈಲುಹಳಿ ಇದೇ ಆಗಿತ್ತು.

ಆ ಹಳಿಯಲ್ಲಿ ಮೊದಲ "ನಿಲುಗಡೆ" ಅಥವಾ "ನಿಲ್ದಾನ" ಎಂದರೆ ಅಬ್ರಹಾಮನಿಗೆ ಮಾಡಲ್ಪಟ್ಟ ವಾಗ್ದಾನಗಳು (ಆದಿಕಾಂಡ 12:1-3; 22:17, 18; ಗಲಾತ್ಯ 3:16). ಮುಂದಿನ ನಿಲ್ದಾನವು ಮೋಶೆಯ ಧರ್ಮಶಾಸ್ತ್ರ, ಅದು "ಇಂಥಿಂಥದು ಅಪರಾಧವೆಂದು ತೋರಿಸುವದಕ್ಕಾಗಿ [ವಾಗ್ದಾನಗಳೊಂದಿಗೆ]" ಸೇರಿಸಲ್ಪಟ್ಟಿತು (ಗಲಾತ್ಯ 3:19). ಧರ್ಮಶಾಸ್ತ್ರವು ಯೆಹೂದ್ಯರನ್ನು "ಕ್ರಿಸ್ತನಲ್ಲಿಗೆ ಸೇರುವ ತನಕ"—ನಮ್ಮ ದೃಷ್ಟಾಂತದಲ್ಲಿರುವ ಆರಂಭಿಕ ಗಮ್ಯಸ್ಥಾನ—"ಕಾಯುವ ಆಳಿನಂತಾಗಿದೆ" (ಗಲಾತ್ಯ 3:24).

ಯೆಹೂದ್ಯರು "ಹಳಿಯನ್ನು ತಪ್ಪದೆ ಅದರಲ್ಲೇ" ಸಾಗಿದ್ದಲ್ಲಿ, ಅವರು ಕ್ರಿಸ್ತನನ್ನು ಮೆಸ್ಸೀಯನೆಂದು (ಮೂರನೆಯ ನಿಲ್ದಾನ) ಅಂಗೀಕರಿಸಿಕೊಂಡಿರುತ್ತಿದ್ದರು, ಆತನ ಮರಣದಿಂದ ಪ್ರಯೋಜನವನ್ನು ಪಡೆದಿರುತ್ತಿದ್ದರು (ನಾಲ್ಕನೆಯ ನಿಲ್ದಾನ), ಮತ್ತು ಮೆಸ್ಸೀಯನ ರಾಜ್ಯದ—ಸಭೆ—ಪ್ರಜೆಗಳಾಗಿರುತ್ತಿದ್ದರು (ಐದನೆಯ ನಿಲ್ದಾನ). ಅವರು ಯೆರಮೀಯನಿಂದ ಮುಂತಿಳಿಸಲ್ಪಟ್ಟಿದ್ದ ಕ್ರಿಸ್ತನ "ಹೊಸ ಒಡಂಬಡಿಕೆ" ಯನ್ನು ಒಪ್ಪಿಕೊಂಡಿರುತ್ತಿದ್ದರು (ಯೆರೆಮೀಯ 31:31-34; ನೋಡಿರಿ ಇಬ್ರಿಯ 8:7-13). ಬಳಿಕ, ನಂಬಿಕೆಯಿಂದ ಜೀವಿಸುವ ಮೂಲಕ, ಅವರು ಪರಲೋಕದಲ್ಲಿ ದೇವರು ಹಾಗೂ ಕ್ರಿಸ್ತನ ಸಂಗಡ ನಿತ್ಯತ್ವದುದ್ದಕ್ಕೂ ಜೀವಿಸುವದನ್ನು ಎದುರು ನೋಡಬಹುದಿತ್ತು—ಅಂತಿಮ ಗಮ್ಯಸ್ಥಾನ.

ಯೆಹೂದ್ಯ ಜನಾಂಗಕ್ಕಾಗಿ ಅದೇ ದೇವರ ಯೋಜನೆ ಮತ್ತು ಸಂಕಲ್ಪವಾಗಿತ್ತು.

ಹೇಗೂ, ಹಳಿಯಲ್ಲಿಯೇ ಇರುವದರ ಬದಲಾಗಿ, ಬಹುಪಾಲು ಯೆಹೂದ್ಯರು ಯೇಸುವನ್ನು ಮೆಸ್ಸೀಯನೆಂದು ಒಪ್ಪದೆ ತಿರಸ್ಕರಿಸಿದರು. ಅವರು ಹಾಗಿದ್ದರೂ ಸರಿಯಾದ ಹಳಿಯಲ್ಲಿಯೇ ಇದ್ದೇವೆಂದು ಭಾವಿಸಿಕೊಂಡಿದ್ದರೆಂಬುದರಲ್ಲಿ ಸಂಶವೇ ಇಲ್ಲ, ಆದರೆ ಅವರು ಹಳಿಯಲ್ಲಿ ಇರಲಿಲ್ಲ. ಅವರು ಅಪನಂಬಿಕೆಯೆಂಬ ಉಪರೈಲು ಹಳಿಯಲ್ಲಿ ತಿರುಗಿಕೊಂಡು ಬಿಟ್ಟಿದ್ದರು (ನೋಡಿರಿ ಯೋಹಾನ 8:24).

ಹಳೆಯ ಒಡಂಬಡಿಕೆಯ ಕಾಲದಲ್ಲಿ, ಅನ್ಯಜನರು ಯೆಹೂದ್ಯರಿಗಿಂತಲೂ ಭಿನ್ನವಾದ ಹಾದಿಯಲ್ಲಿದ್ದರು, ಆದರೆ ಕ್ರಿಸ್ತನು ಮೋಶೆಯ ಧರ್ಮಶಾಸ್ತ್ರದ ಅಡ್ಡಗೋಡೆಯನ್ನು ಕೆಡವಿ ಹಾಕಿದಾಗ ಆ ಸ್ಥಿತಿಯು ಅಂತ್ಯಗೊಂಡಿತು (ಎಫೆಸ 2:14, 15). ಅವರಲ್ಲಿ ಅನೇಕರು ಕ್ರಿಸ್ತನನ್ನು ಹಿಂಬಾಲಿಸುವದಕ್ಕೆ ಕೊಡಲಾದ ಆಮಂತ್ರಣವನ್ನು ಸ್ವೀಕರಿಸಿಕೊಂಡು ವಿಧೇಯತೆಯುಳ್ಳ ನಂಬಿಕೆಯ ಮೂಲಕ "ಮುಖ್ಯ ಹಳಿಗೆ" ಬಂದಿದ್ದರು. (ಪೌಲನು ರೋಮಾ 11:17, 18ರಲ್ಲಿ ವ್ಯಾಖ್ಯೆ ನೋಡಿರುವ ಪ್ರಕಾರ, ದೇವರು ಯೆಹೂದ್ಯರಿಗೆ ಮಾಡಿದ್ದ ವಾಗ್ದಾನಗಳ ಪ್ರಯೋಜನವನ್ನು ತಾವು ಅನುಭವಿಸುತ್ತಿದ್ದಾರೆಂಬುದನ್ನು ಅನ್ಯಜನಾಂಗದ ಕ್ರೈಸ್ತರು ಅರ್ಥಮಾಡಿಕೊಳ್ಳುವ ಅಗತ್ಯವಿರುತ್ತದೆ. ನಮ್ಮ ದೃಷ್ಟಾಂತದಲ್ಲಿ, *ಸುವಾರ್ತೆಯು* ಅನ್ಯಜನಾಂಗದವರಿಗೆ ಸಾರಲ್ಪಟ್ಟಿತು ಎಂಬುದನ್ನು ಒತ್ತಿ ಹೇಳುವದಕ್ಕೆ ನಾವು ಆರನೆಯ ನಿಲ್ದಾನವೊಂದನ್ನು ಸೇರ್ಪಡೆಗೊಳಿಸಬಹುದು.)

ಖಂಡಿತವಾಗಿಯೂ, ಒಬ್ಬ ಯೆಹೂದ್ಯನು ಯೇಸುವನ್ನು ಅಂಗೀಕರಿಸಿಕೊಂಡು ಆತನ ಚಿತ್ತವನ್ನು ಮಾಡುವ ಮೂಲಕ ಯಾವ ಸಮಯದಲ್ಲಾದರೂ ಮುಖ್ಯ ಹಳಿಗೆ ಬರಬಹುದಾಗಿದೆ. ದುಃಖಕರವಾಗಿ, ಅವರಲ್ಲಿ ಬಹುತೇಕರು "ಈ ಹೊತ್ತಿನ ವರೆಗೂ" ಅದನ್ನು ಮಾಡಿರುವದಿಲ್ಲ (11:8).

*ಮುಕ್ತಾಯ*: ಹಳೆಯ ಒಡಂಬಡಿಕೆಯ ಕಾಲದಲ್ಲಿ, ಶಾರೀರಿಕ ಇಸ್ರಾಯೇಲ್ಯರು ದೇವರ "ಆಯ್ದುಕೊಳ್ಳಲ್ಪಟ್ಟ" (ಆರಿಸಿಕೊಂಡ) ಜನಾಂಗವಾಗಿದ್ದರು. ಇಂದು, ಹೇಗೂ, ಸಭೆಯು ದೇವರ ಆತ್ಮೀಕ "ಇಸ್ರಾಯೇಲ್" ಆಗಿರುತ್ತದೆ (ಗಲಾತ್ಯ 6:16). ಕ್ರೈಸ್ತರು "ದೇವರಾದುಕೊಂಡ ಜನಾಂಗ" (1 ಪೇತ್ರ 2:9).

## ದೇವರ ಜ್ಞಾನ (11:33-36)

ರೋಮಾ 11:33-36ರ ಪರಿಭಾಷೆಯು ಧರ್ಮೋಪದೇಶಕಾಂಡ 29:29ನ್ನು ನೆನಪಿಸುತ್ತದೆ: "ರಹಸ್ಯವಾದವುಗಳು ನಮ್ಮ ದೇವರಾದ ಯೆಹೋವನವು; ಆದರೆ ಆತನಿಂದ ಪ್ರಕಟವಾದವುಗಳು ಸದಾ ನಮ್ಮ ಮತ್ತು ನಮ್ಮ ಸಂತತಿಯವರ ಪಾಲಾಗಿರುವದರಿಂದ ನಾವು ಈ ಧರ್ಮಶಾಸ್ತ್ರನಿಯಮಗಳನ್ನು ಅನುಸರಿಸಿ ನಡೆಯಬೇಕಾದ ಹಂಗಿನಲ್ಲಿದ್ದೇವೆ." ನಾವು ತಿಳಿಯಲು ಸಾಧ್ಯವಾಗದ ಅನೇಕ ಸಂಗತಿಗಳಿರುತ್ತವೆ: "ರಹಸ್ಯವಾದವುಗಳು ನಮ್ಮ ದೇವರಾದ ಯೆಹೋವನವು." ಹೇಗೂ, ದೇವರು ಕೆಲವು ಸತ್ಯಗಳನ್ನು ನಮಗೆ ಪ್ರಕಟಗೊಳಿಸಲು ಸೂಕ್ತವೆಂದು ಕಂಡಿದ್ದಾನೆ.

ರೋಮಾ 11ರಲ್ಲಿ, ನಾವು "ಪ್ರಕಟವಾದವುಗಳ" ಲ್ಲಿ ಕೆಲವೊಂದನ್ನು ಕಾಣುತ್ತೇವೆ:

ದೇವರು ಯೆಹೂದ್ಯರು ಹಾಗೂ ಅನ್ಯಜನರು ಇಬ್ಬರನ್ನೂ ರಕ್ಷಿಸುವದಕ್ಕೆ ಒಂದು ಯೋಜನೆ ಹೊಂದಿದ್ದಾನೆ.

ಎಲ್ಲರೂ ರಕ್ಷಣೆ ಹೊಂದಬೇಕೆಂದು ದೇವರು ಇಚ್ಛಿಸುತ್ತಾನೆ.
ದೇವರು ಎಲ್ಲರಿಗೂ ಕರುಣೆ ತೋರಿಸಬೇಕೆಂದು ಬಯಸುತ್ತಾನೆ.
ನಾವು ದೇವರನ್ನು ಎಂದಿಗೂ ನಮ್ಮ ಋಣಸ್ಥನನ್ನಾಗಿ ಮಾಡಲಾರೆವು; ನಾವು ಆತನ ಕೃಪೆ ಮತ್ತು ಕರುಣೆಗಳ ಮೇಲೆ ಅವಲಂಭಿತರಾಗತಕ್ಕದ್ದು.
ನಮ್ಮ ದೇವರು ಮಾತುಗಳಲ್ಲಿ ವರ್ಣಿಸಲಾಗದಷ್ಟು ಅತ್ಯಾದ್ಭುತವಾದವನು.

---

## ಅಡಿ ಟಿಪ್ಪಣಿಗಳು

[1]ಪೌಲನ ಯೆಹೂದಿತನದ ಬಗ್ಗೆ ವಿಶ್ಲೇಷಿಸಬಹುದಾದ ಇನ್ನೊಂದು ವಿಧವು JB ಯಲ್ಲಿ: "ನಾನು ಒಬ್ಬ ಇಸ್ರಾಯೇಲ್ಯನು, ಬೆನ್ಯಾಮೀನ ಕುಲದ ಮೂಲಕ ಅಬ್ರಹಾಮನ ಸಂತತಿಯವನು, ದೇವರು ತನ್ನ ಜನರನ್ನು ತಿರಸ್ಕರಿಸಿದ್ದಾನೆಂಬುದನ್ನು ಎಂದಿಗೂ ಒಪ್ಪಿಕೊಳ್ಳಲಾಗದು." ಹೇಗೂ, ಬಹುಪಾಲು ವ್ಯಾಖ್ಯಾನಕಾರರು ನಾನು ಇಲ್ಲಿ ಕೊಟ್ಟಿರುವ ಅರ್ಥನಿರೂಪಣೆಯೊಂದಿಗೆ ಸಹಮತ ವ್ಯಕ್ತಪಡಿಸುತ್ತಾರೆ. [2]ಅಪೊಸ್ತಲರ ಕೃತ್ಯಗಳು 21:20ರಲ್ಲಿನ "ಎಷ್ಟೋ ಸಾವಿರ" ಎಂಬದರ ಅನುವಾದಿತ ಗ್ರೀಕ್ ಪದವು ಅಕ್ಷರಶಃ "ಹತ್ತಾರು ಸಾವಿರ" ಎಂಬ ಅರ್ಥವನ್ನು ಕೊಡುತ್ತದೆ. ಕೋಶಾರ್ಥದ ರೂಪವು μυριάς (*murias*) ಎಂದಾಗಿರುತ್ತದೆ, ಅದರಿಂದ ಆಂಗ್ಲದ "myriad" (ದಶಸಹಸ್ರದ) ಎಂಬುದ ಬಂದಿರುತತದೆ. [3]W. E. Vine, Merrill F. Unger, and William White, Jr., *Vine's Complete Expository Dictionary of Old and New Testament Words* (Nashville: Thomas Nelson Publishers, 1985), 522. [4]ರೋಮಾ 9:27ರಲ್ಲಿ, "ಒಂದು ಅಂಶ" ಎಂಬುದರ ಅನುವಾದಿತ ಪದವು ὑπόλειμμα (*hupoleimma*) ಎಂಬುದು. ಈ ಸಂಯೋಜಿತ ಪದವು ಸಂಖ್ಯೆಯ ಕಿರಿತನವನ್ನು ಒತ್ತಿಹೇಳುವದಕ್ಕೆ ಉಪಯೋಗಿಸಲ್ಪಡುತ್ತದೆ. ಅದು ὑπό (*hupo*, "ಕೆಳಗೆ") ಎಂಬದರೊಂದಿಗೆ *leimma* ಎಂಬ ಪ್ರತ್ಯಯವನ್ನು ಒಂದಗೂಡಿಸುತ್ತದೆ. [5]"ಒಂದು ಅಂಶ" (ಕೆಲವರು) ಎಂಬ ಪದವು NASBಯಲ್ಲಿ 84 ಸಾರಿ ಕಾಣಿಸಿಕೊಳ್ಳುತ್ತದೆ. ಅದು ಅತಿ ಹೆಚ್ಚು ಸಾರಿ ಯೆಶಾಯನ ಪುಸ್ತಕದಲ್ಲಿ ಕಾಣಿಸಿಕೊಳ್ಳುತ್ತದೆ. [6]ಪ್ರಕಟನೆ 12:17ರಲ್ಲಿ (KJV), "ಉಳಿದವರ" ಎಂಬ ಪದವು λοιπός (*loipos*) ಎಂಬ ಪದದಿಂದ ಅನುವಾದಿಸಲ್ಪಟ್ಟಿದೆ, ಅದು *leimma*ದ ಒಂದೇ ಕುಟುಂಬ ಪದದಿಂದ ಬಂದದ್ದಾಗಿದೆ. ಎರಡೂ "*leipō*, ಬಿಡುವದು ಎಂಬುದಕ್ಕೆ ನಿಕಟ ಸಂಬಂಧ" ಹೊಂದಿವೆ (Vine, 522). ಕೆಲವು ಸಾರಿ *loipos* ಎಂಬುದು *leimma*ದಕ್ಕೆ ಸಮಾನಾರ್ಥ ಪದವಾಗಿ ಉಪಯೋಗಿಸಲ್ಪಡುತ್ತದೆ; ಇನ್ನು ಕೆಲವು ಸಾರಿ ಅದು ಹಾಗಿರುವದಿಲ್ಲ. ಪ್ರಕಟನೆ 12:17ರಲ್ಲಿ NASBಯು loiposನ್ನು "ಉಳಿದವರು" ಎಂದು ಅನುವಾದಿಸುತ್ತದೆ. [7]F. F. Bruce, *The Letter of Paul to the Romans*, 2d ed., The Tyndale New Testament Commentaries (Grand Rapids, Mich.: Wm. B. Eerdmans Publishing Co., 1985), 201. [8]"A different word (*sklērynō*) is used of the hardening of Pharaoh's heart in 9:18, but the meaning is not greatly different from that of *pōroō* [in 11:7]" (Ibid., n. 1). [9]*The Analytical Greek Lexicon* (London: Samuel Bagster & Sons, 1971), 181. [10]Vine, 332-33, 693. "ಆಸಕ್ತ" ಎಂಬ ಪದದ ಒಂದು ಉದಾಹರಣೆಗಾಗಿ. ನೋಡಿರಿ ಗಲಾತ್ಯ 4:17 (KJV).

[11]Ibid., 332-33. [12]Ibid., 259. [13]ವಚನ 12ರಲ್ಲಿ, NASBಯು ಎರಡು ಸಾರಿ "is"(ಲಾಗಿ) (ವರ್ತಮಾನಕಾಲ) ಎಂದು ಸೇರ್ಪಡೆಗೊಳಿಸಿರುತ್ತದೆ ಮತ್ತು ನಂತರ ಒಂದು ಸಾರಿ ". . . ಗುವದು" (ಭವಿಷ್ಯತ್ಕಾಲ) ಸೇರಿಸಿದೆ. [14]R. C. H. Lenski, *The Interpretation of St. Paul's Epistle to the Romans* (Minneapolis: Augsburg Publishing Co., 1963), 695. [15]ಗ್ರೀಕ್ ವಾಕ್ಯದಲ್ಲಿ 15ನೇ ವಚನದಲ್ಲಿ ಯಾವದೇ ಕ್ರಿಯಾಪದವಿರುವದಿಲ್ಲ, ಆದ್ದರಿಂದ ಅನುವಾದಕರು ಕ್ರಿಯಾಪದಗಳನ್ನು ಒದಗಿಸಬೇಕಾಗುತ್ತದೆ. ಕೆಲವರು ವಚನವನ್ನು ಮುಂತಿಳಿಸುವ ಪ್ರವಾದನೆಯನ್ನಾಗಿ ಮಾಡುವದಕ್ಕಾಗಿ "ವಾಗುವದು" ಎಂಬ ಮಾತುಗಳನ್ನು ಉಪಯೋಗಿಸುತ್ತಾರೆ, ಆದರೆ ಭವಿಷ್ಯದಲ್ಲಿ ಒಟ್ಟಾರೆಯಾಗಿ ಯೆಹೂದ್ಯರು ರಕ್ಷಣೆ ಹೊಂದುವರೆಂಬದನ್ನು ಪೌಲನು ಮುಂತಿಳಿಸುತ್ತಿದ್ದಾನೆಂಬುದಕ್ಕೆ ಯಾವದೇ ಸೂಚನೆಯು ಇರುವದಿಲ್ಲ. ಅನುವಾದಕರು "ವಾಗುವದು" ಎಂಬುದಕ್ಕೆ ಬದಲಾಗಿ "ವಾಗಿದೆ" ಎಂಬದನ್ನು ಒದಗಿಸಿರಬಹುದಿತ್ತು. [16]Leon Morris, *The Epistle to the Romans* (Grand Rapids, Mich.: Wm. B. Eerdmans Publishing Co., 1988), 411. Morris ಈ ಅಡಿಟಿಪ್ಪಣಿಯನ್ನು ಸೇರ್ಪಡೆಗೊಳಿಸುತ್ತಾನೆ: "ಪೌಲನು ζωή ἐκ νεκρῶν ಎಂಬ ಪದ ಉಪಯೋಗಿಸುತ್ತಾನೆ,

ಆದರೆ ಅಂತಿಮ ಪುನರುತ್ಥಾನವು ἀνάστασις νεκρῶν ಎಂಬಂತೆ ಮಾತಾಡುಲ್ಪಟ್ಟಿರುತ್ತದೆ" (1 ಕೊರಿಂಥ 15:12 ಇತ್ಯಾದಿ) (n. 69). [17]Walter W. Wessel, Notes on Romans, *The NIV Study Bible*, ed. Kenneth Barker (Grand Rapids, Mich.: Zondervan Publishing House, 1985), 1723. [18]William Hendriksen, *Exposition of Paul's Epistle to the Romans*, New Testament Commentary (Grand Rapids, Mich.: Baker Book House, 1981), 370. [19]ಕೆಲವು ಲೇಖಕರು ಇದನ್ನು "ಸಾಮ್ಯ" ಎಂದು ಕರೆಯುತ್ತಾರೆ, ಇನ್ನು ಕೆಲವರು "ರೂಪಕ ಕಥೆ" ಎಂದು ಕರೆಯಲಿಚ್ಛಿಸುತ್ತಾರೆ. [20]ಪ್ರಾಚೀನ ಬರಹಗಾರರ ಪ್ರಕಾರ, ಮರವನ್ನು ಪುನರುಜ್ಜೀವಿಸಗೊಳಿಸಲು ಮತ್ತು ಕೃಷಿ ಮಾಡಲು ಆಗಾಗ್ಗೆ ಹೀಗೆ ಮಾಡಲಾಗುತ್ತಿತ್ತು.

[21]Morris, 414. [22]*The Analytical Greek Lexicon*, 421. [23]ರೋಮಾ 11:20 ರಲ್ಲಿರುವದಕ್ಕಿಂತಲೂ ರೋಮಾ 12:3ರಲ್ಲಿ "ಉನ್ನತ" ಎಂಬುದಕ್ಕೆ ಬೇರೆ ಪದವು ಉಪಯೋಗಿಸಲ್ಪಟ್ಟಿದೆ, ಆದರೆ ಮೂಲಭೂತ ಬುದ್ಧಿವಾದ ಒಂದೇ ಆಗಿರುತ್ತದೆ. [24]ನಮ್ಮ ಕೈಗಳನ್ನು ಉರಿಯಲ್ಲಿ ಹಾಕದಂತೆ ಬೆಂಕಿಯಿಂದ ದೂರವಿರುವಂತೆ ಮಾಡುವದಕ್ಕೆ ನಮಗೆ ಬಲವಾದ, ಆರೋಗ್ಯಕರವಾದ ಭಯದ ಅಗತ್ಯವಿರುತ್ತದೆ—ಆದರೆ ನಾವು ಬೆಂಕಿಯ ಹತ್ತಿರಕ್ಕೇ ಹೋಗದಂಥ ಭಯವನ್ನು (ಸ್ತಂಭ್ದಗೊಳಿಸುವ ಭಯ) ಹೊಂದಿರುವದು ಅನಾರೋಗ್ಯಕರವಾಗುತ್ತದೆ. [25]ಕ್ರೂಜೆಯು ದೇವರ ಕಾಠಿಣ್ಯತೆಯನ್ನು (ನ್ಯಾಯಕ್ಕೆ) ಪ್ರಸನ್ನಗೊಳಿಸುವದರ ಜೊತೆಗೆ ದೇವರು ಕರುಣೆ (ಪ್ರೀತಿ) ಯನ್ನು ವ್ಯಕ್ತಪಡಿಸಿತು. [26]Wessel, 1723. [27]Douglas J. Moo, *Romans*, The NIV Application Commentary (Grand Rapids, Mich.: Zondervan Publishing House, 2000), 368. [28]Hendriksen, 376. [29]Bruce, 205. [30]ಅಮೆರಿಕದಲ್ಲಾದ ಆರಂಭಿಕ ಪುನಃಸ್ಥಾಪನೆಯ ಚಳುವಳಿಯು ಕೆಲವರಲ್ಲಿ ಅತಿಯಾದ ಆಶಾಭಾವನೆಯನ್ನು ಹುಟ್ಟಿಸಿತ್ತು. ಬಹಳ ದೂರವಲ್ಲದ ಭವಿಷ್ಯಕಾಲದಲ್ಲಿ ಅನ್ಯಜನಾಂಗ ಮತ್ತು ಯೆಹೂದ್ಯರು ಇಬ್ಬರಿಂದಲು ಅಸಂಖ್ಯಾತ ಜನರು ಸುವಾರ್ತೆಯನ್ನು ನಂಬುವರೆಂದು ಅವರು ಸುಲಭವಾಗಿ ನಂಬುವವರಾದರು.

[31]Vine, 424. [32]Hendriksen, 378. [33]ಸಹಸ್ರವರ್ಷಾಡಳಿತದ ಮುಂಚೆ ಯೇಸುವಿನ ಬರೋಣ ಎಂಬ ವಾದದ (premillennialism) ಬಗ್ಗೆ ಹೆಚ್ಚಿನ ಮಾಹಿತಿಗಾಗಿ, ನೋಡಿರಿ David L. Roper, *Revelation 1—11*, Truth for Today Commentary (Searcy, Ark.: Resource Publications, 2002): 14-19. [34]Hendriksen, 379. [35]Morris, 418. [36]Jim McGuiggan, *The Book of Romans*, Looking Into The Bible Series (Lubbock, Tex.: Montex Publishing Co., 1982), 286-87. [37]ಕೆಲವು ತರ್ಜುಮೆಗಳು ರೋಮಾ 11:12 ಮತ್ತು 11:25 ಎರಡರಲ್ಲೂ "ಪೂರ್ಣ ಸಂಖ್ಯೆ" ಎಂದು ಹೊಂದಿರುತ್ತವೆ, ಆದರೆ ಅವುಗಳು ನಿಮಯ ಎಂಬುದಕ್ಕಿಂತಲೂ ಒಂದು ಹೊರತುಪಡಿಸುವಿಕೆ ಆಗಿವೆ. [38]*Plērōma* ಕುರಿತಾಗಿ ಇನ್ನೊಂದು ಅಥವಾ ಎರಡು ಆಲೋಚನೆಗಳು ಇದ್ದರೆ ಸಹಾಯಕವಾಗುತ್ತದೆ. *Plērōmaದ* ನಾಮಪದ ಹಾಗೂ ಕ್ರಿಯಾಪದ ರೂಪಗಳು ರೋಮಾಪುರದವರಿಗೆ ಪತ್ರಿಕೆಯುದ್ದಕ್ಕೂ ಉಪಯೋಗಿಸಲ್ಪಟ್ಟಿವೆ (ಉದಾಹರಣೆಗೆ, ನೋಡಿರಿ 1:29; 8:4; 13:8, 10; 15:13, 14, 29), ಮತ್ತು "ಇಂಥಿಂಥ ಸಂಖ್ಯೆ" ಅಥವಾ "ಒಂದು ನಿರ್ಧರಿತ ಸಂಖ್ಯೆ" ಎಂಬ ಭಾವನೆಯು ಇವ್ಯಾವುಗಳಲ್ಲಿಯೂ ಅಡಕವಾಗಿರುವದಿಲ್ಲ. ಹೇಗೂ, ಕೆಲವು ಬರಹಗಾರರು "ರಕ್ಷಿಸಲ್ಪಡಲಿರುವವರ ಪೂರ್ಣ ಸಂಖ್ಯೆ" ಎಂಬ ಅರ್ಥಬರುವ ರೀತಿಯಲ್ಲಿ *plērōma*ವನ್ನು ಉಪಯೋಗಿಸುತ್ತಾರೆ, ಈ ಒತ್ತು ಕೊಡುವ ಮೂಲಕ: "ದೇವರು ರಕ್ಷಿಸಲ್ಪಡಬೇಕಾದ ಪ್ರತಿಯೊಬ್ಬರನ್ನೂ ರಕ್ಷಿಸುವನು; ಆತನು ಒಬ್ಬನನ್ನೂ ತಪ್ಪುವದಕ್ಕೆ ಬಿಡುವದಿಲ್ಲ." ನಮಗೆ ಈ ಜಾತಿವಿಶಿಷ್ಟವಾದ ಬಗ್ಗೆ ಸಮಸ್ಯೆಯಿಲ್ಲ, ಇದು *plērōma* ಎಂಬುದನ್ನು ಅರ್ಥೈಸುವ ಅವಿವಾದಿತ ದಾರಿಯಾಗಿರುತ್ತದೆ. [39]C. G. Wilke and Wilibald Grimm, *A Greek-English Lexicon of the New Testament*, trans. and rev. Joseph Henry Thayer (Edinburgh: T. & T. Clark, 1901; reprint, Grand Rapids, Mich.: Baker Book House, 1977), 468. NCV ಯಲ್ಲಿ "ಆ ರೀತಿತಾಗಿ" ಎಂದಿದ್ದರೆ, SEB ಮತ್ತು McCord ತರ್ಜುಮೆಗಳಲ್ಲಿ "ಈ ವಿಧದಲ್ಲಿ" ಎಂದಿರುತ್ತದೆ. [40]Bruce, 209; Morris, 420.

[41]John R. W. Stott, *The Message of Romans: God's Good News for the World*, The Bible Speaks Today (Downers Grove, Ill.: InterVarsity Press, 1994), 304 (emphasis added). [42]Moo, 385. [43]ರೋಮಾ 11:20ರಲ್ಲಿ, ಯೆಹೂದ್ಯರು *ಅಪನಂಬಿಕೆಯ* ಕಾರಣದಿಂದ ದೇವರ ಆಶೀರ್ವಾದಗಳಿಂದ ಹೊರಗಿಡಲ್ಪಟ್ಟಿದ್ದರು ಎಂಬುದನ್ನು ಪೌಲನು ಒತ್ತಿ ಹೇಳುತ್ತಾನೆ. ಇಲ್ಲಿ ಅದಕ್ಕೆ ಕಾರಣ *ಅವಿಧೇಯತೆ* ಎಂಬದಾಗಿ ಅಪೊಸ್ತಲನು ಹೇಳುತ್ತಾನೆ. ಮತ್ತೊಂದಾವರ್ತಿ, ಪೌಲನು ನಂಬಿಕೆ ಮತ್ತು ವಿಧೇಯತೆಯ ಭಾವನೆಗಳನ್ನು ಪರ್ಯಾಯವಾಗಿ ಉಪಯೋಗಿಸಿದನು. [44]Ronald F. Youngblood, ed., *Nelson's New Illustrated Bible Dictionary* (Nashville: Nelson, 1995), 822. [45]Hendriksen, 385. [46]Stott, 307. [47]Moo, 291. [48]"ಜ್ಞಾನ" ಮತ್ತು "ವಿವೇಕ" ನಡುವಿನ ವ್ಯತ್ಯಾಸದ ಕುರಿತು ಅನೇಕ

ಮಾತುಗಳು ಬರೆಯಲ್ಪಟ್ಟಿವೆ. ಇದರ ಬಗ್ಗೆ ಯೋಚಿಸಬಹುದಾದ ಒಂದು ಸರಳ ವಿಧವೆಂದರೆ "ವಿವೇಕ"ವು ವಸ್ತವಾಂಶಗಳನ್ನು ತಿಳಿದುಕೊಳ್ಳುವದಕ್ಕೆ ಸಂಬಂಧಿಸಿದ್ದಾದರೆ, "ಜ್ಞಾನ"ವು ಹೆಚ್ಚಾಗಿ "ಸಾಮಾನ್ಯ ಪರಿಜ್ಞಾನ"ಕ್ಕೆ ಸಂಬಂಧಿಸಿದ್ದಾಗಿದೆ. [49]Morris, 427 (ಒತ್ತಿ ಹೇಳಿದ್ದು ನನ್ನದು). [50]Ibid., 429.

[51]Moo, 302. [52]R. C. Bell, *Studies in Romans* (Austin, Tex.: Firm Foundation Publishing House, 1957), 121. [53]Richard A. Batey, *The Letter of Paul to the Romans*, The Living Word Commentary (Austin, Tex.: R. B. Sweet Co., 1969), 133-34. [54]ದುರಂತಕರವಾಗಿ, ಕೆಲವರು ಹೃದಯದಲ್ಲಿ ಎಷ್ಟೊಂದು ಕಠಿಣರಾಗುತ್ತಾರೆಂದರೆ "ಅವರನ್ನು ಪುನಃ ಪಶ್ಚಾತ್ತಾಪಕ್ಕೆ ನಡಿಸುವಂತೆ ಪುನರುಜ್ಜೀವನಗೊಳಿಸುವದು ಅಸಾಧ್ಯವಾಗುತ್ತದೆ" (ಇಬ್ರಿಯ 6:6) ಹೇಗಿದ್ದರೂ, ದೇವರು ಅವರ ವಿಷಯದಲ್ಲಿ ಚಿಂತೆಯುಳ್ಳವನಾಗಿಯೇ ಉಳಿಯುತ್ತಾನೆ (2 ಪೇತ್ರ 3:9). [55]ನೋಡಿರಿ ಯೋಬ 1:18, 19. [56]Larry Deason, *"The Righteousness of God": An Indepth Study of Romans*, rev. ed. (Clifton Park, N.Y.: Life Communications, 1989), 265-66. [57]ಪೌಲನು ಪತ್ರಿಕೆಯನ್ನು ಬರೆಯುವದಕ್ಕೆ ಇದೇ ಪ್ರಾಥಮಿಕ ಕಾರಣವಾಗಿತ್ತೆಂಬದಾಗಿ ಕೆಲವರು ದೃಢವಾಗಿ ಮನವರಿಕೆಗೊಂಡಿದ್ದಾರೆ. [58]William Barkley; quoted in Robert J. Morgan, *Nelson's Complete Book of Stories, Illustrations, & Quotes* (Nashville: Thomas Nelson Publishers, 2000), 633. [59]C. S. Lewis, *Mere Christianity* (New York: Macmillan Co., 1952), 108-9. [60]The NASBಯಲ್ಲಿ "ನಾಶನಕ್ಕೆ ಮುನ್ನ ಗರ್ವ, ಮತ್ತು ಮುಗ್ಗರಿಸುವದಕ್ಕೆ ಮುನ್ನ ಜಂಭದ ಮನಸ್ಸು" ಎಂದಿರುತ್ತದೆ.

[61]Isaac Watts, "When I Survey the Wondrous Cross," *Songs of Faith and Praise*, comp. and ed. Alton H. Howard (West Monroe, La.: Howard Publishing Co., 1994). [62]Morris, 399. [63]McGuiggan, 317. [64]ಆದಿಕಾಂಡ 17:8 ವಚನವು ದೇಶ "ಶಾಶ್ವತ ಸ್ವಾಸ್ತ್ಯ" ವಾಗಿ ಕೊಡಲ್ಪಡುವದು ಎಂಬದಾಗಿ ಹೇಳುತ್ತದೆ. ಕೆಲವರು "ಶಾಶ್ವತ" (עוֹלָם, *'olam*) ಎಂಬುದರ ಅರ್ಥವು ಆ ಮಾತುಗಳು ಈ ದಿನಕ್ಕೂ ಅನ್ವಯವಾಗುತ್ತವೆಂದಾಗಬೇಕಲ್ಲವೇ ಎಂದು ವಾದಿಸುತ್ತಾರೆ, ಆದರೆ "ಶಾಶ್ವತ" ಎಂಬುದು "ಯುಗದ ಸಮಾಪ್ತಿ" ಎಂಬ ಅರ್ಥವನ್ನು ಕೊಡಬಲ್ಲದು. ಸಬ್ಬತ್ ದಿನ (*ಏಳನೆಯ*–ದಿನ) ಅನುಸರಿಸುವದನ್ನು "ಒಂದು ಶಾಶ್ವತ ಒಡಂಬಡಿಕೆ" ಎಂದು ಕರೆಯಲಾಗುತ್ತಿತ್ತು (ಯಾಜಕಕಾಂಡ 24:8); ಆದರೆ ಹೊಸ ಒಡಂಡಬಡಿಕೆಯಲ್ಲಿ, ಕ್ರೈಸ್ತರ "ವಿಶೇಷ" ದಿನವು ವಾರದ *ಮೊದಲನೆಯ* ದಿನವಾಗಿದೆ (ಅಪೊಸ್ತಲರ ಕೃತ್ಯಗಳು 20:7). [65]ದಾವೀದನ ಮತ್ತು ಸೊಲೊಮೋನನ ರಾಜ್ಯವು "ನದಿ" ಯ ವರೆಗೂ, ಅಂದರೆ ಯೂಫ್ರೇಟೀಸ್ ವರೆಗೂ ವಿಸ್ತರಿಸಿತ್ತು (2 ಸಮು 8:3; 1 ಅರಸು 4:1, 24). [66]ಇಸ್ರಾಯೇಲ್ಯರು ತಾವು ದೇವರ ಸಂಗಡ ಮಾಡಿದ ನಿಬಂಧನೆಯನ್ನು ಮೀರುವದಾದರೆ (ಅವರು ಮೀರಿದರಷ್ಟೆ), ಕೊಡಲ್ಪಟ್ಟ "ದೇಶದಿಂದ ತೆಗೆದುಹಾಕಲ್ಪಟ್ಟು ಬೇಗನೆ ನಾಶವಾದೀರಿ" ಎಂದು ಯೆಹೋಶುವನು ಅವರನ್ನು ಎಚ್ಚರಿಸಿದನು (ಯೆಹೋಶುವ 23:15, 16).